# ಗುರುದೇವ ರಾನಡೆ

## ಜೀವನ ದರ್ಶನ



ಮರಾಠಿ ಮೂಲ

**ದಾದಾಸಾಹೇಬ ದೇಶಪಾಂಡೆ**

ಕನ್ನಡಕ್ಕೆ

**ಚಂದ್ರಕಾಂತ ಪೋಕಳೆ**

**Academy of Comparative Philosophy & Religion**
**Hindwadi, Belagavi.**

# ಗುರುದೇವ ರಾನಡೆ

## ಜೀವನ ದರ್ಶನ

ಮರಾಠಿ ಮೂಲ

**ದಾದಾಸಾಹೇಬ ದೇಶಪಾಂಡೆ**

ಕನ್ನಡಕ್ಕೆ

**ಚಂದ್ರಕಾಂತ ಪೋಕಳೆ**

ಗುರುದೇವ ರಾನಡೆ : ಜೀವನ ದರ್ಶನ

**GURUDEV RANADE : JEEVAN DARSHAN**

By : **Dadasaheb Deshpande, Chandoor**

First edition : 2019

Traslation by : **Prof. Chandrakant Pokale**

Published by : **Academy of Comparative Philosophy & Religion**
Hindwadi, Belagavi-590 011.
Phone : (0831) 2467231. Cell : 09972174330
www.acprbgm.org e-mail: info@acprbgm.org

© : **ACPR**

Size : 1/8th Demi

Paper : 80 GSM NSML

Pages : XVI+84

Price : Rs. 200/-

Printers : Impressions, Bgm
B-2 Akshar Arcade,
3360/4, Gondhali Galli Cross Road,
BELGAUM - 590 002
✆ : 0831-2421232

# ನಲ್ನುಡಿ

ಶ್ರೀ ಗುರುದೇವ ರಾನಡೆಯವರು ಲಕ್ಷಾಂತರ ಜನರ ಮನವನರಳಿಸಿದರು. ಅವರ ಅಂತರಂಗದಲ್ಲಿ ಜಿಜ್ಞಾಸೆಯ ದೀಪ ಹೊತ್ತಿಸಿದರು. ಅವರನ್ನೆಲ್ಲ ದೇವ–ಧ್ಯಾನಮಾರ್ಗದಲ್ಲಿ ನಡೆಸಿದರು. ಎಂತಲೇ ಅವರನ್ನು ಸಾಧಕಜಗತ್ತು "ಗುರುದೇವ" ಎಂದು ಗೌರವಿಸಿತು.

ಅವರ ಬದುಕು ಪವಿತ್ರ, ಮೋಹಮುಕ್ತ ಹಾಗೂ ಸುನಿರ್ಮಲ ಅವರು ಗುರುಭಕ್ತಿ ಸಂಪನ್ನರು; ತತ್ತ್ವಜ್ಞಾನಿಗಳು; ಸಮನ್ವಯ ಸಿದ್ಧಾಂತದ ಹೊಳಹನಿತ್ತ ದಾರ್ಶನಿಕರು; ಧ್ಯಾನ–ಸಮಾಧಿ ಸಾಧನೆಯ ಮೂಲಕ ದೇವ ಸಾಕ್ಷಾತ್ಕಾರ ಹೊಂದಿದ ಅನುಭಾವಿಗಳು.

ಅವರ ಬದುಕನ್ನು ಯಥಾವತ್ತಾಗಿ ಚಿತ್ರಿಸುವ ಸುಂದರ ಕೃತಿ ಈ 'ಜೀವನ ದರ್ಶನ' ಹೊತ್ತಿಗೆ, ಸರಲ ಭಾಷೆ, ಆಪ್ಯಾಯಮಾನ ಕಥನ. ಮನಮುಟ್ಟುವ ಘಟನೆಗಳು, ಆಧ್ಯಾತ್ಮ ಸಾಧಕರಿಗೆ ಪ್ರೇರಕ ಈ ಕೃತಿ. ಅತ್ಯುಪಯುಕ್ತವಾದ ಈ ಕೃತಿಯನ್ನು ಮರಾಠಿಯಲ್ಲಿ ರೂಪಿಸಿದ ಶ್ರೀ ದಾದಾಸಾಹೇಬ್ ದೇಶಪಾಂಡೆ, (ಚಂದೂರ) ಇವರು ಹಾಗೂ ಅದನ್ನು ತಿಳಿಗನ್ನಡಕ್ಕೆ ಯಥಾವತ್ತಾಗಿ ತಂದ ಹಿರಿಯ ಸಾಹಿತಿ ಪ್ರೊ॥ ಚಂದ್ರಕಾಂತ ಪೋಕಳೆ ಅವರು ಅಭಿನಂದನಾರ್ಹರು. ಇಂಥ ಗ್ರಂಥಗಳನ್ನು ಸುಂದರವಾಗಿ ಮುದ್ರಿಸಿ, ಸಾಧಕ ಓದುಗರ ಕೈಯಲ್ಲಿಡುತ್ತಿರುವ ಶ್ರೀ ಗುರುದೇವ ಮಂದಿರದ ಹಿರಿಯರ ಕಾರ್ಯ ಪ್ರಶಂಸನೀಯ.

ಶಿವರಾತ್ರಿ — **ಪರಮಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳು**

೨೦೧೯ — **ಜ್ಞಾನಯೋಗಾಶ್ರಮ, ವಿಜಯಪುರ**

# ಪ್ರಸ್ತಾವನೆ

(ಒಂದನೇ ಆವೃತ್ತಿ)

"ಈ ವಿಶ್ವದಲ್ಲಿ ಸುತ್ತಲಿನ ವ್ಯಕ್ತಿಗಳಿಗಿಂತ ಏನಾದರೂ ವಿಶೇಷ ಉಜ್ವಲವಿರುವುದೋ, ಅಂಥ ವ್ಯಕ್ತಿಯಲ್ಲಿ ನನ್ನ (ದೇವರ) ತೇಜಸ್ಸು ಇರುತ್ತದೆ" ಎಂದು ಭಗವದ್ಗೀತೆಯಲ್ಲಿ (೧೦–೪೧) ಹೇಳಲಾಗಿದೆ. ಅಂಥವರಿಂದ ಸಮಾಜದಲ್ಲಿರುವ ಅಸಂಖ್ಯ ಜನರಿಗೆ ಮಾರ್ಗದರ್ಶನ ಲಭಿಸುತ್ತದೆ. ಅವರ ದೈನಂದಿನ ಜೀವನದಲ್ಲಿರುವ ದುಃಖದಲ್ಲೂ ಉನ್ನತ ದರ್ಜೆಯ ಸಂತೋಷವನ್ನು ಅನುಭವಿಸಬಹುದಾಗಿದೆ. ಮನಸ್ಸೂ ಸಹ ಅಷ್ಟೇ ಎತ್ತರದ ಪಾತಳಿಗೆ ಹೋಗಿ ತಲುಪುತ್ತದೆ.

'ಧರ್ಮಸ್ಥಾಪನೆಯ ವರ' ಇದು ದೇವರ ವರಪ್ರಸಾದವಾಗಿದೆ– ಎಂದು ಶ್ರೀ ಸಮರ್ಥ ರಾಮದಾಸರು ಹೇಳುತ್ತಾರೆ. ಇಂಥ ಮಹಾನುಭಾವರು ಜಗತ್ತಿನಲ್ಲಿ ಆಗಾಗ ಜನಿಸುತ್ತಲೇ ಇರುತ್ತಾರೆ. ಅಂಥವರಲ್ಲಿ ಒಬ್ಬವರೆಂದರೆ ಕೈ. ಗುರುದೇವ ಡಾ.ರಾಮಭಾವು ರಾನಡೆಯವರು ಒಬ್ಬರು. ಅವರು ಶ್ರೀ ರೇವಣಸಿದ್ಧರಿಂದ ಉಗಮಗೊಂಡ ಮತ್ತು ಶ್ರೀ ನಿಂಬರಗಿ ಮಹಾರಾಜರಿಂದ ಪೋಷಿಸಲ್ಪಟ್ಟ ಭಕ್ತಿಸಂಪ್ರದಾಯದಿಂದ ಸ್ಫೂರ್ತಿ ಹಾಗೂ ಮಾರ್ಗದರ್ಶನವನ್ನು ಪಡೆದು ಅವರು ತಮ್ಮ ತೀಕ್ಷ್ಣಬುದ್ಧಿ ಮತ್ತು ಉಜ್ವಲ ಆಚರಣೆಯಿಂದ ಅಸಂಖ್ಯಾತರಿಗೆ ಮಾರ್ಗದರ್ಶನ ಮಾಡಿದರು. ಅವರು ಭಕ್ತಿಪಥದ ಹಾದಿ ತೋರಿಸಿದರು. ಗುರುದೇವ ರಾಮಭಾವುರವರು ಪಾಶ್ಚಾತ್ಯ–ಪೌರಾತ್ಯ ಎರಡೂ ತತ್ವಜ್ಞಾನದಲ್ಲಿ ಆಳವಾದ, ತಲಸ್ಪರ್ಶಿಯಾದ ಅಧ್ಯಯನವನ್ನು ಕೈಕೊಂಡರು. ಶ್ರೀಗುರುಕೃಪೆಯಿಂದ ಅವರಿಗೆ ಸ್ವರೂಪ ಸಾಕ್ಷಾತ್ಕಾರವಾಗಿರುವುದರಿಂದ ಅವರ ಬರವಣಿಗೆಯಲ್ಲಿ ಆಳವಾದ, ಅಷ್ಟೇ ತರ್ಕಬದ್ಧವಾದ, ತೌಲನಿಕ ವಿವೇಚನೆಯಿತ್ತು. ಅಷ್ಟೇ ಖಚಿತತೆಯಿತ್ತು. ಅವರು ರಚಿಸಿದ ಗ್ರೀಕ್ ತತ್ವಜ್ಞಾನದ ವಿವೇಚನೆ, ಉಪನಿಷತ್ತು ಮತ್ತು ಮಹಾರಾಷ್ಟ್ರ ಹಾಗೂ ಹಿಂದಿ ಸಂತರ ಅನುಭಾವ ಮಾರ್ಗ ಮುಂತಾದ ಗ್ರಂಥಗಳು ಶ್ರೇಷ್ಠದರ್ಜೆಯವು ಆಗಿವೆ. ಅವರ ದೇಹ ಎಷ್ಟು ಸಣಕಲಾಗಿದ್ದರೂ, ಅವರ ಬರಹವು ಮಾತ್ರ ಆಳವೂ, ಮೂಲಗಾಮಿಯೂ ಆಗಿದೆ. ಅವರ ಬುದ್ಧಿ ಪ್ರಖರವಾಗಿದೆ. ಮೆಟ್ರಿಕ್ ಹಾಗೂ ಕಾಲೇಜಿನಲ್ಲಿದ್ದಾಗ ಅವರು ಸಂಸ್ಕೃತ ಭಾಷೆಯ ಪ್ರಶಸ್ತಿಯನ್ನು ಪಡೆದರು. ಬಿ.ಎ.ದಲ್ಲಿದ್ದಾಗ ಗಣಿತದಲ್ಲಿ ಪ್ರಾವೀಣ್ಯತೆ ಗಳಿಸಿದರು. ಕಾಲೇಜಿನಲ್ಲಿ ಅವರು ಆಂಗ್ಲಭಾಷೆಯ ಅಧ್ಯಾಪನವನ್ನು ಮಾಡುತ್ತಿದ್ದರು. ಎಂ.ಎ. ತತ್ವಜ್ಞಾನದಲ್ಲಿ ಅವರು ಚಾನ್ಸಲರ್ ಪದಕವನ್ನೂ, ಮೊದಲ ಕ್ರಮಾಂಕವನ್ನೂ ಗಳಿಸಿದರು. ಅವರ ನೆನಪಿನ ಶಕ್ತಿಯು ಅದೆಷ್ಟು ಅಗಾಧವಾಗಿತ್ತೆಂದರೆ, ಎಷ್ಟೋ ವರ್ಷಗಳ ಬಳಿಕ ಸಹ ತಮ್ಮ ಹಳೆಯ ವಿದ್ಯಾರ್ಥಿಗಳನ್ನು ತಟ್ಟನೆ ಗುರುತಿಸುತ್ತಿದ್ದರು. ಅವರು ಕಾಲೇಜಿನಲ್ಲಿದ್ದಾಗ ಬರೆದ ನಿಬಂಧಗಳು ವಿದ್ವಾಂಸರಿಗೂ ಮಾರ್ಗದರ್ಶನ

ಮಾಡುವಂತಿದ್ದವು. ಇಂಥ ಅಪಾರ ವಿದ್ವತ್ತನ್ನು ಪಡೆದರೂ, ಶ್ರೀ ಸದ್ಗುರುವಿನ ಬಗೆಗೆ ಅಷ್ಟೇ ಶ್ರದ್ಧೆಯಿತ್ತು. ಅವರು ಸದ್ಗುರುವಿನ ಪಾದದಲ್ಲಿ ಲೀನವಾಗುವ ಪರಿಯನ್ನು ಕಂಡರೆ ಬೆರಗಾಗದೇ ಇರದು. ಅವರು ಸದಾಕಾಲ ಪರರಿಗೆ ಪ್ರೋತ್ಸಾಹವನ್ನು ನೀಡುತ್ತಲೇ ಇರುತ್ತಿದ್ದರು. ಅವರ ನಡತೆ ತೀರ ಸರಳವಾಗಿತ್ತು. ಅವರ ಮೇಲೆ ಹಲವು ಬಗೆಯ ಆದಿಭೌತಿಕ ಆಘಾತವಾದಾಗ ಎಂದೂ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಂಡವರಲ್ಲ. ಶ್ರೀಗುರುವಿನ ಮೇಲಿನ ನಂಬಿಕೆಯನ್ನು ಕದಡಲು ಅವಕಾಶ ನೀಡಿದವರಲ್ಲ. ಸಾಧನೆ ಎಂದೂ ಭಗ್ನವಾಗಲು ಬಿಡಲಿಲ್ಲ. ಬದಲು ಸಂಕಟ ಹೆಚ್ಚು ಹೆಚ್ಚು ಆದಂತೆಲ್ಲ ಅವರು ಶ್ರೀಗುರುವಿನತ್ತ, ದೇವರತ್ತ ಮತ್ತಷ್ಟು ಆಕರ್ಷಿತರಾದರು. ಅವರು ಹಲವು ಬಗೆಯ ವ್ಯವಸಾಯವನ್ನು ಕೈಕೊಂಡರೂ, ಸ್ವರೂಪಾನುಸಂಧಾನವನ್ನು ಸತತ ಮುಂದುವರಿಸಿಕೊಂಡು ಹೋದರು.

ಇಂಥ ಮಹಾಪುರುಷನ ಜೀವನ, ಕಾರ್ಯ, ತತ್ವಜ್ಞಾನವನ್ನು ಅಷ್ಟೇ ಸಹೃದಯತೆಯಿಂದ ಈ ಗ್ರಂಥದಲ್ಲಿ ಶ್ರೀ ದಾದಾಸಾಹೇಬರು ಚಿತ್ರಿಸಿದ್ದಾರೆ. ಈ ಲೇಖಕರು ಹಲವು ವರ್ಷ ಗುರುದೇವ ರಾನಡೆಯವರ ನಿಕಟವರ್ತಿಗಳಾಗಿದ್ದರು. ಅವರು ಗುರುದೇವರನ್ನು ಸನಿಹದಿಂದ ನೋಡಿದ್ದಾರೆ. ಅವರ ವಚನಾಮೃತವನ್ನು ಸವಿದಿದ್ದಾರೆ. ಅವರ ಬೋಧನೆಯನ್ನು ಆತ್ಮಸಾತ್ ಮಾಡಿಕೊಂಡಿದ್ದಾರೆ. ಅವರ ಅಪರೂಪದ ಹಲವು ನೆನಪುಗಳನ್ನು ಜತನವಾಗಿಟ್ಟುಕೊಂಡು, ತಮ್ಮ ಜೀವನದ ಒಂದು ಆದರ್ಶವೆಂದು ಅವರ ಸೇವೆಯನ್ನು ಮಾಡಿದ್ದಾರೆ. ಅವರು ಗುರುದೇವರ ಚರಿತ್ರೆ ಹಾಗೂ ಬೋಧನೆಗೆ ಸಂಬಂಧಿಸಿದಂತೆ ಇಲ್ಲಿಯ ಶ್ರೀ ಅಧ್ಯಾತ್ಮ ಮಂದಿರದ ವತಿಯಿಂದ ಹತ್ತು ಪ್ರವಚನಗಳನ್ನು ನೀಡಿದರು. ಅದೆಷ್ಟು ಪ್ರಭಾವಶಾಲಿಯಾಗಿತ್ತೆಂದರೆ, ಶ್ರೋತೃಗಳಿಗೆ ಅದರಿಂದ ಹಲವು ಬಗೆಯ ಲಾಭವೇ ಆಯಿತು. ಅದೇ ಪ್ರವಚನಗಳನ್ನು ಮತ್ತಷ್ಟು ವಿಸ್ತರಿಸಿ ಪ್ರಸ್ತುತ ಗ್ರಂಥವನ್ನು ರಚಿಸಿದ್ದಾರೆ.

ಈ ಗ್ರಂಥದಲ್ಲಿ ಗುರುದೇವ ರಾನಡೆಯವರ ಚರಿತ್ರೆಯಲ್ಲಿ ಬೇರೆ ಬೇರೆ ವಿಭಾಗ ಮಡಿ, ಅವರು ಬಾಲ್ಯದಿಂದ ಸಾಧಿಸಿದ ಪ್ರಗತಿಯು ಶ್ರೀಗುರುಕೃಪೆಯಿಂದ ಬೆಳಗಿ, ಅದರ ತೇಜಸ್ಸು ನಾಲ್ದೆಸೆಗೂ ಹೇಗೆ ಹರಡಿತು ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಗುರುದೇವ ರಾನಡೆಯವರಿಗೆ ತಮ್ಮ ಮಹಾಮಾತೆಯಿಂದ ದೇವರ ನಿಷ್ಠೆಯ ಸಂಪತ್ತು ಪ್ರಾಪ್ತವಾಯಿತು. ಬಾಲ್ಯದಲ್ಲಿ ಶ್ರೀ ಭಾವುಸಾಹೇಬ ಮಹಾರಾಜರಂಥ ಸಾಕ್ಷಾತ್ಕಾರಿ ಪುರುಷರ ಅನುಗ್ರಹ ಸಿಕ್ಕಿದ್ದರಿಂದ ಹಾಲಿಗೆ ಸಕ್ಕರೆ ಬೆರೆಸಿದಂತಾಯಿತು. ಬಳಿಕ ಕಠೋರವಾದ ನಾಮರೂಪಿ ತಪದಿಂದ ಹಾಲಿನ ಬಾಸುಂದಿ ಸಿದ್ಧಪಡಿಸಿದರು. ಅದರಲ್ಲಿ ಪಾಶ್ಚಾತ್ಯ–ಪೌರಾತ್ಯ ತತ್ವಜ್ಞಾನದ ಕೇಸರಿ, ಏಲಕ್ಕಿಯನ್ನು ಮಿಶ್ರಣ ಮಾಡಿದ್ದರಿಂದ ಆದರ ರುಚಿ ಮತ್ತಷ್ಟು ಹೆಚ್ಚಾಯಿತು. ಇದರಿಂದಾಗಿ ಭಕ್ತಗಣದವರ, ಸಾಧಕರ ಸಂಖ್ಯೆ ಬೆಳೆಯಿತು. ಗುರುದೇವ ರಾನಡೆಯವರು ಕಾಲೇಜಿನಲ್ಲಿದ್ದಾಗಲೇ ಅವರ ಪ್ರಖರ ಬುದ್ಧಿ ಕಂಡು ಸಹಪಾಠಿಗಳು, ಗುರುಜನರು ದಿಙ್ಮೂಢರಾಗಿದ್ದರು. ಅವರು

ಆಗ ಬರೆದ ನಿಬಂಧ ಸಹ ಸಂಶೋಧನೆಯ ಮಾದರಿಯಲ್ಲಿತ್ತು. ಇಷ್ಟಿದ್ದರೂ ಅವರು ತೀರ ಪರಙ್ಮುಖಿಯೂ ಆಗಿದ್ದರು. ಕಿಂಚಿತ್ತೂ ಅಹಂಕಾರವಿರಲಿಲ್ಲ. ಎಲ್ಲ ಸಂಗತಿಗಳು ಶ್ರೀ ಸದ್ಗುರು ಕೃಪೆಯಿಂದಲೇ ಆಗುತ್ತಿರುತ್ತದೆ ಎಂಬ ಭಾವನೆ ಅವರದ್ದಾಗಿತ್ತು. ಸದ್ಗುರುವೇ ನಿಜವಾದ ಆಧಾರ ಎನ್ನುವುದು ಅವರ ದೃಢನಿಷ್ಠೆಯಾಗಿತ್ತು. ಈ ಎಲ್ಲ ಸಂಗತಿಗಳ ಮೇಲೆ ಈ ಗ್ರಂಥದಲ್ಲಿ ಬೆಳಕು ಚೆಲ್ಲಲಾಗಿದೆ.

ಶ್ರೀಗುರುದೇವರ ವ್ಯಕ್ತಿತ್ವ ವಿಕಾಸದ ವಿವರವೂ ಇಲ್ಲಿದೆ. ಅವರಿಗೆ ಬಾಲ್ಯದಲ್ಲೇ ಗುರೂಪದೇಶ ಲಭಿಸಿತ್ತು. ಆದರೆ ಸದಾಕಾಲ ಅನಾರೋಗ್ಯ ಕಾಡುತ್ತಿತ್ತು. ಆದರೂ ಬುದ್ಧಿ ಚುರುಕಾಗಿತ್ತು. ಪ್ರತಿಯೊಂದು ಕೆಲಸವನ್ನು ಏಕನಿಷ್ಠೆಯಿಂದ ಮಾಡುವ ಸ್ವಭಾವ ಅವರದ್ದಾಗಿರುವುದರಿಂದ ವಿದ್ಯಾರ್ಥಿ ದಿಶೆಯಲ್ಲಿ ಸತತ ಯಶಸ್ಸು ಪ್ರಾಪ್ತವಾಯಿತು. ಅವರ ಭಾವೀ ದೊಡ್ಡಸ್ತಿಕೆಯ ಬಗೆಗೆ ಅವರ ಸದ್ಗುರು ಮೊದಲೇ ಮುನ್ಸೂಚನೆಯನ್ನು ನೀಡಿದ್ದರು. ಗುರುಕೃಪೆಯಿಂದಲೇ ಅವರ ಆರೋಗ್ಯ ಸುಧಾರಿಸುತ್ತಿತ್ತು. ಇದರಿಂದ ಅವರ ಚಿತ್ತವು ಶ್ರೀಗುರು ಚರಣದ ಕಡೆಗ ಅಧಿಕ ಉತ್ಕಟತೆಯಿಂದ ಆಕರ್ಷಿತಗೊಂಡಿತು. ಅವರ ಕನಸು ಹಾಗೂ ಜಾಗೃತಾವಸ್ಥೆಯಲ್ಲಿ ಶ್ರೀಗುರುಗಳು ಹೇಳಿದ ಹಲವು ಘಟನೆಗಳು ಅನುಭವಕ್ಕೆ ಬಂದವು. ದೃಷ್ಟಾಂತವಾಗಿದ್ದರಿಂದ ಸಂತ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಲಾರಂಭಿಸಿದರು. ಅಲ್ಲಿಯ ಸಂಗತಿಗಳನ್ನು ತಮ್ಮ ಸ್ವಂತ ಜೀವನದೊಂದಿಗೆ ಹೋಲಿಸಿ ನೋಡಲಾರಂಭಿಸಿದರು. ಉಪನಿಷತ್ತು ಋಷಿಮುನಿಗಳಿಗೆ ಅಗ್ನಿ ಹಾಗೂ ವೃಷಭದಿಂದ ಭಾವ ಪ್ರಾಪ್ತವಾಗುತ್ತಿತ್ತು. ಬಾಹ್ಯ ಪ್ರಸಂಗಗಳಿಂದ ಶ್ರೀ ಅವಧೂತರಿಗೆ ಜ್ಞಾನಗ್ರಹಣವಾಗುವಂತೆ, ಗುರುದೇವರ ರಾನಡೆಯವರಿಗೆ ಕ್ರಿಕೇಟ್ ಆಟ ನೋಡುವಾಗ ವಿಶ್ವದ ಕೇಂದ್ರದ ಬಗೆಗೆ ಸಾಕ್ಷಾತ್ಕಾರವಾಯಿತು. ಶ್ರೀಶಂಕರಾಚಾರ್ಯರಂತಹ ತರ್ಕಬುದ್ಧಿಯವರಿಗೂ ಸಹ ದೇವರ ಭಕ್ತಿಯಲ್ಲಿ ತಲ್ಲೀನರಾಗುವುದು ಕಂಡು, ಅವರು ಶಾಂಕರಗ್ರಂಥವನ್ನು ಆಳವಾಗಿ ಅಧ್ಯಯನ ಕೈಕೊಂಡರು. ಅವರು ಉಪನಿಷತ್ತನ್ನೂ ಓದಿದರು. ತತ್ವಜ್ಞಾನದ ತೌಲನಿಕ ಅಧ್ಯಯನಕ್ಕಾಗಿ ಪಾಶ್ಚಾತ್ಯ–ಪೌರಾತ್ಯ ತತ್ವಜ್ಞಾನವನ್ನು ಓದಿ, ಅದರಲ್ಲಿರುವ ಸಾಮ್ಯವನ್ನು ಗುರುತಿಸಿದರು. ಅವರಿಗೆ ಶುಷ್ಕಜ್ಞಾನದಿಂದ ಸಮಾಧಾನವಾಗಲಿಲ್ಲ. ಅದನ್ನು ಪ್ರತ್ಯಕ್ಷ ಅನುಭವಿಸಬೇಕು. ತಮ್ಮ ಜೀವನದ ಮೇಲೂ ಪ್ರಭಾವ ಬೀರಬೇಕೆಂದು ಅವರು ಬಯಸಿದರು. ಅವರಿಗೆ ಸಾಕ್ಷಾತ್ಕಾರಿ ಪುರುಷರ ಸಾನಿಧ್ಯ ಲಭಿಸಿದ್ದರಿಂದ, ಕೇವಲ ಶಾಬ್ದಿಕ ಜ್ಞಾನದಿಂದ ಅವರಿಗೆ ತೃಪ್ತಿ ಸಿಗುವಂತಿರಲಿಲ್ಲ. ತತ್ವಜ್ಞಾನ ಮತ್ತು ಶ್ರದ್ಧೆ, ಜ್ಞಾನ ಮತ್ತು ಭಕ್ತಿಯ ಪರಸ್ಪರ ವಿರೋಧಿಯಾಗಿರದೆ, ಪೂರಕವಾಗಿವೆ ಎಂಬುದನ್ನು ತಮ್ಮ ಅಧ್ಯಯನ ಹಾಗೂ ಅನುಭವದಿಂದ ಸಾಬೀತು ಮಾಡಿ ತೋರಿಸಿದರು. ಅವರ ಸದ್ಗುರು ಸಮಾಧಿ ಹೊಂದಿದ್ದರೂ ಅವರಿಗೆ ಅವರ ಆಧ್ಯಾತ್ಮಿಕ ಸಾನಿಧ್ಯ ಸದಾಕಾಲ ಲಭಿಸುತ್ತದೆ.

ಆರಂಭಕ್ಕೆ ಅವರು ಡೆಕ್ಕನ್ ಕಾಲೇಜಿನಲ್ಲಿ ಪ್ರಾಧ್ಯಪಕರಾಗಿದ್ದರು. ಮುಂದೆ ಫರ್ಗ್ಯುಸನ್ ಕಾಲೇಜಿನಲ್ಲಿ ಆಜೀವ ಸದಸ್ಯರಾಗಿ ಕಾಯ್ಯ ನಿರ್ವಹಿಸಿದರು. ಈ ನಡುವೆ ಅವರ ಮೇಲೆ

ಕೌಟುಂಬಿಕ ಆಘಾತ ಕುಸಿದು ಬಿತ್ತು. ಮೊದಲು ಏಕಮೇವ ಮಗನನ್ನು ಕಳೆದುಕೊಂಡರು, ಬಳಿಕ ಪ್ರಿಯ ಪತ್ನಿಯ ಹಾಗೂ ಮಹಾಮಾತೆಯ ದೇಹಾವಸಾನವಾಯಿತು. ಈ ವಿಯೋಗದಿಂದ ಕೆಲಕಾಲ ಅನಾರೋಗ್ಯದಿಂದ ಬಳಲುವಂತಾಯಿತು. ಈ ರೀತಿ ಅವರು ತ್ರಿವಿಧ ರೂಪದಿಂದ ಬಳಲಿದ್ದರಿಂದ, ಅವರ ಮನಸ್ಸು ಪಾರಮಾರ್ಥದ ಕಡೆಗೆ ಮತ್ತಷ್ಟು ಹರಿಯಿತು. ಈ ಅಪ್ಪಟ ಬಂಗಾರ ಸಂಸಾರಿಕ ಬೆಂಕಿಯಲ್ಲಿ ಕಾದು ಮತ್ತಷ್ಟು ತೇಜಸ್ವಿ, ಉಜ್ವಲವಾಗಿ ಹೊರಬಂತು. ಅವರನ್ನು ಈ ವಿಷಯದಲ್ಲಿ ತುಕಾರಾಮನೊಂದಿಗೆ ಹೋಲಿಸಬಹುದಾಗಿದೆ. ಆ ಕಾಲದ ಅವರ ಪತ್ರಗಳನ್ನು ಎಲ್ಲರೂ, ಸಾಧಕರಾದವರಂತೂ ಓದಲೇ ಬೇಕಾಗಿರುವಂಥವುಗಳು. ಈ ಪತ್ರಗಳಿಂದಾಗಿ ರಾನಡೆಯವರು ವಿಕಾಸ ಹೊಂದಿರುವುದನ್ನು ಗುರುತಿಸಬಹುದಾಗಿದೆ. ಅನಾರೋಗ್ಯದ ಕಾರಣದಿಂದಾಗಿ ಡಿ.ಇ. ಸೊಸೈಟಿಯ ಕಾರ್ಯದಿಂದ ಬಿಡುಗಡೆ ಹೊಂದಿದರು. ಆದರೆ ಸುಮ್ಮನೆ ಕೂತಿರುವ ಸ್ವಭಾವ ಅವರದ್ದಲ್ಲ. ಹೀಗಾಗಿ ಅವರು 'ತತ್ವಜ್ಞಾನ ಅಕಾಡೆಮಿ'ಯನ್ನು ಆರಂಭಿಸಿದರು. ಜನರಲ್ಲಿ ಜ್ಞಾನ ಪ್ರಸರವಾಗಲೆಂದು ಗ್ರಂಥಗಳ ರಚನೆಯನ್ನು ಕೈಕೊಂಡರು. ಅವರ ಉಜ್ವಲ ಪ್ರತಿಭೆಯ ಬೆಳಕು ಸುತ್ತಲೂ ಪಸರಿಸಿತು. ಮುಂದೆ ಅವರನ್ನು ಅಲಹಾಬಾದ ವಿಶ್ವವಿದ್ಯಾಲಯ ಕರೆಸಿಕೊಂಡಿತು. ನಾಮದೇವನು ಉತ್ತರದಲ್ಲಿ ಭಕ್ತಿಯ ಪ್ರಸಾರ ಕೈಕೊಂಡಂತೆ, ರಾನಡೆಯವರು ಅಲ್ಲಿ ಜ್ಞಾನದ ಪ್ರಸಾರ ಕೈಕೊಂಡು ಹಲವರನ್ನು ಪುನೀತರನ್ನಾಗಿ ಮಾಡಿದರು. ಅಲ್ಲಿ ಅವರು ಹಿಂದಿಯ ಪರಿಚಯದಿಂದ ಮರಾಠಿ ಸಂತರಂತೆ ಹಿಂದಿ ಸಂತರ ಸಾಕ್ಷಾತ್ಕಾರ ಮಾರ್ಗದ ಬಗೆಗೆ ಗ್ರಂಥವನ್ನು ರಚಿಸಿದರು. ಉಪನಿಷತ್ತು, ಭಗವದ್ಗೀತೆಯ ಬಗೆಗೂ ಬರೆದರು. ಅವರು ಸಾಕ್ಷತ್ಕಾರಕ್ಕೆ ಹೆಚ್ಚು ಮಹತ್ವ ನೀಡಿದರು. ಅನುಭವಗಳ ಸಾತತ್ಯ, ಅದರ ಶಾಸ್ತ್ರಶುದ್ಧತೆ ಮತ್ತು ಅದು ಮನುಷ್ಯನ ಸ್ವಭಾವದ ಮೇಲೆ ಬೀರುವ ಪರಿಣಾಮಕ್ಕೆ ರಾನಡೆಯವರು ಮಹತ್ವ ನೀಡಿದ್ದರಿಂದ ಆಧುನಿಕ ಮನುಷ್ಯನಿಗೆ ಇದು ಹೆಚ್ಚು ಉಪಯುಕ್ತವಾಗಿದೆ.

ಅಲಹಾಬಾದದಿಂದ ನಿವೃತ್ತಿ ಹೊಂದಿದ ಬಳಿಕ ಸಾಂಗಲಿಯಲ್ಲಿ 'ಅಧ್ಯಾತ್ಮ ಮಂದಿರ'ವನ್ನು ಸ್ಥಾಪಿಸಿದರು. ಪ್ರತಿವಾರ ಒಬ್ಬ ತಜ್ಞ ವ್ಯಕ್ತಿ ಬಂದು ಪ್ರವಚನವನ್ನು ನೀಡುವುದರಿಂದ ಸಾಧಕರಿಗೆ ಜ್ಞಾನಲಾಭವಾಯಿತು. ಅವರ ಗುರು ಪರಪರೆಯು ಮೂಲತಃ ಕರ್ನಾಟಕದ್ದಾಗಿದ್ದು ಅಲ್ಲಿಯ ಸಂತರ ವಚನಗಳ ಆಳವಾದ ಅಧ್ಯಯನ ಮಾಡಿ ಅದರ ಬಗೆಗೂ ಗ್ರಂಥವನ್ನು ರಚಿಸಿದರು.

ಪ್ರಸ್ತುತ ಗ್ರಂಥದಲ್ಲಿರುವ ಮಾಹಿತಿಯನ್ನು ಶ್ರೀ ದಾದಾಸಾಹೇಬರು ನಿಕಟವರ್ತಿಗಳಿಂದ, ಗೆಳೆಯರಿಂದ, ಸಾಧಕರಿಂದ ಅಧಿಕೃತವಾಗಿ ಸಂಗ್ರಹಿಸಿದ್ದಾರೆ. ಅಲ್ಲದೆ ತಮ್ಮ ಸ್ವಂತ ಅನುಭವವನ್ನು ಇಲ್ಲಿ ಸಾಕಷ್ಟು ಬಳಸಿಕೊಂಡಿದ್ದಾರೆ. ರಾನಡೆಯವರ ಮೂಲಪತ್ರಗಳ ದಾಖಲೆ ನೀಡಿದ್ದರಿಂದ ಗುರುದೇವರ ವ್ಯಕ್ತಿತ್ವದ ಪರಿಚಯವಾಗುತ್ತದೆ. ಗುರುದೇವರು ಡೆಕ್ಕನ್ ಕಾಲೇಜಿನಲ್ಲಿದ್ದಾಗ ಅವರು ತಮ್ಮನ್ನು ಒಬ್ಬ ವಿಕ್ಷಿಪ್ತ ಪ್ರಾಧ್ಯಾಪಕನೆಂದು ಮಾಡಿದ ಶಾಬ್ದಿಕ ಚಿತ್ರವು ಅತ್ಯಂತ ಮನೋಹರವಾಗಿದೆ. ಹಾಗೆಯೇ ಶ್ರೀ ಸದ್ಗುರುಗಳ ಮತ್ತು ಜೇಷ್ಠ ಗುರು ಬಂಧುವಿನ ಪತ್ರಗಳನ್ನು ನೀಡಿದ್ದರಿಂದ ಗ್ರಂಥದ ಮೌಲ್ಯ ಮತ್ತಷ್ಟು ಹೆಚ್ಚಿದೆ.

ಗ್ರಂಥದ ಕೊನೆಯ ಭಾಗವಂತೂ ಶಿಖರಪ್ರಾಯವಾಗಿದೆ. ಅಲ್ಲಿ ಗುರುದೇವರ ಅಮರ ಸಂದೇಶವನ್ನು ನೀಡಲಾಗಿದೆ. ಉದಾಹರಣೆಗಳ ಮೂಲಕ ಸಾಧನಮಾರ್ಗದ ಸೂಕ್ಷ್ಮ ವಿವೇಚನೆಯನ್ನು ಕೈಕೊಳ್ಳಲಾಗಿದೆ. ಮಾರ್ಗದಲ್ಲಿರುವ ಸಾಧಕನಿಗೆ ಬರುವ ಅನುಭವ ಹೇಗಿರುತ್ತದೆ? ಹೇಗೆ ಪ್ರಗತಿಯಾಗುತ್ತದೆ? ಎಂಥ ಅಡಚಣೆ ಬರುತ್ತದೆ? ಯಾವುದನ್ನು ಅವನು ಕೈಬಿಡಬೇಕು ಮುಂತಾದವುಗಳ ಸ್ಪಷ್ಟ ವಿವರಣೆ ನೀಡಲಾಗಿದೆ. ಎಲ್ಲರೂ ಅವುಗಳನ್ನು ಏಕಾಗ್ರತೆಯಿಂದ ಓದಿ ಮನನ ಮಾಡಿಕೊಳ್ಳಬೇಕಾಗಿದೆ.

ಶ್ರೀ ದಾದಾಸಾಹೇಬರಿಗೆ ಗುರುದೇವರ ಸಾನಿಧ್ಯ ಹಲವು ವರ್ಷ ಲಭಿಸಿತು. ಅದರಿಂದ ಇವರು ಸಾಕಷ್ಟು ಅನುಭವವನ್ನು ಪಡೆದರು, ಪಾಠ ಕಲಿತರು. ಅದನ್ನವರು ಮೊದಲು ಪ್ರವಚನಗಳ ಮೂಲಕ ಮುಂದೆ, ಗ್ರಂಥಗಳ ಮೂಲಕ ಅನ್ಯರಿಗೆ ನೀಡಿದ್ದರಿಂದ ನಾವು ಅವರಿಗೆ ಋಣಿಯಾಗಿರಬೇಕು. ಇಂಥ ಗ್ರಂಥಗಳ ಮೂಲಕ ಗುರುದೇವ ರಾನಡೆಯವರ ಹಲವು ಆಯಾಮಗಳು ಬೆಳಕಿಗೆ ಬರುತ್ತವೆ. ಅದರ ಬಗೆಗೆ ವಿವಿಧ ದೃಷ್ಟಿಕೋನದಿಂದ ಬರೆದ ಪುಸ್ತಕಗಳು ಎಷ್ಟಿದ್ದರೂ ಕಡಿಮೆಯೇ. ಇಂಥ ಗ್ರಂಥಗಳಿಂದ ವ್ಯಕ್ತಿಯ ಸರ್ವಾಂಗೀಣ ದರ್ಶನವಾಗಲು ಸಹಾಯವಾಗುತ್ತದೆ.

ಶ್ರೀ ದಾದಾಸಾಹೇಬರ ಒತ್ತಾಯಕ್ಕೆ ಮಣಿದು ಈ ಪ್ರಸ್ತಾವನೆಯನ್ನು ಬರೆದಿದ್ದೇವೆ. ವಾಸ್ತವಿಕವಾಗಿ ಇಂಥ ಗ್ರಂಥಗಳಿಗೆ ಪ್ರಸ್ತಾವನೆಯ ಅಗತ್ಯವಿರುವುದಿಲ್ಲ. ಅಂಥ ಅಧಿಕಾರ ನನಗಿಲ್ಲ. ನನಗಿಂತಲೂ ಹೆಚ್ಚು ವಿದ್ವಾಂಸರೂ ಅನುಭವಿಗಳು ಈ ಸಂಪ್ರದಾಯದಲ್ಲಿದ್ದಾರೆ. ನಾನು ಪ್ರಸ್ತಾವನೆ ಬರೆದದ್ದರಿಂದ ನನಗೆ ಈ ಚರಿತ್ರೆಯನ್ನು ಓದಿ ಮನನ ಮಾಡಿಕೊಳ್ಳಲು, ಅಧಿಕ ಮಾಹಿತಿ ಪಡೆಯಲು ಸಹಾಯವಾಯಿತು. ಹಾಗೆಯೇ ಗುರುದೇವ ರಾನಡೆಯವರಿಗೆ ಗೌರವ ಸಲ್ಲಿಸುವ ಅವಕಾಶ ಲಭಿಸಿತು. ಈ ಗ್ರಂಥ ರಚಿಸಿದ ಶ್ರೀ ದಾದಾಸಾಹೇಬರಿಗೂ, ಅವರಿಗೆ ಸತತ ಬೆಂಬಲ ನೀಡಿದ ಶ್ರೀಮಂತ ರಾಜೇ ಸಾಹೇಬರಿಗೂ, ಇತರರಿಗೂ ಅಭಿನಂದನೆಯನ್ನು ಹೇಳಲೇಬೇಕು. ಈ ಗ್ರಂಥವು ಓದುಗರಿಗೆ, ವಿಶೇಷವಾಗಿ ಸಾಧಕರಿಗೂ ಸಾಕಷ್ಟು ಉಪಯೋಗವಾಗಲೆಂದು ಶ್ರೀಗುರುವಿನಲ್ಲಿ ಪ್ರಾರ್ಥಿಸಿ ವಿದಾಯ ಹೇಳುತ್ತಿದ್ದೇನೆ.

ಸಾಂಗಲಿ **ರಾಮಚಂದ್ರ ನಾರಾಯಣ ಜೋಶಿ**

ದಿನಾಂಕ :

# ಪ್ರಸ್ತಾವನೆ

(ಎರಡನೇ ಆವೃತ್ತಿ)

ನಾನು ೧೯೩೪ರಿಂದ ಗುರುದೇವ ರಾನಡೆಯವರ ಸಂಪರ್ಕದಲ್ಲಿದ್ದೆ. ೧೯೪೪ರಿಂದ ಅಲಹಾಬಾದ ಹಾಗೂ ನಿಂಬಾಳದಲ್ಲಿ ಅವರ ಜೊತೆಗೇ ಇದ್ದೆ. ಆ ಸತ್ಪುರುಷನ ಪ್ರೇಮ ಹಾಗೂ ಸಾನಿಧ್ಯದ ನೆನಪು ಅವಿಸ್ಮರಣೀಯವಾದುದು. ಅವರು ತೋರಿದ ಪುತ್ರವಾತ್ಸಲ್ಯ ಹಾಗು ಪಾರಮಾರ್ಥಿಕ ಕೃಪೆಯನ್ನು ಬಣ್ಣಿಸಲು ನನ್ನ ಬಳಿ ಶಬ್ದಗಳಿಲ್ಲ. ೧೯೩೨ರಲ್ಲಿ ಶ್ರೀ ಸಮರ್ಥ ಸದ್ಗುರು ಅಂಬುರಾವ ಬಾಬಾರವರು ನಾಮೋಪದೇಶವನ್ನು ಅನುಗ್ರಹಿಸಿ ನನಗೆ ಪಾರಮಾರ್ಥದ ಮಾರ್ಗವನ್ನು ತೋರಿಸಿದರು. ಕೈಹಿಡಿದು ಮುನ್ನಡೆಸಿದರು. ೧೯೩೩ರಲ್ಲಿ ಶ್ರೀ ಅಂಬುರಾವ ಬಾಬಾರವರು ದೇಹ ತೊರೆದರು. ೧೯೩೪ರಿಂದ ನನ್ನ ಪಾರಮಾರ್ಥಿಕ ಜೀವನದ ಸಂರಕ್ಷಣೆಯ ಹೊಣೆಯನ್ನು ಶ್ರೀ ಸಮರ್ಥ ಬಾಬಾರವರು ಅರಿವಿಲ್ಲದೆ ತನ್ನದೇ ಗುರುಬಂಧುವಾದ ಈ ಗುರುದೇವ ರಾನಡೆಯವರಿಗೆ ಹೊರಿಸಿದರು. ಶ್ರೀ ಸಮರ್ಥ ಬಾಬಾ ಹಾಗೂ ಗುರುದೇವ ರಾನಡೆಯವರು 'ನಾನು ನೀನು ಅವಳಿ ಜವಳಿ' ಎಂದು ಭಾವಿಸುತ್ತಿದ್ದರು. ಈ ಇಬ್ಬರು ಮಹಾಪುರುಷರ ಸಾನಿಧ್ಯದಲ್ಲಿ ಲಭಿಸಿದ ಸತ್ಸಂಗ, ಸಾಧನ, ಅವರ ಆದೇಶದಂತೆ ಶ್ರೀ ರಮಣ ಮಹರ್ಷಿಯಂಥ ಸತ್ಪುರುಷರ ಸಮಾಗಮ ಮತ್ತು ದೇಶಾಟನೆ, ಗುರುದೇವರ ಮಹತ್ವದ ಗ್ರಂಥಗಳ ಮುದ್ರಣ-ಪ್ರಕಾಶನ ಇಂಥ ಹತ್ತು ಹಲವು ಪ್ರಸಂಗದಲ್ಲಿಯ ಪ್ರೇರಣಾದಾಯಕವಾದ ನೆನಪುಗಳು ಈ ಚರಿತ್ರ ಗ್ರಂಥದ ಪ್ರಾಥಮಿಕ ಸಾಮಗ್ರಿಯಾಗಿವೆ. ಈ ಘಟನೆಯೊಂದಿಗೆ ಜರುಗಿದ ನನ್ನ ಜೀವನದಲ್ಲಿಯ ಸಮರಸದಿಂದಾಗಿ ಗುರುದೇವರ ವಸ್ತುನಿಷ್ಠ ಚರಿತ್ರೆಯ ಚಿತ್ರಣಕ್ಕೆ ಒಂದು ಭಾವಮಯ ಆತ್ಮನಿವೇದನೆಯ ಮೆರಗು ಲಭಿಸಿದೆ.

೬ ಜೂನ್ ೧೯೫೭ರಲ್ಲಿ ಶ್ರೀ ಗುರುದೇವರ ನಿರ್ಯಾಣವಾಯಿತು. ಅನಂತರ ೨೧ ರಿಂದ ೩೦ ಆಗಸ್ಟ್ ೧೯೫೭ರಲ್ಲಿ ಸಾಂಗಲಿಯಲ್ಲಿ ಶ್ರೀ ಗುರುದೇವರ ಜೀವನ ಮತ್ತು ಪಾರಮಾರ್ಥಿಕ ಬೋಧನೆಯ ಬಗೆಗೆ ಹತ್ತು ಉಪನ್ಯಾಸವನ್ನು ನೀಡುವ ಅವಕಾಶ ಲಭಿಸಿತು. ಶ್ರೀಗುರುದೇವರು ನಿರ್ಯಾಣಗೊಂಡ ಒಂದೇ ವರ್ಷದ ಅಲ್ಪಾವಧಿಯಲ್ಲೇ ಫೆಬ್ರುವರಿ ೧೯೫೮ರಲ್ಲಿ ಶ್ರೀ ಗುರುದೇವರ 'ಜೀವನ-ದರ್ಶನ'ದ ಬಗೆಗಿನ ಈ ಗ್ರಂಥ ಪ್ರಕಟಗೊಂಡಿತು. ಇದು ಆ ಕಾಲದ ಶ್ರೀಗುರುದೇವರ ಮೊದಲ ಚರಿತ್ರೆ ಗ್ರಂಥವಾಗಿದೆ.

ಶ್ರೀ ಗುರುದೇವರು ೩ ಜುಲೈ ೧೮೮೬ರಲ್ಲಿ ಜನಿಸಿದರು. ಕೇವಲ ವಿಕೃತಿ ಹಾಗೂ ಯುದ್ಧಗಳಿಂದ ತುಂಬಿದ ಈ ಜಗತ್ತಿಗೆ ಶ್ರೀ ಗುರುದೇವರಂತಹ ಸಂತರ ಜೀವನ ದರ್ಶನದಿಂದ ಮಾನವ ಜೀವನಕ್ಕೆ ಲಭಿಸುವ ಮಾರ್ಗದರ್ಶನ ಇಂದಿನ ಅಗತ್ಯವಾಗಿದೆ. ಹ್ರಾಸಗೊಳ್ಳುತ್ತಿರುವ

ಇಂದಿನ ಜೀವನಮೌಲ್ಯವನ್ನು ಸುಧಾರಿಸಲು, ದಿವ್ಯತ್ವಕ್ಕೆ ಒಯ್ಯುವ ಮನುಷ್ಯ ಮನದ ಹೊಸ ನಿರ್ಮಾಣಕ್ಕಾಗಿ ಸಕಲ ಸಂತರ ಚರಿತ್ರೆಯಿಂದ ಲಭಿಸುವ ಉದ್ಬೋಧನೆ ತೀರ ಅಗತ್ಯವಾಗಿದೆ.

ಶ್ರೀ ಗುರುದೇವ ರಾನಡೆಯವರು ನಿರಂತರ ಕಠಿಣ ಸಾಧನೆಯಿಂದ ಮತ್ತು ಗುರುಕೃಪೆಯಿಂದ ಆತ್ಮಸಾಕ್ಷಾತ್ಕಾರವನ್ನು ಸಂಪೂರ್ಣವಾಗಿ ಅನುಭವಿಸಿದರು. ಎರಡನೇ ಜಾಗತಿಕ ಯುದ್ಧದ ಕಾಲಕ್ಕೆ ಹಿರೋಶಿಮಾದ ಮೇಲೆ ಬಿದ್ದ ಅಣುಬಾಂಬ್‌ನ ವಿನಾಶವನ್ನು ಕಂಡು ಗುರುದೇವರ ಹೃದಯ ವ್ಯಥೆಯಿಂದ ಕಂಪಿಸಿತು. ಹಳಹಳಿಸಿತು. ಸರ್ವಾತ್ಮ ಭಾವದ ಅವಸ್ಥೆಯಲ್ಲಿ ಸ್ವಸಂವೇದನೆಯಿಂದ ಗುರುದೇವ ಹೇಳುತ್ತಿದ್ದರು– 'ಇಂದು ಈ ವಿಶ್ವ ತೀವ್ರವಾಗಿ ಭಗ್ನಗೊಂಡಿದೆ. ಮಾನವನ ಚೇತನದಲ್ಲಿ ಮೂಲಭೂತ ಆಧ್ಯಾತ್ಮಿಕ ಉತ್ಕ್ರಾಂತಿಯಾಗದ ಹೊರತು ಮನುಷ್ಯನ ಎದುರಿಗೆ ಬೇರೆ ಆಶೆಯ ಕಿರಣವಿಲ್ಲ'. ಜನಮಾನಸದಲ್ಲಿ ಪಾರಮಾರ್ಥಿಕ ಸಾಧನೆಯನ್ನು ಬಿಂಬಿಸುವುದೇ ಸಕಲ ಸಂತರ ಜೀವನ ಚರಿತ್ರೆಯ ಮರ್ಮವಾಗಿದೆ. ಹೀಗಾಗಿ ಧರ್ಮ, ದರ್ಶನ ಪರಂಪರೆಗಿಂತ, ಅದಕ್ಕೆ ಜನ್ಮ ನೀಡುವ ಸಂತರ ಸಾಕ್ಷಾತ್ಕಾರಕ್ಕೆ ಅನನ್ಯ ಸಾಧಾರಣ ಮಹತ್ವವಿದೆ. ಜಗತ್ತಿನ ಸರ್ವಧರ್ಮ ದರ್ಶನಗಳ ಉಗಮವು ಯಾವುದೇ ಸಂತರ ಅನುಭೂತಿಯೊಂದಿಗೆ ಜೀವನದೊಂದಿಗೆ ಅನುರೂಪಗೊಂಡಿರುತ್ತದೆ.

ವಿಶ್ವಮಾನಸದಲ್ಲಿ ಆಧ್ಯಾತ್ಮಿಕ ಸಾಮ್ಯವಾದಿಯಂತಹ ಉತ್ಕ್ರಾಂತಿ ಜರುಗಬೇಕೆಂಬ ಕನಸನ್ನು ಶ್ರೀ ಗುರುದೇವರೂ ಸಹ ಕಂಡಿದ್ದರು. ಒಂದೇ ದೇವರು, ಒಂದೇ ಧರ್ಮ ಮತ್ತು ಒಂದೇ ಮಾನವೀಯತೆಯ ಕಲ್ಪನೆಯು ಆತ್ಮಸಾಕ್ಷಾತ್ಕಾರದ ಮಾರ್ಗದಿಂದಲೇ ಸಾಧ್ಯ ಎಂದು ಗುರುದೇವ ನಂಬಿದ್ದರು. ವೇದಕಾಲದಿಂದ ಇಂದಿನ ಕಾಲದ ವರೆಗಿನ ಸಂತರ 'ಪರಮಾರ್ಥ ಸೋಪಾನ'ದ ಸಾಕ್ಷಾತ್ಕಾರದ ಅನುಭವವು ಒಂದೇ ರೀತಿಯಾಗಿರುತ್ತದೆ ಎಂದು ಶ್ರೀ ಗುರುದೇವರು ತಮ್ಮ ಎಲ್ಲ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ. ಸಂತರು ತಮ್ಮ ಅವರ್ಣನೀಯ ಅನುಭವಗಳಿಗೆ ಶಬ್ದನೀಡಿದರು. ಸರ್ವ ದೇಶ ಮತ್ತು ಕಾಲದಲ್ಲಿ ಸಾಕ್ಷಾತ್ಕಾರದ ಒಂದೇ ಬಗೆ ಮತ್ತು ಸಾಧನ ಪ್ರಕ್ರಿಯೆಯಿಂದ ಆ ಎಲ್ಲ ಅನುಭಾವಗಳ ಪುನಃ ಪ್ರತ್ಯಯಶೀಲತೆಯ ಆಧಾರದ ಮೂಲಕ ವ್ಯಕ್ತವಾಗುವ ವಸ್ತುನಿಷ್ಠ ಮತ್ತು ಶಾಶ್ವತ ಸತ್ಯವನ್ನು ಶ್ರೀ ಗುರುದೇವರು ಗಮನಕ್ಕೆ ತಂದುಕೊಟ್ಟಿದ್ದಾರೆ. ಹಲವು ಧರ್ಮ ಸಂಸ್ಕೃತಿ ಮತ್ತು ರಾಷ್ಟ್ರೀಯ ಅಸ್ಮಿತೆಯಿಂದ ಆವರಿಸಿಕೊಂಡಿರುವ ಇಂದಿನ ಮನುಷ್ಯನ ಮನಸ್ಸು ದುಃಖನಿವೃತ್ತಿಯ ಶೋಧದಲ್ಲಿ ಆತ್ಮಸಾಕ್ಷಾತ್ಕಾರದ ಕಡೆಗೇ ಸೆಳೆಯಲ್ಪಡುವುದು ಎನ್ನುವುದು ಗುರುದೇವರ ಭಾವನೆಯಾಗಿದೆ. ೨೨ ಮೇ ೧೯೫೩ ರಂದು ನಿಂಬಾಳದಲ್ಲಿಯ ಭೇಟಿಯಲ್ಲಿ ಒಂದು ಭಾವಾವಿಷ್ಟ ಅವಸ್ಥೆಯಲ್ಲಿ ಗುರುದೇವ ಹೇಳಿದರು– 'The spiritual motive shall always remain highest and forever unassailable' ಮಾನವನ ಜೀವನದಲ್ಲಿಯು ಆಧ್ಯಾತ್ಮಿಕ ಪ್ರೇರಣೆಯು ಸರ್ವ ಕಾಲದಲ್ಲಿ ಶ್ರೇಷ್ಠ ಮತ್ತು ಅಬಾಧಿತವಾಗುಳಿಯುತ್ತದೆ ಎಂದು ಶ್ರೀಗುರುದೇವರು ಭವಿಷ್ಯ ನುಡಿದಿದ್ದರು...

ಮನುಷ್ಯ ಅಸ್ತಿತ್ವ ಮೂಲತಃ ಚೈತನ್ಯಮಯವಾಗಿದ್ದು, ಅದರ ಸಫಲತೆಯೂ ಚೈತನ್ಯದ ದಿಶೆಯಿಂದಲೇ ಮಾನವನನ್ನು ದೇವರ ಸಾಕ್ಷಾತ್ಕಾರದ ಬಳಿಗೆ ಒಯ್ಯುತ್ತದೆ ಎಂದು ಗುರುದೇವರು ಅಂದುಕೊಂಡಿದ್ದರು. ಗುರುದೇವರ ಮಾತಿನಲ್ಲೇ ಹೇಳುವುದಾದರೆ– ...Unquestionable the search after God remains the highest problem even today and Philosopical justification of our spiritual life is as necessary today as it was hundreds of years ago...' ಗುರುದೇವರು ಹಾಕಿಕೊಟ್ಟ ಮಾರ್ಗ, ಅವರ ಸಾಹಿತ್ಯ, ನಿಷ್ಠೆಯ ಸಾಧನವಷ್ಟೇ ಸಾಧಕರ ಎದುರುಗಿರುವ ಏಕೈಕ ಮಾರ್ಗ.

ಶ್ರೀಗುರುದೇವರ ಸೇವೆ ಹಾಗೂ ಭಕ್ತಿ ಮಾಡಿದ ಸಕಲರ ಋಣವನ್ನು ಸ್ಮರಿಸಿ, ಶ್ರೀಗುರುದೇವರಿಗೆ ಅನನ್ಯ ಪ್ರಣಾಮ ಸಲ್ಲಿಸಿ ಈ ಪ್ರಸ್ತಾವನೆಯನ್ನು ಮುಗಿಸುತ್ತೇನೆ.

ಶ್ರೀ ಸದ್ಗುರು ಚರಣರಜ

**ದಾದಾಸಾಹೇಬ ದೇಶಪಾಂಡೆ**

# ಪ್ರಕಾಶಕರ ಮಾತು

"ಪುಸ್ತಕ ಪ್ರಕಟಣೆಯು ಅಮೃತ ಶಿಲೆಯ ನಿರ್ಮಾಣಕ್ಕಿಂತ
ಹೆಚ್ಚು ಬಾಳಿಕೆ ಬರುವಂತಹದ್ದಾಗಿದೆ. ನಾವು ಕಟ್ಟಡಗಳನ್ನು ಕಟ್ಟುವ ಬದಲು
ಹೆಚ್ಚಾಗಿ ಪ್ರಮುಖ ಗ್ರಂಥಗಳನ್ನು ಪ್ರಕಟಿಸಬೇಕು."

–ಡಾ॥ ಆರ್.ಡಿ. ರಾನಡೆ

ಶ್ರೀಗುರುದೇವ ಡಾ॥ ಆರ್.ಡಿ. ರಾನಡೆಯವರ ಆದೇಶ ನಿರ್ದೇಶಗಳ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎ.ಸಿ.ಪಿ.ಆರ್. ಸಂಸ್ಥೆಯು, ಪ್ರತಿವರ್ಷ ಹಲವಾರು ಮೌಲಿಕ ಗ್ರಂಥಗಳನ್ನು ಕನ್ನಡ, ಇಂಗ್ಲೀಷ್, ಹಿಂದಿ ಹಾಗೂ ಮರಾಠಿ ಭಾಷೆಗಳಲ್ಲಿ ಪ್ರಕಟಿಸುತ್ತ ಬಂದಿದೆ.

ಪ್ರಸ್ತುತ, ಮರಾಠಿಯಲ್ಲಿ ರಚಿತವಾದ "ಶ್ರೀಗುರುದೇವ ರಾನಡೆ ಜೀವನ ದರ್ಶನ" ೧೯೫೮ ರಲ್ಲಿ ಶ್ರೀ ಗುರುದೇವರ ಪರಮಾಪ್ತ ಶಿಷ್ಯರಾಗಿದ್ದ, ಅವರ ಪದತಳದಲ್ಲಿಯೇ ತಮ್ಮ ಜೀವನವನ್ನು ಸಮರ್ಪಿಸಿದ ದಿ॥ ದಾದಾಸಾಹೇಬ್ ದೇಶಪಾಂಡೆ ಚಂದೂರರವರು ರಚಿಸಿ ಪ್ರಕಟಿಸಿದರು. ಅವರು ಶ್ರೀ ಅಂಬುರಾವ ಮಹಾರಾಜರಲ್ಲಿ ಜ್ಞಾನದೀಕ್ಷೆಯನ್ನು ಪಡೆದು ಅವರೇ ನಿರ್ದೇಶಿಸಿದಂತೆ ತಮ್ಮ ಮುಂದಿನ ಜೀವನವನ್ನು ಶ್ರೀ ಗುರುದೇವ ರಾನಡೆಯವರ ನಿರ್ದೇಶನದಂತೆ ಕಳೆದರು. ಶ್ರೀ ಗುರುದೇವರ ಕಾಲಾನಂತರ ತಮ್ಮ ಹುಟ್ಟೂರಾದ ಚಂದೂರಿನಲ್ಲಿ "ಶ್ರೀಗುರುದೇವ ರಾನಡೆ ಮೆಮೊರಿಯಲ್ ಹೈಸ್ಕೂಲ್" ಸ್ಥಾಪಿಸಿ ಗ್ರಾಮೀಣ ಭಾಗದ ನೂರಾರು ಜನರ ಬಾಳಿಗೆ ಬೆಳಕಾದರು.

ಶ್ರೀ "ನಿಂಬರಗಿ ಮಹಾರಾಜರ" 'ಸ್ವರೂಪಸಂಪ್ರದಾಯ'ಕ್ಕೆ ಒಂದು ಸಾಮಾಜಿಕ ಉತ್ಕ್ರಾಂತಿಯ ಆಯಾಮವನ್ನು ನೀಡಿದ ಶ್ರೀ ಗುರುದೇವರ ಜೀವನಗಾಥೆ ಮತ್ತು ಅವರು ನೀಡಿದ ಸಾರ್ವಕಾಲಿಕ ಕೊಡುಗೆಗಳ ನೈಜದಾಖಲೆ ಈ ಹೊತ್ತಿಗೆಯಲ್ಲಿ ಚಿತ್ರಿತವಾಗಿದೆ. ಈ ಹೊತ್ತಿಗೆಯನ್ನು ಕನ್ನಡಕ್ಕೆ ತರುವ ನಮ್ಮ ಬಹುದಿನಗಳ ಸಂಕಲ್ಪ ಇಂದು ಸಾಧ್ಯವಾಗುತ್ತಿದೆ. ಇದು ದೈವೀ ಸಂಕಲ್ಪ. ಮೂಲಲೇಖಕರಾದ ದಿ॥ ದಾದಾಸಾಹೇಬ ದೇಶಪಾಂಡೆಯವರ ಸುಪುತ್ರರು, ನನ್ನ ಗುರುಗಳು ಹಾಗೂ ಎ.ಸಿ.ಪಿ.ಆರ್. ದ ಮಾಜಿ ಅಧ್ಯಕ್ಷರಾದ ಪ್ರೊ. ಎನ್.ಆರ್. ದೇಶಪಾಂಡೆಯವರು ಮರಾಠಿ ಆವೃತ್ತಿಯನ್ನು ಓದಲು ಪ್ರೇರೆಪಿಸಿದ್ದರಿಂದ ನಮಗೆ ಶ್ರೀ ಗುರುದೇವರ ಅಗಾಧತೆಯ ಪರಿಚಯ ಸಿಕ್ಕಿತು. ಅದು ಕನ್ನಡಕ್ಕೆ ಅನುವಾದಗೊಂಡು, ತನ್ಮೂಲಕ ಆಸಕ್ತ ಜಿಜ್ಞಾಸುಗಳಿಗೆ ಕೈದೀವಿಗೆಯಾಗಿ ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ಈ ಕೃತಿಯನ್ನು ಸಮರ್ಪಿಸುತ್ತಿದ್ದೇವೆ.

ನಮ್ಮೆಲ್ಲ ಕಾರ್ಯಚಟುವಟಿಕೆಗಳಿಗೆ ಚೈತನ್ಯ ಸ್ವರೂಪಿಗಳೂ, ಕಾಲಕಾಲಕ್ಕೆ ತಮ್ಮ ನಿರ್ದೇಶನ ಹಾಗೂ ದಿವ್ಯಾಶೀರ್ವಾದದಿಂದ ನಮ್ಮನ್ನು ಮುನ್ನಡೆಸುತ್ತಿರುವ ನಮ್ಮೆಲ್ಲರ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, 'ಜ್ಞಾನಯೋಗಾಶ್ರಮ' ವಿಜಯಪುರ ಅವರ ಅಡಿದಾವರೆಗಳಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ ಅವರು ಆಶೀರ್ವಾದ ನೀಡಿ, ತಮ್ಮ ಅಮೂಲ್ಯವಾದ "ನಲ್ನುಡಿ"ಯನ್ನು ಈ ಹೊತ್ತಿಗೆಗೆ ದಯಪಾಲಿಸಿದರು. ಅವರಿಗೆ ಎ.ಸಿ.ಪಿ.ಆರ್. ಆಡಳಿತ ಮಂಡಳಿಯು ಕೃತಜ್ಞತಾಪೂರ್ವಕ ನಮನಗಳನ್ನು ಸಲ್ಲಿಸುತ್ತದೆ.

ಅನುವಾದ ಮೂಲದ ಪ್ರತಿಕೃತಿಯಾಗಿ ಭಾಷಾಸಾರಳ್ಯದೊಂದಿಗೆ ಮೂಡಿಬರುವಂತೆ ಚೊಕ್ಕಟವಾಗಿ ನಿರ್ವಹಿಸಿಕೊಟ್ಟ ಖ್ಯಾತ ಲೇಖಕರೂ, ಚಿಂತಕರೂ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರೂ ಆದ ಪ್ರೊ॥ ಚಂದ್ರಕಾಂತ ಪೋಕಳೆಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಅವರಿಗೆ ಸಕಲ ಸನ್ಮಂಗಳವನ್ನು ಬಯಸಿ ಶ್ರೀ ಗುರುದೇವರಲ್ಲಿ ಪ್ರಾರ್ಥಿಸುತ್ತೇವೆ.

ಮೂಲ ಕೃತಿಯಲ್ಲಿಯ ಅಭಂಗಗಳ – ಕೀರ್ತನೆಗಳ ವಿವರಣೆ ಮತ್ತು ಪುನರಾವೃತ್ತಿಗಳನ್ನು ಸಂಗ್ರಹ ರೂಪದಲ್ಲಿ ನೀಡಲಾಗಿದೆ. ಈ ಕೃತಿ 'ಸಂಗ್ರಹಾನುವಾದ' ಎಂಬುದನ್ನು ವಾಚಕರ ಗಮನಕ್ಕೆ ತರಬಯಸುತ್ತೇವೆ.

ಹಸ್ತಪ್ರತಿಯನ್ನು ಒಪ್ಪಓರಣವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಮಿತ್ರ ಶ್ರೀ ಪ್ರಕಾಶ್ ಗಿರಿಮಲ್ಲನವರಿಗೆ ನಮ್ಮ ಹಾರ್ದಿಕ ಕೃತಜ್ಞತೆಗಳು. ಸರಿತಪ್ಪುಗಳ ಶೋಧನೆ ಬಹಳ ಸಹನೆಯನ್ನು ಬಯಸುವ ಕೆಲಸ. ಅದನ್ನು ಶ್ರದ್ಧೆಯಿಂದ ನಿರ್ವಹಿಸಿದ ಸಂಸ್ಥೆಯ ಸಹಕಾರ್ಯದರ್ಶಿಗಳಾದ ಶ್ರೀ ರಾಮಚಂದ್ರ ಗೋ. ಜಕಾತಿಯವರಿಗೆ ಮತ್ತು ಉಪಾಧ್ಯಕ್ಷರಾದ ಸುಬ್ರಹ್ಮಣ್ಯ ಭಟ್ ಅವರಿಗೆ ಗುರುಸ್ಮರಣ ಪೂರ್ವಕ ನಮನಗಳು.

ಅಂದವಾದ ಮುದ್ರಣಕ್ಕೆ "ಇಂಪ್ರೆಶನ್ಸ" ನ ಶ್ರೀ ಅಶೋಕ ಥೊಂಡ್ ಮತ್ತು ಶ್ರೀ ಅತುಲ್ ಭಾತಖಾಂಡೆ ಬಳಗಕ್ಕೆ ಕೃತಜ್ಞತೆಗಳು.

ಪುಸ್ತಕ ಪ್ರಕಟಣೆಗೆ ಆರ್ಥಿಕ ನೆರವು ಬಹುಮುಖ್ಯವಾದದ್ದು. ಅದು ದೈವಿ ಪ್ರೇರಣೆಯಿಂದ ಕೂಡಿದ ಪವಿತ್ರಕಾರ್ಯ ಅದನ್ನು ಸೌಮನಸ್ಯದಿಂದ ಸಾಧ್ಯ ಮಾಡಿದ ಮಾನ್ಯ ಶಾಸಕ ಶ್ರೀ ಅನಿಲ ಬೆನಕೆ ಇವರಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಪ್ರಾರ್ಥಿಸಿ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಇತಿ ಭವದೀಯ
ಸಜ್ಜನ ವಿಧೇಯ

ಬೆಳಗಾವಿ
ದಿನಾಂಕ : ೪–೩–೨೦೧೯

**ಮಾರುತಿ ಬಿ. ಝಿರಲಿ**
ಗೌರವ ಕಾರ್ಯದರ್ಶಿ
(ಎ.ಸಿ.ಪಿ.ಆರ್. ಆಡಳಿತ ಮಂಡಳಿ ಪರವಾಗಿ)

## ಪರಿವಿಡಿ

| | | |
|---|---|---|
| ೧. | ಬಾಲಕ ಗುರುದೇವ | ೦೧ |
| ೨. | ಗುರುದೇವರ ಸದ್ಗುರುಭಕ್ತಿ | ೧೦ |
| ೩. | ಗುರುಪರಂಪರೆ ಮತ್ತು ಪರಮಾರ್ಥ ಮಾರ್ಗ | ೨೦ |
| ೪. | ಬೌದ್ಧಿಕ ಪ್ರಗತಿ ಮತ್ತು ಪ್ರಾಪಂಚಿಕ ಆಘಾತ | ೨೮ |
| ೫. | ಮರಣವೇ ಮಹಾನವಮಿ! | ೩೭ |
| ೬. | ಜೀವನದ ಸ್ಥಿತ್ಯಂತರ ಮತ್ತು ಗ್ರಂಥ ಲೇಖನ | ೪೭ |
| ೭. | ಪರಮಾರ್ಥ ಪ್ರಸಾರ | ೫೩ |
| ೮. | 'ನಾನೂ ಅಮೃತರಸ ಸೇವಿಸಿ ಉಳಿದವರಿಗೂ ಹಂಚುತ್ತೇನೆ' | ೬೧ |
| ೯. | ಮೇಘವೃಷ್ಟಿಯಿಂದ ಉಪದೇಶ ಮತ್ತು ಅವತಾರ ಕಾರ್ಯ ಸಮಾಪ್ತಿ | ೬೬ |
| ೧೦. | ಶ್ರೀ ಗುರುದೇವರ ಅಮರ ಸಂದೇಶ | ೭೭ |
| ೧೧. | ಶ್ರೀ ಗುರುದೇವ ಆರ್. ಡಿ. ರಾನಡೆಯವರು ಬರೆದ ಗ್ರಂಥ ಮತ್ತು ಲೇಖನಗಳು | ೮೨ |

# ಬಾಲಕ ಗುರುದೇವ

ಗುರುದೇವರ ಮುತ್ತಜ್ಜನು ದಕ್ಷಿಣದ ಶ್ರೇಷ್ಠಸಂತರಾದ ಶ್ರೀ ಚಿದಂಬರ ದೀಕ್ಷಿತರ ನಿಷ್ಠಾವಂತ ಭಕ್ತರಾಗಿದ್ದರು. ಶ್ರೀ ಚಿದಂಬರ ದೀಕ್ಷಿತರು ಆ ಕಾಲದಲ್ಲಿ ರಾಮದುರ್ಗ ಸನಿಹದಲ್ಲಿರುವ ಗೊಣ್ಣಾಗರ ಎಂಬಲ್ಲಿ ಒಂದು ದೊಡ್ಡ ಯಜ್ಞವನ್ನು ಏರ್ಪಡಿಸಿದ್ದರು. ಆ ಪ್ರಸಂಗದಲ್ಲಿ ಗುರುದೇವರ ಮುತ್ತಜ್ಜನು ಅವಿಶ್ರಾಂತ ಸೇವೆಯನ್ನು ಕೈಕೊಂಡನು. ಇದರಿಂದ ಶ್ರೀ ಚಿದಂಬರರು ಸಂತುಷ್ಟರಾಗಿ ಮುತ್ತಜ್ಜನಿಗೆ ಸಂಪತ್ತು ಬೇಕೋ, ಸಂತತಿ ಬೇಕೋ ಎಂಬ ಪ್ರಶ್ನೆಯನ್ನು ಕೇಳಿದರು. ಮುತ್ತಜ್ಜ ಪೇಶ್ವೆ ಕಾಲದಲ್ಲಿ ಒಬ್ಬ ಸಾಹುಕಾರನೆಂದು ಪ್ರಸಿದ್ಧನಾಗಿದ್ದನು. ಆದರೆ ಅವನ ಮನೆತನದಲ್ಲಿ ಪ್ರಮುಖವಾಗಿ ಸಂತತಿಯ ಕೊರತೆಯಿತ್ತು. ಹೀಗಾಗಿ ಅವನು ಮಹಾಪುರುಷರ ಬಳಿ ಸಂತಾನದ ವರದಾನ ಬೇಡಿದನು. ಗುರುವರ್ಯ ರಾಮಭಾವೂ ರಾನಡೆಯವರು ಆ ವರದಾನದ್ದೇ ಒಂದು ತೇಜಸ್ವಿ ಫಲವಾಗಿದ್ದರು. ಗುರುದೇವರ ಅಪ್ಪನ ಜನ್ಮ ಬ್ರಹ್ಮಾವರ್ತದಲ್ಲಿ ಕೊನೆಯ ಪೇಶ್ವೆಯ ಪರಿಸರದಲ್ಲಾಯಿತು. ಫಲ್ಗೂ ನದಿಯಂತೆ ಒಮ್ಮೆ ಗುಪ್ತ, ಮತ್ತೊಮ್ಮೆ ಬಹಿರಂಗವಾಗಿ ಪ್ರಕಟವಾಗುವ ಪರಮಾರ್ಥ ಸರಿತೆ ಗುರುದೇವರ ಜನ್ಮದಿಂದಾಗಿ ಅವರ ಮನೆತನದಲ್ಲಿ ಪ್ರಕಟಗೊಂಡಿತು. ಶ್ರೀ ಚಿದಂಬರ ದೀಕ್ಷಿತ ಬಗೆಗೆ ತನ್ನ ಮುತ್ತಜ್ಜನಿಗಿರುವ ಭಕ್ತಿಯನ್ನು ಕಂಡು ಗುರುವರ್ಯ ರಾಮಭಾವೂ ಅವರು ಪ್ರತಿವರ್ಷದ ಉತ್ಸವಕ್ಕೆ ಹತ್ತು ರೂಪಾಯಿ ದೇಣಿಗೆಯನ್ನು ಕಳಿಸುತ್ತಾರೆ. ಅಲ್ಲಿಂದ ಕಳಿಸಲಾದ ಪ್ರಸಾದ ಮತ್ತು ವಿಭೂತಿಯನ್ನು ಭಕ್ತಿಭಾವದಿಂದ ಸ್ವೀಕರಿಸುತ್ತಾರೆ.

ಗುರುದೇವರ ಮಾತೋಶ್ರೀಯವರು ತಪಸ್ವಿಯಾಗಿದ್ದರು. ಗುರುದೇವರು ಜನಿಸುವ ಹನ್ನೆರಡು ವರ್ಷದ ಹಿಂದೆ ಅವರಿಗೆ ಏಕೈಕ ಮಗಳು ಮಾತ್ರ ಇದ್ದಳು. ಹೀಗಾಗಿ ಗುರುಮಾತೆಯಾದ ಪಾರ್ವತಿಬಾಯಿಯವರು ಅಖಂಡ ಭಕ್ತಿಯಲ್ಲಿ, ಅವಿರತ ನಾಮಸ್ಮರಣೆಯಲ್ಲಿ ಕಾಲಕಳೆದರು. ಗುರುದೇವರ ಪಿತ ದತ್ತಾತ್ರಯ ಸಂತರು ಸಂಸ್ಥಾನದ ಒಬ್ಬ ಅಧಿಕಾರಿಯೂ, ಪ್ರಾಪಂಚಿಕ ಗೃಹಸ್ಥರೂ ಆಗಿದ್ದರು. ಪಾರ್ವತಿಬಾಯಿಯವರು ಜಮಖಂಡಿಯ ಸನಿಹದಲ್ಲಿರುವ ಪೂಜ್ಯ ಶಂಭುಲಿಂಗ ಸ್ವಾಮಿಯವರಿಂದ ಉಪದೇಶ ಪಡೆದರು. ಗುರುವಿನ ಉಪದೇಶದಂತೆ ಅಖಂಡ ನಾಮಸ್ಮರಣೆಯೊಂದೇ ತಮ್ಮ ಸುಖದ ಸಾಧನವೆಂದು ಅವರು ಭಾವಿಸಿದ್ದರು. ಪ್ರತಿ ಸಾವಿರ ನಾಮಸ್ಮರಣೆಯ ಬಳಿಕ ಅವರು ಒಂದು ಗಂಧದ ಗುರುತಿನ ಗೆರೆಯನ್ನು ಗೋಡೆಯ ಮೇಲೆ ಎಳೆಯುತ್ತಿದ್ದರಂತೆ. ಅವರು ದೇವರ ಕೋಣೆಯ ನಾಲ್ಕೂ ಗೋಡೆಗಳ ತುಂಬೆಲ್ಲ ಇಂಥ ಗಂಧದ ಗೆರೆಗಳೇ ಇವೆಯಂತೆ. ಇದನ್ನು ಗುರುದೇವರು ಸ್ವತಃ ನೋಡಿದ್ದಾಗಿ ಹೇಳಿಕೊಂಡಿದ್ದಾರೆ. ಹೀಗಾಗಿ ಗುರುದೇವರಿಗೆ ಮಾತೆಯ ಬಗೆಗೆ ಅಪಾರ ಗೌರವವಿದೆ.

ಗುರುಮಾತೆಯ ಕಳಕಳಿಯ ಪ್ರಾರ್ಥನೆಗೆ ದೇವರು ಒಲಿದ. ಮುಂದೆ ಒಂದು ವರ್ಷದೊಳಗೆ ಗುರುಮಾತೆಗೆ ಪುತ್ರರತ್ನ ಪ್ರಾಪ್ತಿಯಾಯಿತು. ಗರ್ಭಿಣಿಯಾಗಿದ್ದಾಗ ಈ ಮಾತೆ ಅಖಂಡ ಭಕ್ತಿಯಲ್ಲೇ ಮುಳುಗಿದ್ದರು. ಪ್ರಸವವೇದನೆಯ ಕಾಲಕ್ಕೆ ಮಾತೆ ತುಂಬ ಕಷ್ಟವನ್ನು ಅನುಭವಿಸಬೇಕಾಯಿತು. ಆದರೂ ರಾಮತೀರ್ಥದಲ್ಲಿದ್ದ ಶ್ರೀಮಂತ ರಾಜೇಸಾಹೇಬರು ನೀಡಿದ ಉಮಾರಾಮೇಶ್ವರನ ತೀರ್ಥ ಸೇವನೆಯಿಂದ, ಹೆರಿಗೆ ಬೇನೆಯು ಸುಖರೂಪದಿಂದ ಪಾರಾಯಿತು. ೩ ಜುಲೈ ೧೮೮೬ರಂದು ಗುರುದೇವರ ಜನ್ಮವಾಯಿತು. (ಶಾಲಿವಾಹನ ಶಕೆ ೧೮೦೮, ವ್ಯಯನಾಮ ಸಂವತ್ಸರ ಆಷಾಢಮಾಸ ಶುಕ್ಲಪಕ್ಷ ದ್ವಿತೀಯ) ಹುಡುಗನಿಗೆ ರಾಮಚಂದ್ರ ಎಂದು ಹೆಸರಿಡಲಾಯಿತು. ಮಗನು ಜನಿಸಿದ್ದರಿಂದ ಪಾರ್ವತಿಬಾಯಿಯ ಭಕ್ತಿ ಹಾಗೂ ಸದ್ಗುರು ನಿಷ್ಠೆಯು ದ್ವಿಗುಣವಾಯಿತು.

ಮುಂದೆ ಬಾಲಕನಿಗೆ ಐದು ವರ್ಷವಾದ ಬಳಿಕ ಶ್ರೀ ಶಂಭುಲಿಂಗ ಸ್ವಾಮಿಯ ದರ್ಶನವನ್ನು ಪಡೆದರು. ಆಗ ಈ ಬಾಲಕನು ಮುಂದೆ ಶ್ರೇಷ್ಠ ಮಹಾಪುರುಷನಾಗಲಿರು ವುದಾಗಿ ಸ್ವಾಮೀಜಿಯವರು ಭವಿಷ್ಯ ನುಡಿದರು. ಆ ಆಶೀರ್ವಾದ ಪೂರ್ಣ ಭವಿಷ್ಯವಾಣಿಯಿಂದ ಗುರುಮಾತೆಯ ಅಂತರಂಗವು ಕೃತಜ್ಞತೆಯಿಂದ, ಧನ್ಯತಾಭಾವದಿಂದ ತುಂಬಿಕೊಂಡಿತು.

ಗುರುಮಾತೆಯ ಸುಸಂಸ್ಕೃತ ಹಾಗು ವಾತ್ಸಲ್ಯಮಯ ಸಾನಿಧ್ಯದಿಂದಾಗಿ ಗುರುದೇವರ ಶಿಕ್ಷಣ ಸುಸೂತ್ರವಾಗಿ ಸಾಗಿತು. ಅದಾದ ಬಳಿಕ ಬಾಲಕ ಗುರುದೇವರು ಜಮಖಂಡಿಯ ಇಂಗ್ಲಿಷ್ ಶಾಲೆಯಲ್ಲಿ ಪ್ರವೇಶ ಪಡೆದ. ಅಭಿಜಾತ ಕುಶಾಗ್ರ ಬುದ್ಧಿಯಿಂದ ಬಾಲ ಗುರುದೇವನು ಹೈಸ್ಕೂಲಿನಲ್ಲಿ ಜಾಣವಿದ್ಯಾರ್ಥಿ ಎನಿಸಿಕೊಂಡ. ಅವರು ಸದ ಎರಡನೇ ಕ್ರಮಾಂಕವನ್ನು ಪಡೆಯುತ್ತಿದ್ದರು. ಮೊದಲ ಕ್ರಮಾಂಕದ ವಿದ್ಯಾರ್ಥಿ ಪ್ರತಿದಿನ ಬೆಳಿಗ್ಗೆ ಊರಲ್ಲಿಯ ಸಕಲ ದೇವರ ದರ್ಶನ ಮಾಡಿ ಬರುತ್ತಿರುವುದು ಅವರ ಗಮನಕ್ಕೆ ಬಂತು. ಬಾಲ ಗುರುದೇವ ಆ ಹುಡುಗನ ಅನುಕರಣೆ ಮಾಡಿದರು. ಮಾರುತಿಯ ಸ್ತೋತ್ರವನ್ನು ಹೇಳಲಾರಂಭಿಸಿದರು. ವಿಚಿತ್ರವೆಂದರೆ, ಆ ವರ್ಷ ಗುರುದೇವರು ಮೊದಲ ಕ್ರಮಾಂಕಿನಲ್ಲಿ ತೇರ್ಗಡೆಯಾದರು. ಈ ಸುಗುಣೋಪಾಸನೆಯಿಂದಲೇ ಅವರ ಭಾವೀ ಪರಮಾರ್ಥದ ಸಾಧನೆ ಆರಂಭಗೊಂಡಿತು. ಗುರುದೇವರ ಪಾರಮಾರ್ಥಿಕ ಜೀವನ ಹದಿನೈದನೆಯ ವರ್ಷಕ್ಕೆ ಶುರುವಾಯಿತು. ಒಮ್ಮೆ ಕ್ರಿ.ಶ. ೧೯೦೧ರಲ್ಲಿ ಅವರು ಶ್ರೀ ಕಲ್ಲೂ ಭೋಕರೆ ಎಂಬ ತಮ್ಮ ಗೆಳೆಯನೊಂದಿಗೆ ಊರ ಹೊರಗಿರುವ ಪರಸಪ್ಪನ ಬಾವಿಗೆ ಈಜು ಕಲಿಯಲೆಂದು ಹೋದರು. ಬಾಲ ಗುರುದೇವ ಕುಂಬಳಕಾಯಿಯನ್ನು ಕಟ್ಟಿಕೊಂಡು ನೀರಿಗಿಳಿದರು. ಅವರ ಗೆಳೆಯರೆಲ್ಲ ನೋಡುತ್ತ ನಿಂತಿದ್ದರು. ಈಜುವಾಗ ಆಕಸ್ಮಿಕವಾಗಿ ಕುಂಬಳಕಾಯಿ ಕಳಚಿಕೊಂಡಿತು. ಅವರು ಮುಳುಗಲಾರಂಭಿಸಿದರು. ಇದನ್ನು ಕಂಡು ಅವರ ಗೆಳೆಯರು ನೀರಿಗೆ ಹಾರಿದರು. ಅವರೆಲ್ಲರ ಸಹಾಯದಿಂದ ಗುರುದೇವ ದಡ ಸೇರಿದರು. ಗುರುದೇವರಿಗೆ ಕಲ್ಲೂನ ಬಗೆಗೆ ಹೆಚ್ಚು ಆತ್ಮೀಯತೆ ಮೂಡಿತು. ಇದೇ ಸುಮಾರಿಗೆ ವಿಜಾಪುರ ಜಿಲ್ಲೆಯ ಉಮದಿ ಎಂಬೂರಿನ ಶ್ರೇಷ್ಠ ಸತ್ಪುರುಷರಾದ ಸಮರ್ಥ

ಶ್ರೀ ಭಾವೂಸಾಹೇಬ ಮಹಾರಾಜರು ಜಮಖಂಡಿಯ ಜಂಬಗಿ ಎಂಬೂರಿಗೆ ಆಗಮಿಸಿದ್ದರು. ಕಲ್ಲೂ ಭೋಕರೆ ಭಾವೂ ಸಾಹೇಬರಿಂದ ನಾಮೋಪದೇಶವನ್ನು ಪಡೆದರು. ನಾಸಿಕಾಗ್ರದ ಮೇಲೆ ದೃಷ್ಟಿಯೂರಿ ಏಕಭಾವದಿಂದ ನಾಮಸ್ಮರಣೆ ಮಾಡುವಂತೆ ಸ್ವಾಮೀಜಿ ಹೇಳಿದರು. ಕಲ್ಲೂ ನಿಷ್ಠೆಯಿಂದ ನಾಮಸ್ಮರಣೆಯನ್ನು ಆರಂಭಿಸಿದ. ಇದರ ಪರಿಣಾಮ ಎಂಬಂತೆ ಆದಷ್ಟು ಬೇಗ ಕ್ಲಲೂ ಭೋಕರೆಗೆ ದೇವರ ಸಾಕ್ಷಾತ್ಕಾರದ ಕೆಲವು ಅನುಭವವಾಗಲಾರಂಭಿಸಿತು. ಹಗಲಿನ ಸೂರ್ಯನ ಬೆಳಕಿನಲ್ಲೂ ತಾರೆಗಳು ಗೋಚರಿಸಲಾರಂಭಿಸಿದವು. ಇದರಿಂದ ಅವನಿಗೆ ದೇವರ ಮೇಲಿನ ಭಕ್ತಿ ಮತ್ತು ಸದ್ಗುರುವಿನ ಮೇಲಿನ ನಿಷ್ಠೆ ದೃಢಗೊಂಡಿತು. ಕ್ರಿ.ಶ. ೧೯೦೧ರಲ್ಲಿ ಕಲ್ಲೂ ಭೋಕರೆ ಮನೆಯ ಎದುರಿಗೆ ಕೂತಿದ್ದಾಗ ತನಗಾದ ಪಾರಮಾರ್ಥಿಕ ಅನುಭವವನ್ನು ಗುರುದೇವರಿಗೂ ಹೇಳಿದ. ನಾಮಸ್ಮರಣೆಯಿಂದ ಅತೀಂದ್ರಿಯ ಅನುಭವ ಬರುವುದು ಸಾಧ್ಯ. ಇದನ್ನು ಕೇಳಿ ಬಾಲಕ ರಾಮಭಾವೂಗೆ ಅಚ್ಚರಿ ಎನಿಸಿತು. ಅದರ ಬಗೆಗೆ ಕುತೂಹಲವೂ ಬೆಳೆಯಿತು. "Wonder is the source of Philosophy'' ಎಂದು ಗುರುದೇವ ಹೇಳಿದರು. ಆಗ ಅವರು ಇಂಗ್ಲಿಷ್ ಆರನೇ ಕ್ಲಾಸಿನಲ್ಲಿದ್ದರು. ಇದೇ ಕಾಲಕ್ಕೆ ಅವರು ಸ್ವಾಮಿ ವಿವೇಕಾನಂದರ ಗ್ರಂಥಗಳನ್ನು ಓದಲಾರಂಭಿಸಿದರು. ಕಿರುವಯಸ್ಸಿನಲ್ಲೇ ಅವರು ಶ್ರೇಷ್ಠ ವಿಷಯಗಳ ಬಗೆಗೆ ಆಸಕ್ತಿ ತೋರಿಸಿದ್ದು ಕಂಡಾಗ ಬೆರಗಾಗದೇ ಇರದು. ಇಂಗ್ಲಿಷ್ ಆರನೇ ಕ್ಲಾಸಿನಲ್ಲಿದ್ದಾಗಲೇ ಗುರುದೇವರ ಮದುವೆಯೂ ಆಗಿತ್ತು.

ಇದೇ ಸುಮಾರಿಗೆ ಶ್ರೀ ಕಾಡಾಪುರಕರ ಅವರ ಮನೆಯಲ್ಲಿ ಸದ್ಗುರು ಭಾವೂ ಸಾಹೇಬ ಮಹಾರಾಜರನ್ನು ಕಾಣುವ ಅವಕಾಶ ಲಭಿಸಿತು. ಅಲ್ಲಿ ನಡೆದ ಅಧ್ಯಾತ್ಮಿಕ ಅನುಭವದ ಬಗೆಗಿನ ಚರ್ಚೆ ಕೇಳಿ ಗುರುದೇವರ ಜಿಜ್ಞಾಸೆ ಜಾಗೃತಗೊಂಡಿತು. ಶ್ರೀ ಸಮರ್ಥರ ದಾಸಬೋಧೆಯ ಅರ್ಥವನ್ನು ವಿವರಿಸುವಾಗ ನಿಯಮಿತವಾಗಿ ದೇವರ ನಾಮಸ್ಮರಣೆ ಮಾಡಿದರೆ ಪರೀಕ್ಷೆಯಲ್ಲಿ ಸಹಜವಾಗಿ ಉತ್ತೀರ್ಣರಾಗುವುದು ಸಾಧ್ಯವೆಂದು ಸ್ವಾಮಿ ಮಹಾರಾಜರು ಹೇಳಿದರು. ಇದು ಗುರುದೇವರ ಎಳೆ ಮನಸ್ಸಿನ ಮೇಲೆ ಪರಿಣಾಮ ಬೀರಿತು. ಇದಾದ ಕೆಲದಿನಗಳ ಬಳಿಕ ಶಕೆ ೧೮೨೩ ವೈಕುಂಠ ಚತುರ್ದಶಿಯ ಶುಭದಿನದಂದು ಗುರುದೇವರು ಶ್ರೀ ಭಾವೂಸಾಹೇಬ ಮಹಾರಾಜರಿಂದ ನಾಮೋಪದೇಶವನ್ನು ಪಡೆದರು.

ಅದೇ ವರ್ಷ ಅವರು ಮೆಟ್ರಿಕ್ ಪರೀಕ್ಷೆಯ ಸಿದ್ಧತೆಯಲ್ಲಿ ತೊಡಗಿಕೊಂಡಿದ್ದರು. ಜಮಖಂಡಿಯಂತಹ ಚಿಕ್ಕ ಊರಲ್ಲಿ, ಉಜ್ವಲ ಯಶಸ್ಸಿನ ದೃಷ್ಟಿಯಿಂದ ವಿಶೇಷ ಪಾಠ ಹೇಳಿಕೊಡುವ ಯಾವುದೇ ಶಿಕ್ಷಕರ ಸಹಾಯವಿರದಿದ್ದಾಗಲೂ, ಸ್ವಂತ ಪ್ರಯತ್ನದಿಂದ, ದೈವದತ್ತ ಅಸಾಮಾನ್ಯ ಸ್ಮರಣಶಕ್ತಿಯ ಮತ್ತು ಬುದ್ಧಿಶಕ್ತಿಯ ಸಹಾಯದಿಂದ ಅವರು ಕ್ರಿ.ಶ. ೧೯೦೨ರಲ್ಲಿ ಮೆಟ್ರಿಕ್ ಪರೀಕ್ಷೆಗೆ ಹಾಜರಾದರು. ಎಂದೂ ಊರು ಬಿಡದ ಗುರುದೇವರು ಪರೀಕ್ಷೆಗಾಗಿ ಮುಂಬೈಗೆ ತೆರಳಿದರು. ಪರೀಕ್ಷೆ ಮುಗಿಸಿ ಮರಳಿದ ಬಳಿಕ, ಭಾವೂ ಸಾಹೇಬರಿಂದ ಪಡೆದ

ನಾಮಸ್ಮರಣೆಯನ್ನು ಪ್ರತಿದಿನ ರಾತ್ರಿ ಒಂದು ಗಂಟೆಯ ಕಾಲ ಜಪಮಾಲೆಯ ಸಹಾಯದಿಂದ ಕೈಕೊಳ್ಳುವ ಕ್ರಮವನ್ನು ಅವರು ಶುರು ಮಾಡಿದರು. ಈ ರೀತಿ ಸಕಾಮಭಕ್ತಿಯ ಸಹಾಯದಿಂದ ಬಾಲಗುರುದೇವರು ಪಾರಮಾರ್ಥದ ಪ್ರಾಂಗಣದಲ್ಲಿ ಪ್ರವೇಶ ಮಾಡಿದರು. ಅವರಿಗೆ ಇದರ ಅನುಭವ ಬಂತು. ವಿಶೇಷವಾಗಿ ಯಾರ ಮಾರ್ಗದರ್ಶನವಿಲ್ಲದಿದ್ದರೂ ಮೆಟ್ರಿಕ್ ಪರೀಕ್ಷೆಯಲ್ಲಿ ಉಜ್ವಲ ಯಶವನ್ನು ಸಂಪಾದಿಸಿದರು. ಅವರಿಗೆ ಸಂಸ್ಕೃತ ವಿಷಯಕ್ಕೆ ಸಂಬಂಧಿಸಿದ 'ಜಗನ್ನಾಥ ಶಂಕರ ಶೇಟ' ಶಿಷ್ಯವೃತ್ತಿಯು ಲಭಿಸಿತು. ಒಟ್ಟೂ ಅಂಕಗಳ ದೃಷ್ಟಿಯಿಂದ ಅಖಿಲ ಮುಂಬೈ ಯುನಿವರ್ಸಿಟಿಯಲ್ಲಿ ಎರಡನೇ ಕ್ರಮಾಂಕವನ್ನು ಗಿಟ್ಟಿಸಿದರು. ಈ ಅನಿರೀಕ್ಷಿತ ಘಟನೆಯಿಂದ ಅನುಪಮ ಯಶಸ್ಸಿನಿಂದಾಗಿ ಜಮಖಂಡಿಯ ಜನರಿಗೆ ತೀರ ಸಂತೋಷವೂ, ಬೆರಗೂ ಆಯಿತು. ಶ್ರೀಮಂತ ರಾಜೇಸಾಹೇಬ ಪಟವರ್ಧನರಿಗೂ ತಮ್ಮ ಸಂಸ್ಥಾನದಲ್ಲಿಯ ವಿದ್ಯಾರ್ಥಿಯು ಇಂಥ ಉಜ್ವಲ ಯಶಸ್ಸು ಸಂಪಾದನೆ ಮಾಡಿದ್ದು ಕೇಳಿ ತುಂಬ ಸಮಾಧಾನ ಪಟ್ಟರು. ಈ ಧನ್ಯತೆಯನ್ನು ವ್ಯಕ್ತ ಮಾಡಲು ಆನೆ ಅಂಬಾರಿಯ ಮೂಲಕ ಪೇಢೆ ಹಂಚಿದರು. ಈ ವಿಷಯವನ್ನು ಹೇಳುವಾಗ ಗುರುವರ್ಯ ರಾಮಭಾವೂರವರು ತಮ್ಮ ಮಾತೆಯ ಬಗ್ಗೆ, ಸದ್ಗುರು ಬಗ್ಗೆ, ಶಿಕ್ಷಕರ ಬಗ್ಗೆ, ರಾಜೇಸಾಹೇಬರ ಬಗ್ಗೆ ಗೌರವದ, ಕೃತಜ್ಞತೆಯ ಭಾವನೆಯನ್ನು ವ್ಯಕ್ತಮಾಡುತ್ತಾರೆ. ಗುರುದೇವರ ಜೀವನದಲ್ಲಿ ಸಮಾಜದ ದೃಷ್ಟಿಯಲ್ಲಿ ಕಣ್ಣುಕುಕ್ಕುವ ಕುಶಾಗ್ರಬುದ್ಧಿಯ ಮೊದಲ ಪ್ರಸಂಗ ಎನ್ನಬಹುದು.

ಹೀಗೆ ಗುರುವರ್ಯ ರಾಮಭಾವೂ ಅವರ ಅಂತಃಕರಣದಲ್ಲಿ ಸುಪ್ತವಾಗಿ ನೆಲೆಸಿದ ಉಜ್ವಲಯಶದ ಅಪೇಕ್ಷೆಯು ಅನಿರೀಕ್ಷಿತವಾಗಿ ಸಫಲಗೊಂಡಿದ್ದರಿಂದ ಸದ್ಗುರು ಬಗೆಗಿನ ಅವರ ಶ್ರದ್ಧೆ ಮತ್ತು ನಾಮದ ಸಾಮರ್ಥ್ಯದ ಮೇಲಿರುವ ಅವರ ನಿಷ್ಠೆಯು ದ್ವಿಗುಣ ಗೊಂಡಿತು. ಇದರಿಂದಾಗಿ ನಿಯಮಿತವಾಗಿ ಭಕ್ತಿಯಿಂದ ನಾಮಸ್ಮರಣೆ ಮಾಡುವುದು ಅವರ ಜೀವನಕ್ರಮದ ಪ್ರಿಯ ಕಾರ್ಯವಾಯಿತು. ಕ್ರಮೇಣ ಅವರ ನಾಮಭಕ್ತಿಯು ಬೆಳೆಯಲಾರಂಭಿಸಿತು. 'ಭಾವವಿದ್ದಲ್ಲಿ ದೇವರು' ಎಂಬಂತೆ, ಒಮ್ಮೆ ಜಮಖಂಡಿಯ ಶ್ರೀ ಭಾವೂರಾವ ಆಪ್ಟೆಯವರ ಮಹಡಿಯಲ್ಲಿ ಮಧ್ಯಾಹ್ನ ನಾಲ್ಕರ ಸುಮಾರಿಗೆ ಅವರಿಗೆ ದೇವರ ಸಾಕ್ಷಾತ್ಕಾರದ ಅನುಭವವಾಯಿತು. ಭಕ್ತನ ಪ್ರಾಪಂಚಿಕ ಕಾಮನೆಯನ್ನು ಈಡೇರಿಸಿ, ಪಾರಮಾರ್ಥಿಕ ಅನುಭವದ ದರ್ಶನ ಮತ್ತು ಶ್ರವಣದಿಂದ ಅವನನ್ನು ನಿಷ್ಕಾಮಗೊಳಿಸುವ ಸಾಮರ್ಥ್ಯವು ಸಾಕ್ಷಾತ್ಕಾರಿ ಸದ್ಗುರುವಿನಿಂದ ದೊರಕಿದ ಬೀಜವು ನಾಮದಲ್ಲಿ ಹೇಗಿದೆ ಎನ್ನುವುದು ಯುವ ಗುರುದೇವನಿಗೆ ಮನವರಿಕೆಯಾಯಿತು. ಈ ವಿಷಯವನ್ನು ಹೇಳುವಾಗ ಗುರುವರ್ಯ ರಾಮಭಾವೂರವರು ಉಪನಿಷತ್ತಿನ 'ಆಪ್ತಕಾಮೋ ಅವಾಪ್ತಕಾಮೋ ಪೂರ್ಣಕಾಮೋ ನಿಷ್ಕಾಮೋ ಭವತಿ' ಎಂಬ ವಾಕ್ಯವನ್ನು ಉದ್ಧರಿಸುತ್ತಾರೆ.

ಈ ಸಂದರ್ಭದಲ್ಲಿ ಅವರು ಸದ್ಗುರುವಿನಿಂದ ಲಭಿಸಿದ ಪಾರಮಾರ್ಥ ಸಂಪ್ರದಾಯದ ವೈಶಿಷ್ಟ್ಯವನ್ನು ಹೇಳುತ್ತಿದ್ದರು. ಯಾವ ನಾಮಸ್ಮರಣೆ ಭಕ್ತಿಯಿಂದ ಭವಸಾಗರವನ್ನು ಈಜಿ

ದಾಟಲು ಬರುವುದೋ, ಆ ನಾಮಭಕ್ತಿಗೆ ಕ್ಷುಲ್ಲಕ ಪ್ರಾಪಂಚಿಕ ವಿಷಯಾಸಕ್ತಿಯನ್ನು ಪೂರೈಸುವುದು ಅಸಾಧ್ಯವೇ? ಆದರೆ ಈ ವಿಷಯದಲ್ಲಿ ವಿವೇಕವನ್ನು ಜಾಗೃತವಾಗಿರಿಸುವ ಅಗತ್ಯವಿದೆ ಎಂದು ಗುರುದೇವ ಸದಾ ಹೇಳುತ್ತಿದ್ದರು. ಸದ್ಗುರು ಕೃಪೆಯಿಂದ ಸಬೀಜನಾಮದ ಕಾಮಧೇನು ತನಗೆ ಪೂರ್ವಸುಕೃತದಿಂದ ಲಭಿಸಿದೆ ಎಂದು ಕೇವಲ ಕ್ಷಣಭಂಗುರವಾದ ಮತ್ತು ಎಂದಿಗೂ ಮುಗಿಯದ ಪ್ರಾಪಂಚಿಕ ವಿಷಯಾಸಕ್ತಿಯ ಪರಿಪೂರ್ತಿಗಾಗಿಯೊ ಅದರ ಉಪಯೋಗ ಮಾಡುವುದು ತೀರ ಆತ್ಮಘಾತುಕವಾದ ವರ್ತನೆ ಎಂಬ ನಂಬಿಕೆ ಅವರದ್ದಾಗಿತ್ತು. ಹೀಗಾಗಿ ಸಕಾಲಕ್ಕೆ ಜಾಗೃತ ಗೊಂಡು ದೇವರ ಸ್ವರೂಪದ ಸಾಕ್ಷಾತ್ಕಾರದ ಧ್ರುವತಾರೆಯನ್ನು ಸದಾ ಕಣ್ಣೆದುರಿಗಿರಿಸ ಬೇಕು. ಈ ರೀತಿಯಲ್ಲಿ ನಿಸ್ಸೀಮ ಭಕ್ತಿಯನ್ನು ಮಾಡುತ್ತಲಿದ್ದರೆ, ಪರಮಾರ್ಥ ಪಥದಲ್ಲಿ ಖಂಡಿತವಾಗಿಯೂ ಪ್ರಗತಿಯಾಗುವುದೆಂಬ ಜೀವನನಿಷ್ಠೆಯು ಗುರುದೇವ ಅವರದ್ದಾಗಿತ್ತು. ಅವರು ಪರಮಾರ್ಥ ಸಾಧನೆಯನ್ನು ಐಹಿಕ ನೌಕರಿಗೆ ಹೋಲಿಸುತ್ತಿದ್ದರು. ದೀರ್ಘಕಾಲ ನಿರಂತರ ಮತ್ತು ಅಂತರಂಗ ಭಕ್ತಿಯಿಂದ ನಾಮಸ್ಮರಣೆ ಮಾಡುವ ಸಾಧಕನಿಗೆ ಶಾಶ್ವತವಾದ ಪಾರಮಾರ್ಥಿಕ ಉದ್ಯೋಗ ಸಿಗಬಲ್ಲದು ಎಂದೆನ್ನುತ್ತಿದ್ದರು. ಇಂಥ ಬಗೆಯ ಬುದ್ಧಿಯಿಂದ ಹೊಳೆಯುವ ಗುರುದೇವರು ಶೈಕ್ಷಣಿಕ, ಪಾರಮಾರ್ಥಿಕ ಎರಡೂ ಕ್ಷೇತ್ರಗಳಲ್ಲಿ 'ಉಭಯಮೇವ ಸಮ್ರಾಟ'ರಾಗುವ ಪಥದ ಮೇಲೆ ಮುನ್ನಡೆಯಲಾರಂಭಿಸಿದರು.

ಗುರುದೇವ ಅವರ ಅಸಾಮಾನ್ಯ ಬುದ್ಧಿಯನ್ನು ಕಂಡು ಮೆಟ್ರಿಕ್ ಪರೀಕ್ಷೆಯ ಬಳಿಕ ಉನ್ನತ ಶಿಕ್ಷಣಕ್ಕಾಗಿ ಅವರ ಮಾತಾಪಿತರು ಪುಣೆಗೆ ಕಳಿಸುವ ನಿರ್ಧಾರ ಮಾಡಿದರು. ಪುಣೆಯ ಪ್ರಸಿದ್ಧವಾದ 'ಡೆಕ್ಕನ್ ಕಾಲೇಜ್'ನಲ್ಲಿ ಉನ್ನತ ಶಿಕ್ಷಣ ಪಡೆಯುವ ನಿರ್ಧಾರವನ್ನು ಗುರುದೇವರು ಮಾಡಿದರು. ಎತ್ತಿನ ಬಂಡಿಯನ್ನು ಏರಿ ಗುರುದೇವರು ಜಮಖಂಡಿಯಿಂದ ಕುಡಚಿ ರೇಲ್ವೆ ನಿಲ್ದಾಣಕ್ಕೆ ಬಂದರು. ೧೯೦೩ರಲ್ಲಿ ಅವರು ಉಚ್ಚ ಶಿಕ್ಷಣದ ಕ್ಷೇತ್ರವನ್ನು ಪ್ರವೇಶಿಸಿದರು.

ಗುರುದೇವರ ತೀಕ್ಷ್ಣಬುದ್ಧಿಯು ಮಹಾವಿದ್ಯಾಲಯ ಕ್ಷೇತ್ರದಲ್ಲೂ ತನ್ನ ತೇಜಸ್ಸನ್ನು ತೋರದೆ ಬಿಡಲಿಲ್ಲ. ಮಾತೋಶ್ರೀಯವರಿಂದ ಪಡೆದ ಸಾತ್ವಿಕ ಸಂಸ್ಕಾರವನ್ನು ಅವರು ಕಾಲೇಜು ಜೀವನದಲ್ಲೂ ಅತ್ಯಂತ ಕಟಾಕ್ಷದಿಂದ ಪಾಲಿಸಿದರು. ತಾಯಿ ಪಾರ್ವತಿ ಬಾಯಿಯವರು 'ನಿನ್ನ ನಿಜವ ನೀ ತಿಳಿ' ಎಂಬ ಅರಿವನ್ನು ತಂದುಕೊಟ್ಟಿದ್ದರು. ಅದರಂತೆ ತರುಣ ಗುರುದೇವರಿಗೆ ಕ್ರಿ.ಶ. ೧೯೦೧ರಲ್ಲಿ ಸಮರ್ಥ ಶ್ರೀ ಭಾವೂಸಾಹೇಬ ಮಹಾರಾಜರಿಂದ ನಾಮೋಪದೇಶ ಲಭಿಸಿತ್ತು. ಮಾತೆಯ ಬೆಂಬಲದಿಂದ ಈ ಸಬೀಜ ನಾಮಕ್ಕೆ ಮತ್ತಷ್ಟು ಅವಕಾಶ ಸಿಕ್ಕಂತಾಯಿತು.

ಕಾಲೇಜಿನಲ್ಲಿ ಅವರು ಸ್ನಾನಾದಿ ನಿತ್ಯಕರ್ಮವನ್ನು ಹಾಗೂ ಮಡಿಯಿಂದ ಭೋಜನವನ್ನು ಸಿದ್ಧಪಡಿಸುವ ಕಾರ್ಯವನ್ನು ನಿಸ್ಸಂಕೋಚದಿಂದ ಮಾಡಲಾರಂಭಿಸಿ ದರು. ಅವರ ನಾಮಸ್ಮರಣೆಯು ಬೆಳೆಯುತ್ತ ಸಾಗಿದಂತೆ ಅವರ ನಿತ್ಯ ನೈಮಿತ್ತಿಕ ಕೆಲಸದ ಬಂಧನ ಸಡಿಲಾಯಿತು. ಯುನಿವರ್ಸಿಟಿಯ ಪ್ರಿವಿಯಸ್ ಪರೀಕ್ಷೆಯಲ್ಲಿ ಮೊದಲ ಕ್ರಮಾಂಕವನ್ನು ಗಿಟ್ಟಿಸಿದರು. ಇಂಟರ್ ಆರ್ಟ್ಸ್ ಪರೀಕ್ಷೆಯಲ್ಲಿ ಸಂಸ್ಕೃತದ ಮೊದಲ 'ವರಜೀವನದಾಸ' ಶಿಷ್ಯವೃತ್ತಿಯನ್ನು ಪಡೆದರು.

ಮುಂದೆ ಪದವಿ ಪರೀಕ್ಷೆಗಾಗಿ ಐಚ್ಛಿಕ ಸಂಸ್ಕೃತ ಇಲ್ಲವೇ ತತ್ವಜ್ಞಾನವನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು. ಕಂಠಪಾಠ ಮಾಡಿ ಸಂಸ್ಕೃತದಲ್ಲಿ ಯಶ ಪಡೆಯುವುದಕ್ಕಿಂತ ಗಣಿತ ವಿಷಯದಲ್ಲಿ ಯಶಸ್ಸನ್ನು ಪಡೆಯುವುದು ನಿಜವಾದ ಜಾಣತನವೆಂದವರ ಗೆಳೆಯರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಗುರುದೇವರು The Evolution of my own thought ಎಂಬ ಲೇಖನದಲ್ಲಿ ಹೇಳಿದ್ದು ಹೀಗೆ– 'ಬಾಲ್ಯದಿಂದಲೂ ನನ್ನ ಯೋಚನೆಯ ಉತ್ಕ್ರಾಂತಿಯನ್ನು ನೋಡಿದಾಗ ನನಗೇ ಬೆರಗಾಗುತ್ತಿತ್ತು. ನನ್ನ ವಿಚಾರಗಳ ಲಂಬಕ ತೀರ ವಿರುದ್ಧ ತುದಿಗೆ ವಾಲಿದೆ. ೧೯೦೫ರಲ್ಲಿ ನನ್ನ ಸೋದರಮಗ ಬಿ.ಎ. ಪರೀಕ್ಷೆಯಲ್ಲಿ ತತ್ವಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳದಂತೆ ಪರಾವೃತ್ತಗೊಳಿಸಿದೆ. ನಾನು ಸ್ವತಃ ಗಣಿತವನ್ನು ಆಯ್ಕೆ ಮಾಡಿಕೊಂಡೆ. ಏಕೆಂದರೆ ಗಣಿತದಂತಹ ಖಚಿತ ವಿಷಯವನ್ನು ಬಿಟ್ಟು ಶಾಸ್ತ್ರದ ಆಳವಾದ ಅಧ್ಯಯನ ಮಾಡುವುದು ಸಾಧ್ಯವಿರಲಿಲ್ಲ. ಅವರು ಗಣಿತಕ್ಕೆ ಸಂಬಂಧಿಸಿದ ದೇಶ–ವಿದೇಶದ ವಿದ್ವಾಂಸರ ಗ್ರಂಥವನ್ನು ತರಿಸಿ ಅಧ್ಯಯನವನ್ನು ಆರಂಭಿಸಿದರು.

ನಾಮದೇವನಿಗೆ ತುಕಾರಾಮನು ಸ್ವಪ್ನ ದೃಷ್ಟಾಂತ ಮಾಡಿದಂತೆ ಗುರುದೇವರ ಸದ್ಗುರು ಅವರ ಕನಸಿನಲ್ಲಿ ದರ್ಶನವನ್ನು ನೀಡಿ, ಅವರ ಅಹಂಕಾರದ ಗಂಟನ್ನು ಸಡಿಲುಗೊಳಿಸಿದರು. ಕೂತಾಗ, ನಿಂತಾಗ, ಮಲಗಿದಾಗ, ಸುಖ–ದುಃಖದಲ್ಲಿದ್ದಾಗ, ಕಾಮನೆ ಅಥವಾ ನಿಷ್ಕಾಮದಲ್ಲಿದ್ದಾಗ–ಭಕ್ತಿಯಿಂದ ನಾಮಸ್ಮರಣೆ ಮಾಡಿದರೆ ವಿಠ್ಠಲನ ಕೃಪೆಯಿಂದ ವ್ಯರ್ಥವಾಗುವುದು ಸಾಧ್ಯವಿಲ್ಲವೆಂದು ಗುರುದೇವರು ನಂಬಿದ್ದರು.

ಒಂದು ವರ್ಷದ ವಿಶ್ರಾಂತಿಯ ಬಳಿಕ ೧೯೦೭ರಲ್ಲಿ ಅವರು ಬಿ.ಎ. ಪರೀಕ್ಷೆಗೆ ಹಾಜರಾದರು. ವಿಶ್ರಾಂತಿಯ ಕಾಲದಲ್ಲಿ ನಿರಂತರವಾಗಿ ನಾಮಸ್ಮರಣೆಯಂತೂ ಮುಂದುವರಿದೇ ಇತ್ತು. ಗುರುದೇವರ ಅಂತರಂಗದಲ್ಲಿರುವ ಅಹಂಭಾವದ ಗಂಟನ್ನು ಸಡಿಲು ಮಾಡಲು ಸದ್ಗುರು ಶ್ರೀ ಭಾವೂ ಸಾಹೇಬ ಮಹಾರಾಜರು ಹಲವು ಬಾರಿ ಅವರ ಕನಸಿನಲ್ಲಿ ಬಂದು ಕಾಣಿಸಿಕೊಂಡರು. ಕನಸಿನಲ್ಲಿ ಸದ್ಗುರು ಅವರಿಗೆ ಚೆಂಡು ಹೂವಿನ ಹಾರವನ್ನು ಹಾಕಲು ಬಂದಾಗ ಗುರುದೇವರು ನಿರಾಕರಿಸಿದರಂತೆ. ಎರಡನೇ ಸಲ ಗೋಪಿಚಂದನವನ್ನು ಇಡಲು ಮುಂದಾದಾಗಲೂ ನಿರಾಕರಿಸಿದರು. ಮೂರನೇ ಸಲ ಧಾರ್ಮಿಕ ಗ್ರಂಥದ ಪಠನ ಮಾಡಲು ಹೇಳಿದಾಗ, ಗುರುದೇವರು ಅವರ ಮಾತನ್ನು ಪಾಲಿಸಲಿಲ್ಲ. ಅಂತಿಮವಾಗಿ ನಂದಿಕೋಲು ಹಿಡಿದು ದೇವರ ಎದುರು ನಿಲ್ಲುವಂತೆ ಸೂಚಿಸಿದಾಗ ನಾಚಿ ನಿರಾಕರಿಸಿದರು. ಹೀಗೆ ಕನಸಿನಲ್ಲಿ ಸದ್ಗುರುವಿನ ಆಜ್ಞೆಯನ್ನು ನಿರಾಕರಿಸಿ ಅಪಮಾನಗೊಳಿಸಿದ ಪಶ್ಚಾತ್ತಾಪದಿಂದ, ಅವರ ಜೀವನದಲ್ಲಿ ಭಯಂಕರ ಕ್ರಾಂತಿ ನಡೆಯಿತು. ಈ ಪಶ್ಚಾತ್ತಾಪದಿಂದ ಅವರು ದೇವರ ಕಡೆಗೆ ಒಲಿದರು. All my faults have led me near God. My very sins have been incentive to

spiritual life ಎಂದವರು ನಿವೇದನೆ ಮಾಡಿದ್ದಾರೆ. ಹಾಗೆಯೇ ಕೃಪೆ ಮಾಡುವಂತೆ ಕೋರಿ ಸದ್ಗುರುವಿಗೊಂದು ಪತ್ರವನ್ನೂ ಬರೆದರು. 'ನಾಮ ಮತ್ತು ವಸ್ತುವಿನ ಮೇಲೆ ದೃಷ್ಟಿ ಇರಿಸಿದರೆ ತಾನಾಗಿಯೇ ಕೃಪೆ ಲಭಿಸುವುದು' ಎಂದು ಸದ್ಗುರುವಿನಿಂದ ಉತ್ತರವೂ ಬಂತು. ಅದರಂತೆ ಗುರುದೇವರು ಪ್ರಾಮಾಣಿಕ ಪ್ರಯತ್ನವನ್ನೂ ಮಾಡಿದರು. ಪದವಿ ಪರೀಕ್ಷೆಯಲ್ಲಿ ಉಜ್ವಲ ಯಶವನ್ನು ಸಂಪಾದಿಸಲು ಅವರು ಸಾಕಷ್ಟು ಶ್ರಮವಹಿಸಿ ಓದಿದರು. ಮೂಲತಃ ಪ್ರತಿಭಾವಂತರಾಗಿದ್ದರಿಂದ ೧೯೦೭ರ ಬಿ.ಎ. ಪರೀಕ್ಷೆಯಲ್ಲಿ ಯಶವನ್ನು ಸಂಪಾದಿಸಿದರು. ಆದರೆ ಈ ಎಲ್ಲ ಪ್ರಯತ್ನಗಳ ನಡುವೆಯೂ ಅವರೆಂದೂ ನಾಮಸ್ಮರಣೆಯನ್ನು ಪಾರಮಾರ್ಥಿಕ ಸಾಧನೆಯನ್ನು ಬಿಡಲಿಲ್ಲ.

ಕನಸಿನಲ್ಲಿ ಸದ್ಗುರುವಿನ ಮಾರ್ಗದರ್ಶನ ಲಭಿಸಿದಂತೆ ಜಾಗೃತಾವಸ್ಥೆಯಲ್ಲಿ ಕೆಲವು ಅದೃಶ್ಯ ಮತ್ತು ಅತೀಂದ್ರಿಯ ಶಕ್ತಿಯ ಸಹಾಯದಿಂದ ಭಾವೀ ಘಟನೆಗಳ ಸೂಚನೆ ಸಿಗುತ್ತಿತ್ತು. ಕಾಲೇಜ್ ಜೀವನದಲ್ಲಿ ನಡೆದ ಒಂದು ಘಟನೆ ಅವರು ಪುಣೆಯಲ್ಲಿ ದ್ದಾಗ, ಜಮಖಂಡಿಯಲ್ಲಿದ್ದ ಅವರ ತಂದೆಯವರು ಆಕಸ್ಮಿಕ ಅನಾರೋಗ್ಯದಿಂದ ಮೃತ್ಯುಶಯ್ಯೆಯಲ್ಲಿದ್ದರು. ಆಗ ಗುರುದೇವರಿಗೆ ತಮಗೊಂದು ತಂತಿ ಸಂದೇಶ ಬಂದ ಭ್ರಮೆಯಾಯಿತು. ಆ ತಂತಿಯು 'ಸಾವಿನ ಲೋಕ'ದಿಂದ ರವಾನಿಸಲಾಗಿತ್ತು. 'ನಾನಿಲ್ಲಿ ಸುಖರೂಪದಿಂದ ತಲುಪಿದ್ದೇನೆ, ಆಶೀರ್ವಾದ' ಎಂಬ ಬರೆಹ ತಂತಿ ಸಂದೇಹದಲ್ಲಿತ್ತು. ಕೊನೆಗೆ ಅವರ ಪಿತನ ಹೆಸರು ಇತ್ತು. ತಕ್ಷಣ ಗುರುದೇವರು ಜಮಖಂಡಿಗೆ ಧಾವಿಸಿದರು. ಅಲ್ಲಿ ಹೋಗಿ ನೋಡಿದಾಗ ತಂದೆಯವರು ದೇಹವನ್ನು ತೊರೆದಿದ್ದರು. ಈ ವಿಷಯ ಗುರುದೇವರ ಒಬ್ಬ ವಿದ್ಯಾರ್ಥಿಯಿಂದ ತಿಳಿದು ಬಂತು. ಗುರುದೇವರು ಫರ್ಗ್ಯೂಸನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ, ಮಕ್ಕಳಿಗೆ ಈ ಸಂಗತಿಯನ್ನು ಹೇಳಿದ್ದರಂತೆ.

ಸಾಧಕ ಗುರುದೇವರ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಇಂಥ ಕಠಿಣ ಪ್ರಸಂಗ ಬಂದಾಗಲೆಲ್ಲ ದೇವರ ಆಧಾರ ನೀಡುವದು ಮನವರಿಕೆಯಾಗಿ ಅವರ ಶ್ರದ್ಧೆಯು ಮತ್ತಷ್ಟು ಹುರಿಗೊಂಡಿತು. ಅವರು ಯಾವುದೇ ಕಾರ್ಯವನ್ನು ಕೈಗೆತ್ತಿಕೊಂಡರೂ ದೇವರ ಸ್ಮರಣೆ ಮಾಡುತ್ತಿದ್ದರು. 'ರಘುನಾಥನನ್ನು ಸ್ಮರಿಸಿ ಕಾರ್ಯಮಾಡಿ' ಎಂದು ಸಮರ್ಥ ರಾಮದಾಸರು ಹೇಳುತ್ತಿದ್ದರು.

ಈ ರೀತಿ ಪಾರಮಾರ್ಥಿಕ ಮನೋವೃತ್ತಿಯ ಹಿನ್ನೆಲೆಯಿಂದಾಗಿ ಅವರ ಶೈಕ್ಷಣಿಕ ಜೀವನವು ಉತ್ತರೋತ್ತರ ವಿಕಾಸವನ್ನು ಹೊಂದಲಾರಂಭಿಸಿತು. ಹೀಗೆ ಸಂಸ್ಕೃತದಲ್ಲಿ ಪ್ರಭುತ್ವ ಹೊಂದಿದ ಗುರುದೇವರು ಬಿ.ಎ. ಗಣಿತದಲ್ಲೂ ಉಚ್ಚಶ್ರೇಣಿಯಲ್ಲಿ ತೇರ್ಗಡೆ ಯಾದರು. ಸಂಸ್ಕೃತವನ್ನು ಎರಡನೇ ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿದ್ದರಿಂದ 'ಭಾವೂದಾಜಿ' ಪಾರಿತೋಷಕವೂ ಲಭಿಸಿತು. ಈ ರೀತಿ ಅವರ ಕುಶಾಗ್ರ ಬುದ್ಧಿಯ ವಿಶಾಲ ನೆಗೆತವು ಎಲ್ಲರಿಗೂ ಮನವರಿಕೆಯಾಗಲಾರಂಭಿಸಿತು.

ಪ್ರತಿವರ್ಷದಂತೆ ೧೯೦೭ರಲ್ಲಿ ಶ್ರೀ ಸದ್ಗುರು ಭಾವೂಸಾಹೇಬ ಮಹಾರಾಜರು ಜಮಖಂಡಿಯ ದಾದಾಸಾಹೇಬ ಆಪ್ಟೆಯವರ ಮನೆಗೆ ನಾಮಸಪ್ತಾಹಕ್ಕಾಗಿ ಆಗಮಿಸಿದ್ದರು.

ಆಗ ಗುರುದೇವರು ಪದವಿ ಪರೀಕ್ಷೆಯನ್ನು ಮುಗಿಸಿ ಊರಿಗೆ ಮರಳಿದ್ದರು. ಹೀಗಾಗಿ ಮಹಾರಾಜರ ಭಜನೆಯ ಕಾಲಕ್ಕೆ ತಪ್ಪದೇ ಹಾಜರಾಗಲಾ ರಂಭಿಸಿದರು. ಒಂದು ದಿನ ಮಹಾರಾಜರು ಗುರುದೇವರಿಗೆ ಧಾರ್ಮಿಕ ಗ್ರಂಥ ಪಠಣ ಮಾಡುವಂತೆ ಹೇಳಿದರು. ಪಠಣ ಮಾಡುವ ನಿತ್ಯದ ಸಾಧಕರಿದ್ದರೂ ಈ ಕೆಲಸವನ್ನು ಗುರುದೇವರಿಗೆ ಒಪ್ಪಿಸಿದರು. ಆಗ ಗುರುದೇವರು ತಮಗೆ ಗ್ರಂಥಪಠಣದ ರೂಢಿಯಿಲ್ಲ, ಅಲ್ಲದೆ ಆರಂಭದಲ್ಲಿ ಹೇಳುವ ನಮನದ ಶ್ಲೋಕವೂ ತಮಗೆ ಗೊತ್ತಿಲ್ಲ ಎಂದರು. ಉಳಿದ ಎಲ್ಲ ವ್ಯವಸ್ಥೆಯನ್ನು ತಾನು ಮಾಡುತ್ತೇನೆ. ನೀವು ಕೇವಲ ಗುರುಬೋಧೆಯನ್ನು ಓದಿದರೆ ಸಾಕು ಎಂದರು ಸದ್ಗುರು. ಕೊನೆಗೆ ಉಪಾಯವಿಲ್ಲದೆ ದಾಸಬೋಧೆಯ ಪಠಣವನ್ನು ಮಾಡಿದರು. ಭಜನೆಯೂ ಮುಗಿಯಿತು. ಸದ್ಗುರುಗಳು ಕೆಲವೇ ಸಾಧಕ ರೊಂದಿಗೆ ಆಪ್ತಸಮಾಲೋಚನೆ ನಡೆಸಿದರು. 'ನಿನ್ನಜ್ಜನ ಕೀರ್ತಿಯೂ ಈ ಹುಡುಗನ ಪುಣ್ಯದಿಂದ ಸಪ್ತ ಸಮುದ್ರದ ಆಚೆಗೆ ಹೋಗಲಿದೆ' ಎಂದು ಸದ್ಗುರುಗಳು ಶ್ರೀ ನಿಂಬರಗಿಕರ ಮಹಾರಾಜರರ ಮೊಮ್ಮಗನಾದ ಶ್ರೀ ನಾಗಪ್ಪನಿಗೆ ಹೇಳಿದರು. ಇಂಥ ಸಾಧಕ ಹುಡುಗನಿಗೆ ಅಭಿಮಾನ ಕಿಂಚಿತ್ತೂ ಇರಬಾರದೆಂಬ ಕಾರಣಕ್ಕಾಗಿ ಗ್ರಂಥಪಠಣ ಮಾಡಲು ಹೇಳಿರುವುದಾಗಿ ತಿಳಿಸಿದರು.

ಭೂತ–ವರ್ತಮಾನ–ಭವಿಷ್ಯದ ಘಟನೆಗಳ ತೌಲನಿಕ ಪರೀಕ್ಷೆಯಿಂದ ಗುರು–ಶಿಷ್ಯರ ಪಾರಮಾರ್ಥಿಕ ಶ್ರೇಷ್ಠತೆಯು ಎಲ್ಲರಿಗೂ ಗೋಚರಿಸುವಂತಿತ್ತು. ಅಂಥ ಒಂದೆರಡು ಘಟನೆಯನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗಲಾರದು. ಎರಡು ವರ್ಷಗಳ ಹಿಂದೆ ಫ್ರಾನ್ಸಿನಿಂದ ತತ್ವಜ್ಞಾನಿ ಹಾಗೂ ಮನಶ್ಶಾಸ್ತ್ರಜ್ಞರೂ ಆದ ಡಾ. ಡಿ. ಮಾರ್ಕೆಟ್ ದಂಪತಿಗಳು ನಿಂಬಾಳ ಆಶ್ರಮಕ್ಕೆ ಆಗಮಿಸಿದ್ದರು. ಅವರು ಗುರುದೇವರ ಸಾನಿಧ್ಯದಲ್ಲಿ ಎಂಟು ದಿನ ಕಳೆದರು. ಅಲ್ಲಿಯ ನಿತ್ಯಕರ್ಮವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಸಂಶಯವನ್ನು ನಿವಾರಣೆ ಮಾಡಿಕೊಂಡರು. ಗುರುದೇವರ ಪಾರಮಾರ್ಥಿಕ ಶ್ರೇಷ್ಠತೆಯು ಅರಿವಿಗೆ ಬಂದು ಅವರಿಂದ ನಾಮೋಪದೇಶವನ್ನು ಪಡೆದರು. ಯುರೋಪಿಯನ್ ಕ್ರೈಸ್ತದಂಪತಿಗಳಿಗೆ ಯಾವ 'ನಾಮ' ಉಪದೇಶ ಮಾಡಬೇಕೆಂಬ ಮಾರ್ಗದರ್ಶನವು ತಮಗೆ ದೇವರಿಂದ ಲಭಿಸಿದೆ ಎಂದು ಗುರುದೇವರು ತಮ್ಮ ಗುರುಬಂಧುವಿಗೆ ಹೇಳಿದರು. ಹೀಗೆ ಪ್ರತ್ಯಕ್ಷ 'ನಾಮ' ಲಭಿಸಿದ ಬಳಿಕ ಆ ಪಾಶ್ಚಾತ್ಯ ದಂಪತಿಗಳಿಗೂ ಅಚ್ಚರಿಯೆನಿಸಿತು.

ಅದೇ ರೀತಿ ತಮ್ಮ ಸಂಪೂರ್ಣ ಆಯುಷ್ಯವನ್ನು ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡರೂ ಸಮಾಧಾನ ಸಿಗದಿರುವ ಕೆಲ ದೇಶಭಕ್ತರು ಗುರುದೇವರಿಂದ 'ನಾಮ'ವನ್ನು ಪಡೆದು ಅದರಿಂದ ಸಮಾಧಾನ ಲಭಿಸಿದ್ದರಿಂದ ಅವರನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಎಷ್ಟೋ ವೈದ್ಯರು ವಿದೇಶಿಗಳಿಗೆ ಹೋಗಿ ವೈದ್ಯಕೀಯ ಶಾಸ್ತ್ರದಲ್ಲಿ ಹೆಚ್ಚಿನ ಜ್ಞಾನವನ್ನು ಗಳಿಸಿ, ಇಲ್ಲಿಯ ದೊಡ್ಡ ನಗರಗಳಲ್ಲಿ ನೆಲೆಸಿ ಲಕ್ಷಾಂತರ ರೂಪಾಯಿ ಗಳಿಸಿದರೂ ನೆಮ್ಮದಿ ಸಿಗದೆ, ನಿಂಬಾಳಕ್ಕೆ ಬಂದು ಗುರುದೇವರಿಂದ ನಾಮಾದೇಶ ಪಡೆದು ಶಾಶ್ವತ ಸುಖದ ಗುರುಮಂತ್ರವನ್ನು ಪಡೆದಿದ್ದಾರೆ. ಪರಮಾರ್ಥ ಭಕ್ತಿಯಲ್ಲಿ ಉಚ್ಚನೀಚರೆಂಬ

ಭಾವನೆಯಾಗಲಿ, ದೇಶ, ಭಾಷೆ, ಪಂಥವಾಗಲಿ ಇರುವುದಿಲ್ಲ. ಹೀಗಾಗಿ ನಿರಕ್ಷರಿಯಿಂದ ವಿದ್ವಾಂಸರ ವರೆಗೆ, ವ್ಯಾಪಾರಿಯಿಂದ ಅಧಿಕಾರಿ ವರೆಗೆ ಎಲ್ಲರೂ ಗುರುದೇವರ ಬಳಿಗೆ ಧಾವಿಸಿ ಬರುತ್ತಾರೆ.

ಹೀಗೆ ಎಲ್ಲ ಸ್ತರದ ಭಕ್ತಾದಿಗಳು 'ನಾಮ'ದಿಂದ ಪುನೀತರಾಗಲು, ಜೀವನದಲ್ಲಿ ಸುಖವನ್ನು ಪಡೆಯಲೆಂದು ಗುರುದೇವರ ಪಾದದ ಬಳಿಗೆ ಬರುತ್ತಾರೆ. ಹೀಗಾಗಿ ಈ ೨೦ನೇ ಶತಮಾನದಲ್ಲೂ ನಾಮಸ್ಮರಣೆ–ಭಕ್ತಿಯು ದೊಡ್ಡ ಪ್ರಮಾಣದಲ್ಲಿ ಪ್ರಸಾರಗೊಳ್ಳಲು ಗುರುದೇವರ ವ್ಯಕ್ತಿತ್ವವೇ ಕಾರಣ. ಸಾವಿರಾರು ಸ್ತ್ರೀ ಪುರುಷರು ಅವರ ಶಿಷ್ಯತ್ವವನ್ನು ಪಡೆದು ಧನ್ಯರಾದರು. ಅವರ ಶಿಷ್ಯವರ್ಗವು ಉತ್ತರ ಭಾರತದ ದಿಲ್ಲಿ, ಬನಾರಸ ವರೆಗೂ, ಮಧ್ಯಭಾರತದ ಗ್ವಾಲೇರ, ನಾಸಿಕ, ಮುಂಬೈ–ಪುಣೆ ವರೆಗೂ, ದಕ್ಷಿಣದಲ್ಲಿ ಬೆಳಗಾವಿ–ವಿಜಯಪುರ, ಮೈಸೂರು–ಬೆಂಗಳೂರ ವರೆಗೂ ಹರಡಿದೆ. ಶ್ರೀ ಭಾವೂ ಸಾಹೇಬ ಮಹಾರಾಜರ ಮೇಲಿನ ಶ್ರದ್ಧೆ ದೃಢವಾಗಲು ಬಾಲಮಿತ್ರ ಭೋಕರೆ ಮತ್ತು ನಂದೆಪ್ಪಣ್ಣ ಇವರೇ ಕಾರಣರೆಂದು ಗುರುದೇವರು ಆಗಾಗ ಕೃತಜ್ಞತೆಯಿಂದ ಅವರನ್ನು ನೆನೆಯುತ್ತಾರೆ.

■■

# ಗುರುದೇವರ ಸದ್ಗುರುಭಕ್ತಿ

'The secret of Education lies in respecting the pupil' ಎಂಬ ಇಮರ್ಸನ್‌ನ ಮಾತಿನಂತೆ ೧೯೦೮ರಲ್ಲಿ ಗುರುದೇವರನ್ನು ಡೆಕ್ಕನ್ ಕಾಲೇಜಿನಲ್ಲಿ 'ದಕ್ಷಿಣಾಫೆಲೋ' ಎಂದು ನೇಮಿಸಿಕೊಳ್ಳಲಾಯಿತು. ಹೀಗಾಗಿ ಅವರು ವಸತಿಗೃಹದಲ್ಲೇ ವಾಸಿಸಬೇಕಾಯಿತು. ಪರಮಾರ್ಥ ಸಾಧನೆ, ಸಂತ ಸಾಹಿತ್ಯದ ಅಧ್ಯಯನ ಮತ್ತು ಸ್ನಾತಕೋತ್ತರ ಶಿಕ್ಷಣದ ಪ್ರಗತಿಗೆ ಬೇಕಾದ ಸರ್ವಬೌದ್ಧಿಕ ಪರಿಶ್ರಮದಲ್ಲಿ ಕಾಲ ಕಳೆಯಲಾರಂಭಿಸಿದರು. ೧೯೦೮–೧೯೧೦ರ ಕಾಲಾವಧಿಯಲ್ಲಿ ಜ್ಞಾನದೇವ, ತುಕಾರಾಮ, ರಾಮದಾಸರು ಅವರ ಮೇಲೆ ಮುನಿದಿದ್ದಾರೆ.. ಸ್ವಂತ ಸಾಹಿತ್ಯವನ್ನು ವ್ಯವಹಾರಿಕ ದೃಷ್ಟಿಯಿಂದ ಅಧ್ಯಯನ ಮಾಡಬೇಕೆಂದು ಸ್ವಪ್ನ ದೃಷ್ಟಾಂತವಾಯಿತು. ಎರಡು ವರ್ಷಗಳ ವರೆಗೆ ಮಾಡಿದ ಆಳವಾದ ವ್ಯಾಸಂಗದಿಂದಾಗಿ 'ರಾಮದಾಸ ವಚನಾಮೃತ' ರಚನೆಗೊಂಡಿತು.

೧೯೦೮ರ ಅಕ್ಟೋಬರ್‌ನಲ್ಲಿ ಒಮ್ಮೆ ಡೆಕ್ಕನ್ ಕಾಲೇಜಿನ ಬಯಲಿನಲ್ಲಿ ನಡೆದ ಕ್ರಿಕೆಟ್ ಮ್ಯಾಚ್‌ನ್ನು ನೋಡುತ್ತ ಸತತ ಆರು ಗಂಟೆಗಳ ಕಾಲ ಕೂತಿದ್ದರು. ಆಗ ಒಮ್ಮೆಲೆ ಸಂಪೂರ್ಣ ನಭೋ ಮಂಡಳ ಅಲೌಕಿಕ ತೇಜದ ಬಿಂದುವಿನಿಂದ ವ್ಯಾಪಿಸಿಕೊಂಡಿದೆ ಎಂಬ ಅತೀಂದ್ರಿಯ ಪಾರಮಾರ್ಥಿಕ ಅನುಭವ ಅವರಿಗಾಯಿತು. ಈ ಪಾರಮಾರ್ಥಿಕ ಅನುಭವದ ಬೌದ್ಧಿಕ ಚಿತ್ರವನ್ನು ಅವರು 'ವಿಶ್ವದ ಮಧ್ಯ ಬಿಂದು' (The Centre of the Universe) ಎಂಬ ವೈಚಾರಿಕ ಲೇಖನದಲ್ಲಿ ಕಾರ್ಲೈಲ್‌ನ ಶೈಲಿಯ ಅನುಕರಣೆಯನ್ನು ಮಾಡಿ, ಕಾವ್ಯಮಯ ಆಂಗ್ಲ ಭಾಷೆಯಲ್ಲಿ ನೀಡಿದ್ದಾರೆ. ಈ ಅಸೀಮ ವಿಶ್ವದ ಮಧ್ಯಬಿಂದು ಪ್ರತಿಯೊಂದು ವಸ್ತುವಿನಲ್ಲಿ ಗೋಚರಿಸುತ್ತದೆ. ಅದರ ಪರಿಘ ಮಾತ್ರ ಎಲ್ಲೂ ಕಾಣುವುದಿಲ್ಲ ಎಂಬ ತಾತ್ವಿಕ ಚಿಂತನೆಯನ್ನು ಮಂಡಿಸಿದ್ದಾರೆ. ಇದನ್ನೇ 'ವಿಕ್ಷಿಪ್ತ ಪ್ರಾಧ್ಯಾಪಕನ' ಉದಾಹರಣೆಯ ಮೂಲಕ ವಿವರಿಸಿದ್ದಾರೆ.

ಒಂದು ದಿನ ಶ್ರೀ ಭಡಭಡೆ, ವಿಷ್ಣು ಕರಂದೀಕರ, ಪರಾಂಜಪೆ ಮತ್ತು ಸ್ವತಃ ಗುರುದೇವರೆಲ್ಲರೂ ಪ್ರಾಚಾರ್ಯ ವುಡ್‌ಹೌಸ್‌ರ ಮನೆಯಲ್ಲಿ ಕೂತು ಕಾರ್ಲೈಲ್‌ನ 'ಸಾರ್ಟರ್ ರಿಝಾರ್ಟಸ್' ದ ಕುರಿತು ಚರ್ಚಿಸುತ್ತಿದ್ದರು. ಆಗ ಅನಿರೀಕ್ಷಿತವಾಗಿ ಗುರುದೇವರು ಎದ್ದು ಬಂದು ಕಿಟಕಿಯ ಬಳಿಗೆ ಹೋಗಿ ಆಗಸದ ಕಡೆಗೆ ನೋಡಲಾರಂಭಿಸಿದರು. ಅವರಿಗೆ ಒಂದು ಬೆಳಕಿನ ಪುಂಜವು ನೆಲದಿಂದ ಆಗಸದೆತ್ತರಕ್ಕೆ ಚಾಚಿಕೊಂಡಿದ್ದು ಕಾಣಿಸಿತು. I saw a huge expanse of light extending high-up half way into the Sky) ಇದನ್ನು ಕಂಡು ಉಳಿದವರೂ ಧಾವಿಸಿ ಬಂದರು. ಎಲ್ಲರೂ ಆ ಬೆಳಕನ್ನು ೨–೩ ನಿಮಿಷಗಳ ಕಾಲ ನೋಡಿದರು. ಅನಂತರ

ಅದು ಮಸಕಾಗಿ ಮಾಯವಾಯಿತು. ಪ್ರಾ. ವುಡ್‌ಹೌಸ್ ಎಂದರು 'Today my spritual life began' ನನ್ನ ಪಾರಮಾರ್ಥಿಕ ಜೀವನ ಶುರುವಾಯಿತು. ಇಂಥದೇ ಅನುಭವ ಸೇಂಟ್ ಪಾಲ್‌ಗೂ ಆಗಿತ್ತಂತೆ (ಬೈಬಲ್ ಎಕ್ಟ ೨೨-೬-೧೯) 'ನೇಮದ ಜೊತೆಗೆ ಅಂತರಂಗದ ತೀವ್ರತೆ ಹಾಗೂ ಶುದ್ಧತೆಯ ಮೇಲೆ ಅನುಭವವು ಅವಲಂಬಿಸಿರುತ್ತದೆ' ಎಂದು ಗುರುದೇವ ಹೇಳುತ್ತಾರೆ. ವುಡ್‌ಹೌಸ್ ಥಿಯಾಸಾಫಿಸ್ಟ್‌ರಾಗಿರುವುದರಿಂದ ಗುರುದೇವರ ಈ ಅನುಭವವನ್ನು ಕೇಳಿ ಬೆರಗೂ, ಆನಂದವೂ ಆಯಿತು. ಬನಾರಸ್‌ಗೆ ತೆರಳಿ ಈ ಅನುಭವ ವನ್ನೆಲ್ಲ ಥಿಯಾಸಾಫಿಕಲ್ ಸೊಸೈಟಿಯ ಅಧ್ಯಕ್ಷೆಯಾದ ಅನಿಬೆಝುಂಟ್‌ರಿಗೆ ನಿವೇದಿಸುವುದು ಒಳಿತೆಂದು ಹೇಳಿ ವುಡ್‌ಹೌಸ್‌ರು ಸ್ವತಃ ಗುರುದೇವರನ್ನು ಬನಾರಸಗೆ ಕರೆದೊಯ್ದರು. ೧೭ ಅಕ್ಟೋಬರ್ ೧೯೦೮ರಂದು ಅವರು ಬನಾರಸ್ ತಲುಪಿದರು. ಅನಿಬೆಝೋಂಟರು ಗುರುದೇವರ ಮಾತನ್ನು ಆಲಿಸಿದರು. ಬಳಿಕ ಗುರುದೇವರ ಬಳಿಯಿರುವ ಅವರ ಸದ್ಗುರುವಿನ ಫೋಟೋವನ್ನು ಕಂಡು You are in safe hands ಎಂದು ನುಡಿದರು. ಈ ಮಾತಿನಿಂದ ಗುರುದೇವರಿಗೆ ಸಮಾಧಾನವಾಯಿತು. ತನಗೆ ಯೋಗ್ಯ ಗುರುವಿನ ಮಾರ್ಗದರ್ಶನ ಲಭಿಸಿದೆ ಎಂಬ ತೃಪ್ತಿ ಅವರಿಗಾಯಿತು. ಮರಳುವಾಗ ಅವರು ಮಿಸೆಸ್ ಬೆಝುಂಟರ ಫೋಟೋವನ್ನು ಪಡೆದರು.

ಅವರು ಬನಾರಸ್‌ದಲ್ಲಿದ್ದಾಗ ಒಂದು ಸಾಯಂಕಾಲ ಶಂಕರಾಚಾರ್ಯರ ಮಠಕ್ಕೆ ಹೋದರು. ಆಗ ಅಲ್ಲಿಯ ಭಕ್ತವೃಂದದವರು 'ಭಜಗೋವಿಂದಂ ಭಜಗೋವಿಂದಂ ಮೂಢಮತೆ' ಎಂದು ಹಾಡುತ್ತಿದ್ದರು. ಅದನ್ನು ಕೇಳಿ ಗುರುದೇವರಿಗೆ ಅಚ್ಚರಿಯೆನಿಸಿತು. ಶಂಕರಾಚಾರ್ಯರ ಅದ್ವೈತ ಸಿದ್ಧಾಂತಕ್ಕೂ ಭಕ್ತಿಸ್ತೋತ್ರಗಳಿಗೂ ಯಾವ ಸಂಬಂಧವೂ ಇಲ್ಲ ಎಂದು ಗುರುದೇವರ ಭಾವನೆಯಾಗಿತ್ತು. 'ಚಿದಾನಂದರೂಪಃ ಶಿವೋಹಂ ಶಿವೋಹಂ' ಎಂಬ ತತ್ವಜ್ಞಾನ ಮಂಡಿಸುವ ಶಂಕರರಿಗೆ ಭಕ್ತಿಸ್ತೋತ್ರದ ಅಗತ್ಯ ಏಕೆನಿಸಿತು. ಈ ರಹಸ್ಯವನ್ನು ಅರಿಯಲು ಅವರು ತತ್ವಜ್ಞಾನದ ಅಧ್ಯಯನವನ್ನು ಆರಂಭಿಸಿದರು.

೧೯೦೮ರಲ್ಲಿ ವೇದಶಾಸ್ತ್ರ ಸಂಪನ್ನರಾದ ಶ್ರೀ ಬಾಳಾಶಾಸ್ತ್ರಿ ಆಠವಲೆಯವರ ಬಳಿಗೆ ಹೋಗಿ ವೇದಾಂತದ ಅಧ್ಯಯನವನ್ನು ಶುರು ಮಾಡಿದರು. ಅದೇ ಕಾಲಕ್ಕೆ ಅವರ ಆರೋಗ್ಯ ಹದಗೆಟ್ಟಿದ್ದರಿಂದ ಅವರ ಮನಸ್ಸು ಅಂತರ್ಮುಖಿಗೊಂಡು ಹೆಚ್ಚು ಹೆಚ್ಚು ಆತ್ಮನಿಷ್ಠಗೊಂಡರು. ಪಾರಮಾರ್ಥಿಕ ಜೀವನದ ಸಮರ್ಥನೆಗಾಗಿ ಅವರು ಪೌರ್ವಾತ್ಯ ತತ್ವಜ್ಞಾನವನ್ನು ಓದಲಾರಂಭಿಸಿದರು.

ಆ್ಯನಿಬೆಝುಂಟರು ತಮ್ಮ ಸದ್ಗುರುವನ್ನು ಹೊಗಳಿದ್ದು ಕಂಡು, ಗುರುದೇವರ ನಿಷ್ಠೆಯು ದ್ವಿಗುಣಗೊಂಡಿತು. ಬನಾರಸದಿಂದ ಬರುವಾಗ ಅವರು ಥಿಯಾಸಾಫಿಗೆ ಸಂಬಂಧಿಸಿದ ಕೆಲವು ಗ್ರಂಥಗಳನ್ನು ಹಾಗೂ ಬೆಝುಂಟರ್ ಫೋಟೋವನ್ನು ತಮ್ಮ ಜೊತೆಗೆ ತಂದರು. ಆಗ ಸದ್ಗುರು ತಮ್ಮೂರಿನ ಸನಿಹದಲ್ಲೇ ವಾಸ್ತವ್ಯ ಮಾಡಿರುವುದು ತಿಳಿದು ಅವರ ಭೇಟಿಗೆ ಹೋದರು.

ಸದ್ಗುರುವಿಗೆ ಬೆರ್ಘುಂಟರ ಫೋಟೋ ತೋರಿಸಿದಾಗ, ಸದ್ಗುರು ಆ ಫೋಟೋ ನೋಡಿ 'ಇವರು ಯೋಗಸಾಧನೆ ಮಾಡಿದ ಹಾಗಿದೆ' ಎಂದರು. ಅದಾದ ಬಳಿಕ ಅವರು ಕೆಲದಿನ ಗುರುಸಾನಿಧ್ಯದಲ್ಲಿ ಕಳೆದರು. ಒಂದು ದಿನ ಬನಾರಸದಿಂದ ತಂದ ಥಿಯಾಸಫಿ ಬಗೆಗಿನ ಇಂಗ್ಲಿಷ್ ಪುಸ್ತಕ ಓದುತ್ತ ಕೂತಿದ್ದರು. ಅನಿರೀಕ್ಷಿತವಾಗಿ ಶ್ರೀ ಭಾವೂ ಸಾಹೇಬರು ಅದರಲ್ಲಿಯ ಕೆಲವು ಭಾಗವನ್ನು ಮರಳಿ ಓದುವಂತೆ ಹೇಳಿದರು. ಅದರಲ್ಲಿ ಕೆಲವು ದೋಷವನ್ನು ಸದ್ಗುರುಗಳು ತರುಣ ಗುರುದೇವರ ಗಮನಕ್ಕೆ ತಂದರು. ಇದನ್ನು ಕಂಡು ಗುರುದೇವರು ಬೆರಗಾದರು. ಇಂಗ್ಲಿಷ್ ಭಾಷೆಯ ಜ್ಞಾನವಿರದ ತಮಗೆ ಇದರಲ್ಲಿಯ ದೋಷ ಹೇಗೆ ಗೊತ್ತಾಯಿತು? ಎಂದವರು ಕೇಳಿದರು. ಆಗ ಸದ್ಗುರು ಭಾವೂ ಸಾಹೇಬರು 'ಭಾಷೆ ನಿರ್ಮಿಸಿದ್ದು ಯಾರು? ಎಲ್ಲ ವಿಷಯಗಳು ದೇವರಿಂದಲೇ ನಿರ್ಮಾಣಗೊಳ್ಳುತ್ತವೆ. ಹೀಗಾಗಿ ದೇವರನ್ನು ಅರಿತವರಿಗೆ ಒಂದೇ ಭಾಷೆಯಲ್ಲ ನೂರಾರು ಭಾಷೆಗಳು ಬರುತ್ತವೆ' ಎಂದರು. ಈ ಮಾತು ಕೇಳಿ ಗುರುದೇವರು ಬೆರಗಾದರು.

ಪ್ರತಿವರ್ಷದಂತೆ ನವ್ಹೆಂಬರ ೧೯೦೮ರಲ್ಲೂ ಶ್ರೀ ಭಾವೂ ಸಾಹೇಬ ಮಹಾರಾಜರು ಜಮಖಂಡಿಗೆ ಬಂದರು. ಸಪ್ತಾಹವನ್ನು ಶುರು ಮಾಡಿದರು. ಆಗ ಗುರುದೇವರೂ ಜಮಖಂಡಿಯಲ್ಲೇ ವಾಸವಾಗಿದ್ದರು. ಅವರು ನಿತ್ಯ ಮಹಾರಾಜರ ಭಜನೆಗೆ ಹಾಜರಾಗುತ್ತಿದ್ದರು. ಸಪ್ತಾಹದ ಮುಕ್ತಾಯದ ದಿನ ಮಹಾಪ್ರಸಾದವನ್ನು ಹಂಚುತ್ತಿದ್ದರು. ಆ ಕಾಲಕ್ಕೆ ಆಮಂತ್ರಣ ನೀಡಬೇಕಾದ ವ್ಯಕ್ತಿಯ ಹೆಸರನ್ನು ಮಹಾರಾಜರು ಮನೆಯ ಯಜಮಾನನಿಗೆ ಹೇಳುತ್ತಿದ್ದರು. ಈ ವರ್ಷ ಸ್ವತಃ ಮಹಾರಾಜರೇ ಗುರುದೇವರಿಗೆ ಆಮಂತ್ರಣ ನೀಡಿದರು. ಸಪ್ತಾಹದ ಮಹಾಪ್ರಸಾದಕ್ಕೆ ಹೋಗುವ ಇಚ್ಛೆ ಗುರುದೇವರಿಗಿರಲಿಲ್ಲ. ತಾನು ಬೇರೆಡೆ ಹೋಗಬೇಕಾಗಿದೆ, ಪ್ರಸಾದ ಸ್ವೀಕರಿಸಲು ಬರುವುದು ಸಾಧ್ಯವಿಲ್ಲ ಎಂದು ಹೇಳಿ ಶ್ರೀ ಮಹಾರಾಜರ ಆಮಂತ್ರಣವನ್ನು ತಿರಸ್ಕರಿಸಿದರು. ಹೀಗೆ ಈ ಜ್ಞಾನ-ಅಜ್ಞಾನದ ಮಹಾದೋಷದಿಂದಾಗಿ ಗುರುದೇವರು ಅಸಹನೀಯ ರೋಗದ ವ್ಯಥೆಯನ್ನು ಭೋಗಿಸಬೇಕಾಯಿತು. ಈ ಮಾತನ್ನು ಅವರು ಪಶ್ಚಾತ್ತಾಪದಿಂದ 'ಕನ್ನಡ ಸಂತರ ಸಾಕ್ಷಾತ್ಕಾರದ ಮಾರ್ಗ' ಗ್ರಂಥದಲ್ಲಿ (ಪು. ೯೬-೯೭) ನಮೂದಿಸಿ, ೫ ಜನೇವರಿ ೧೯೦೯ರಲ್ಲಿ ತಾನು ಕಠಿಣ ರೋಗಕ್ಕೆ ತುತ್ತಾಗ ಬೇಕಾಯಿತು ಎಂದೊಪ್ಪಿಕೊಂಡಿದ್ದಾರೆ.

ಕ್ರಿ.ಶ. ೧೯೦೯ರ ಆರಂಭದಲ್ಲೇ ಗುರುದೇವರು ಮಿದುಳು ರೋಗದಿಂದ ಬಳಲಬೇಕಾಯಿತು. ಈ ರೋಗ ಬೆಳೆದು ತೀರಾ ನಿಶ್ಶಕ್ತಿಗೊಳಗಾದರು. ಇದರಿಂದ ಮಾತೋಶ್ರೀ ಪಾರ್ವತಿಬಾಯಿಯವರು ಚಿಂತಾಗ್ರಸ್ತರಾದರು. ತಾಯಿ ಮಗ ಇಬ್ಬರೂ ಸಾವಿನ ಭಯದಿಂದ ತತ್ತರಿಸಿದರು. ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ಸಾಧನೆಯನ್ನು ಸಂಪಾದಿಸಿದ ಗುರುದೇವರನ್ನು ಈ ರೋಗ ಹೈರಾಣುಗೊಳಿಸಿತು. ಇದರಿಂದಾಗಿ ಅವರ ಬೌದ್ಧಿಕ ಜೀವನವು ಕುಂಠಿತಗೊಂಡಿತು. ಅದೇ ರೀತಿ ಪಾರಮಾರ್ಥಿಕ ಜೀವನದಲ್ಲೂ ಏಕಾಗ್ರತೆ ಭಗ್ನಗೊಂಡಿತು. ಆಗವರು ಪ್ರಸಿದ್ಧ

ವೈದ್ಯರಾದ ಶ್ರೀ ಬಾಳಾಶಾಸ್ತ್ರಿ ಲಾಗವಣಕರರನ್ನು ಭೇಟಿಯಾಗಿ ಅವರ ಔಷಧಿಯನ್ನು ಸೇವಿಸಲು ಆರಂಭಿಸಿದರು. ಶಾಸ್ತ್ರಿಗಳು 'ಔಷಧಿ ನನ್ನದು, ಕರುಣೆ ನಿನ್ನದು' ಎಂಬ ಭಕ್ತಿಯ ಭಾವನೆಯಿಂದ ರೋಗಿ ಗಳನ್ನು ಉಪಚರಿಸುತ್ತಿದ್ದರು. ಬೇರೆ ವೈದ್ಯರಿಂದ ಔಷಧ ತೆಗೆದುಕೊಳ್ಳದ ಗುರುದೇವರು ಶಾಸ್ತ್ರಿಗಳ ಶ್ರದ್ಧೆಯನ್ನು ಕಂಡು ಅವರ ಔಷಧಿಯನ್ನು ಸೇವಿಸಿದರು. ದೈಹಿಕವಾಗಿ ತೀರ ಸೊರಗಿದ್ದರಿಂದ ಅವರು ಪುಣೆಯಿಂದ ಜಮಖಂಡಿಗೆ ಬಂದರು. ಸದ್ಗುರು ನೀಡಿದ ನಾಮಸ್ಮರಣೆಯಲ್ಲೇ ಹೆಚ್ಚು ಸಮಯ ಕಳೆಯಲು ನಿರ್ಧರಿಸಿದರು. ಆದರೆ ನಾಸಿಕಾಗ್ರದ ಮೇಲೆ ನೋಟವನ್ನು ಏಕಾಗ್ರಗೊಳಿಸುವುದು ಅವರಿಗೆ ಅಸಾಧ್ಯವೆನಿಸಿತು. ಹೀಗಾಗಿ ಚಿಂತಾಗ್ರಸ್ತ ಹಾಗೂ ತ್ರಸ್ತ ಮನಃಸ್ಥಿತಿಯಲ್ಲಿ ೧೨ ಫೆಬ್ರುವರಿ ೧೯೦೯ರಂದು ಸದ್ಗುರುವಿಗೆ ಪತ್ರ ಬರೆದರು.

ಶ್ರೀ

ಜಮಖಂಡಿ

ದಿ: ೧೨-೨-೧೯೦೯

ಶ್ರೀಮತ್ ಸಕಲಜ್ಞಾನಘನ ಅಜ್ಞಾನತಿಮಿರ ಭೇದಕ ಸಮತಲ ಚರಣರಜಾಂಕಿತ ಸೇವಕ ರಾಮಚಂದ್ರ ದತ್ತಾತ್ರಯ ರಾನಡೆ ಜಮಖಂಡಿ ಇವನು ಮಾಡುವ ನಮ್ರ ಶಿರಸಾಷ್ಟಾಂಗ ನಮಸ್ಕಾರ.

ತಮಗೆ ಪತ್ರ ಬರೆಯುವ ಕಾರಣವೇನೆಂದರೆ, ಈಗ ಸ್ವಾಮಿಯ ವಾಸ್ತವ್ಯ ಎಲ್ಲಿದೆ ಎನ್ನುವುದು ಗೊತ್ತಿರಲಿಲ್ಲ. ಎರಡು ವಾರಗಳ ಹಿಂದೆ ಭಾಲಚಂದ್ರ ಭಟ್ಟರು ನೀವು ಜತ್ತದಲ್ಲಿರುವುದಾಗಿ ತಿಳಿಸಿದರು. ಹೀಗಾಗಿ ಸಂತೋಷವಾಗಿ ಈ ಪತ್ರವನ್ನು ಬರೆಯುತ್ತಿರುವೆ. ಒಂದು ತಿಂಗಳಿಂದ ನನಗೆ ತಲೆ ಸುತ್ತಿ ಬರುತ್ತಿದ್ದು, ಆರೋಗ್ಯ ಹದಗೆಟ್ಟಿದೆ. ಔಷಧೋಪಚಾರ ಮಾಡಿದರೂ ಉಪಯೋಗವಾಗಲಿಲ್ಲ. ನಾನೇನು ಮಾಡಲಿ ದೇವಾ! ಹೀಗಾಗಿ ಸಮರ್ಥರಚರಣ ದರ್ಶನವಾಗಿ, ಎಂದು ಈ ದುರ್ದೈವ ನಿವಾರಣೆಯಾಗುವುದೋ ಎಂಬ ಚಿಂತೆ ಕಾಡುತ್ತಿದೆ. ತಮ್ಮ ದಾಸಾನುದಾಸ ಸೇವಕನಾದ ನಂದೆಪ್ಪನು ಎಂಟು ದಿನಗಳ ಹಿಂದೆ ಭೇಟಿಯಾಗಿದ್ದ. ಸಮರ್ಥರು ನೀಡಿದ ಪ್ರಸಾದವನ್ನು ನನಗೆ ನೀಡಿದ. ತಮ್ಮ ನಿತ್ಯದ್ದೇ ಆಹಾರವಾದ ಹೆಸರಿನ ಹಿಟ್ಟು ಮತ್ತು ಬೆಲ್ಲ ತುಪ್ಪವನ್ನು ಸೇವಿಸುವಂತೆ ಸಲಹೆ ನೀಡಿದ. ಎಂಟು ದಿನಗಳಿಂದ ಅದನ್ನು ಸೇವನೆ ಮಾಡುತ್ತಿದ್ದೇನೆ. ಈಗ ಆರೋಗ್ಯ ಸ್ವಲ್ಪ ಸುಧಾರಿಸಿದೆ. ಐದಾರು ದಿನಗಳ ಬಳಿಕ ಮರಳಿ ಪುಣೆಗೆ ಹೋಗಲಿದ್ದೇನೆ. 'ನನ್ನ ದೇಹದಲ್ಲಿ ಅಹಂಕಾರವಿದೆ. ಆದರೂ ಸದ್ಗುರು ಸ್ವೀಕರಿಸುತ್ತಾರೆ' ಎಂಬ ನ್ಯಾಯದಂತೆ, ಸ್ವಸ್ವರೂಪ ಪ್ರಾಪ್ತಿಯ ವಿವಂಚನೆಯಲ್ಲಿದ್ದೇನೆ. ಅಂಥದರಲ್ಲಿ ಓದು ಅಭ್ಯಾಸವೂ ಕುಂಠಿತಗೊಂಡು ಮತ್ತಷ್ಟು ಚಿಂತೆ ಕಾಡುತ್ತಿದೆ. ಸದ್ಗುರು ಪಾರು ಮಾಡಲು ಸಮರ್ಥರಾಗಿದ್ದಾರೆ. ಸದ್ಗುರುವಿನ ಹೊರತು ಸಿಗದು ಮಾರ್ಗ. ಆ ಪಾದಕ್ಕೆ ಮೊದಲು ಎರಗಬೇಕು.

ಇದರ ಜೊತೆಗೆ ಅಂಚೆ ಚೀಟಿಯಿರಿಸಿದ ಲಕೋಟೆಯಿರಿಸಿದ್ದೇನೆ. ಸಮರ್ಥರು ಉತ್ತರಿಸುತ್ತಾರೆ ಎಂಬ ನಂಬಿಕೆಯಿದೆ. ಕ್ಷೇಮ ಸಮಾಚಾರ ತಿಳಿಸುತ್ತ ಇರಬೇಕು. ಪ್ರೀತಿಯಿರಲಿ ಎಂಬ ವಿನಂತಿ.

ತಮ್ಮ ದಾಸಾನುದಾಸ

**ರಾಮಚಂದ್ರ ದತ್ತಾತ್ರಯ ರಾನಡೆ**

ಈ ಪತ್ರದ ಮೇಲಿಂದ ಗುರುದೇವರ ವ್ಯಾಕುಲ ಮನಃಸ್ಥಿತಿಯ ಕಲ್ಪನೆ ಸಹಜವಾಗಿ ಬರುತ್ತದೆ. ಈ ಪತ್ರ ತಲುಪಿದ ಬಳಿಕ ರೋಗದಿಂದ ಬಳಲುತ್ತಿರುವ ಗುರುದೇವರಿಗೆ ವಿಜಾಪುರದಿಂದ ಪತ್ರ ಬರೆದರು.

ಶ್ರೀ ಸಮರ್ಥ

ದಿನಾಂಕ ೨೪.೨.೧೯೦೯

ಫಾಲ್ಗುಣ ಶುದ್ಧ ॥ ೫
ಅನಂತ ಆಶೀರ್ವಾದಗಳು

ಸಮರ್ಥರ ಕೃಪೆಯಿಂದ ನಾನು ವಿಜಾಪುರದಲ್ಲಿ ಸುಖವಾಗಿದ್ದೇನೆ. ಜತ್ತದಿಂದ ರವಾನಿಸಿದ ತಮ್ಮ ಪತ್ರ ತಲುಪಿತು. ಮಜಕೂರು ತಿಳಿಯಿತು. ಸಮಯಾವಕಾಶ ಸಿಕ್ಕಾಗ ನಿಷ್ಠೆ ಹಾಗೂ ನೇಮದಿಂದ ನಾಮಸ್ಮರಣೆಯನ್ನು ತಪ್ಪದೇ ಮಾಡಿ. 'ನೆನಪು ಮಾಡಿ ಕೊಂಡರೆ ಅವನೇ ಬ್ರಹ್ಮ, ನೆನಪಾಗದಿರೆ ಅದೇ ಭವಭ್ರಮೆ' ಯಾವ ಬಗೆಯ ಚಿಂತೆಯೂ ಬೇಡ. ಸಮರ್ಥರು ಮನೋರಥವನ್ನು ಈಡೇರಿಸುತ್ತಾರೆ. ಆಗಾಗ ಪತ್ರ ಬರೆಯುತ್ತಿದ್ದರೆ ಉತ್ತರ ಸಿಗುತ್ತದೆ. ಉಳಿದ ವಿಷಯವೆಲ್ಲ ಆನಂದವೇ ಆನಂದ. ಇಂತು ಆಶೀರ್ವಾದ

ತಮ್ಮ

**ಭಾವೂಸಾಹೇಬ ಉಮದೀಕರ**

ತಮ್ಮ ಸದ್ಗುರುಗಳಿಂದ ಈ ಬಗೆಯ ಪತ್ರ ಬಂದ ಬಳಿಕ ಸಾವಳಗಿ ಲಿಂಗಪ್ಪ ಮತ್ತು ಮಲ್ಹಾರಪಂತ ಜೋಶಿಯವರೊಂದಿಗೆ ಜೊತೆಗೂಡಿ ಮತ್ತೆ ನೇಮವನ್ನು ಆರಂಭಿಸಿದರು. ಕಠೋರತನದಿಂದ ನಾಮಸ್ಮರಣೆ ಮಾಡುವ ನಿರ್ಧಾರ ಮಾಡಿದರು. ಇಬ್ಬರು ಗುರುಬಂಧುಗಳ ಜೊತೆಗೂಡಿ ಆರೋಗ್ಯವನ್ನು ನಿರ್ಲಕ್ಷಿಸಿ ತ್ರಿಕಾಲ ನಾಮ ಸ್ಮರಣೆಯನ್ನು ಆರಂಭಿಸಿದರು. ಕ್ರಮೇಣ ಆರೋಗ್ಯ ಮತ್ತಷ್ಟು ಹದಗೆಟ್ಟು, ಜೀವದ ಮೇಲಿನ ಆಸೆಯೇ ಹೊರಟು ಹೋಯಿತು. ಒಂದು ತಿಂಗಳು ಕಠಿಣ ಪರಿಶ್ರಮದಿಂದ ನೇಮವನ್ನು ಮುಂದುವರಿಸಿದರು. ಇದರಿಂದ ಅವರಿಗಾದ ಪಾರಮಾರ್ಥಿಕ ಅನುಭವವೂ ಸ್ಥಿರಗೊಂಡಿತು. ೨೪ ಡಿಶೆಂಬರ್ ೧೯೦೯ರಿಂದ ಇದಕ್ಕೆ ಶಾಶ್ವತ ಸ್ವರೂಪ ಪ್ರಾಪ್ತವಾಯಿತು. ಪರಮಾರ್ಥದ ನಿಜವಾದ ಆನಂದ ಸಿಗಲಾರಂಭಿಸಿತು. ಈ ವಿಷಯ

ಅವರ ಮಾತೆಗೆ ಮಾತ್ರ ಗೊತ್ತಿತ್ತು. ಆರೋಗ್ಯ ಹದಗೆಟ್ಟಿದ್ದರಿಂದ ಅವರು ಆರಾಮ ಕುರ್ಚಿಯಲ್ಲಿ ಕೂತಲ್ಲೇ ಪಾರಮಾರ್ಥಿಕ ಆನಂದವನ್ನು ಅನುಭವಿಸುತ್ತಿದ್ದರು.

ಇದೇ ಕಾಲದಲ್ಲಿ ಶ್ರೀ ಭಾವೂ ಸಾಹೇಬರು ಕನಸಿನಲ್ಲಿ ಕಾಣಿಸಿಕೊಂಡು 'ಭಾಗವತ' ಪಠಣ ಮಾಡುವಂತೆ ಗುರುದೇವರಿಗೆ ತಿಳಿಸಿದರು. ಗುರುದೇವರು ಅದರಂತೆ ಭಾಗವತವನ್ನು ಓದಿ ಮುಗಿಸಿದರು. ಮುಂದೆ ಕೆಲದಿನಗಳ ಬಳಿಕ ಸ್ವತಃ ಸದ್ಗುರು ಭೇಟಿಯಾದಾಗ ಈ ವಿಷಯವನ್ನು ಅರುಹಿದರು. ಆಗ ಅದು ವೈರಾಗ್ಯದ ಪ್ರಸಂಗ ವಾಗಿತ್ತು ಎಂದು ಸದ್ಗುರುಗಳು ಉತ್ತರಿಸಿದರು. ಅವರ ಅನಾರೋಗ್ಯದಿಂದಾಗಿ ೧೯೦೯ ರಿಂದ ೧೯೧೦ರವರೆಗೆ ಗುರುದೇವರಿಗೆ ಅನ್ನ ಸೇವನೆ ಮಾಡುವುದು ಸಾಧ್ಯವಾಗಲಿಲ್ಲ. ಹಾಲು–ಚಹ ಸೇವಿಸಿ ಹಸಿವನ್ನು ನಿವಾರಿಸಿಕೊಳ್ಳುತ್ತಿದ್ದರು. ಹೀಗೆ ವಿವಿಧ ಪ್ರಯತ್ನಗಳ ಮೂಲಕ, ದೇವರ ಸಾಕ್ಷಾತ್ಕಾರದ ಒಂದೇ ಧ್ಯೇಯವನ್ನು ಕಣ್ಣೆದುರಿಗೆ ಇರಿಸಿಕೊಂಡು ತಮ್ಮ ಉಳಿದ ಜೀವನಕ್ರಮವನ್ನು ನಿಯೋಜಿಸಿದರು. ದೇವರ ನಿಜವಾದ ಸ್ವರೂಪ ಅರಿತಾಗಲೇ ದೇಹದೊಳಗೆ ಶಕ್ತಿ ಬರುವುದು ಸಾಧ್ಯ ಎಂದವರಿಗೆ ಅನಿಸಿತು. ಕಠೋರ ನೇಮವನ್ನು ಸಾಧಕನಾದವನು ಕೈಕೊಂಡರೆ ಮಾತ್ರ ಮನ ನಿಯಂತ್ರಣದಲ್ಲಿರುವುದು ಸಾಧ್ಯ ಎಂದು ಗುರುದೇವರಿಗೆ ಮನವರಿಕೆಯಾಯಿತು. ಸಾವಳಗಿ ಲಿಂಗಪ್ಪ ಸಹ ಈ ವಿಷಯವನ್ನು ಬೆಳಗಿನಿಂದ ಹೇಳುತ್ತಾರೆ. ಅವರು ಪರಮಾರ್ಥಿಕ ಸಾಧನೆಗಾಗಿ ಎಷ್ಟು ಕಷ್ಟವಾದರೂ ಸಂತೋಷದಿಂದ ಸಹಿಸುತ್ತಾರೆ. ಅಂಥದೊಂದು ಪತ್ರವನ್ನು ಅವರು ಗುರುದೇವರಿಗೆ ಬರೆದಿದ್ದರು.

ಬುಧವಾರ ೫–೧–೧೯೧೦
ಬೆಳಗಿನ ೯–೧೫ ಗಂಟೆಗೆ

ಪ್ರಿಯ ರಾಮಭಾವೂ,

ರಸಾಯನಶಾಸ್ತ್ರದ ಉದಾಹರಣೆಯನ್ನು ಬಿಡಿಸುತ್ತ ನಾನು ಬಿಸಿಲಲ್ಲಿ ಕೋಣೆಯ ಎದುರಿಗೆ ಕುಳಿತಿದ್ದೆ. ಉಳಿದ ಸಹಪಾಠಿಗಳೂ ಇದ್ದರು. ಒಮ್ಮೆಲೆ ಒಂದು ತೇಜಸ್ವಿಯಾದ ಬೆಳಕಿನ ಆಕೃತಿಯು ಎಂದಿನಂತೆ ಪುಸ್ತಕದ ಪುಟದಲ್ಲಿ ಗೋಚರಿಸಿತು. ನಾನು ಮೈಮರೆತು ಆ ಆಕೃತಿಯನ್ನೇ ನೋಡತೊಡಗಿದೆ. 'ಕಂಗಳು ಮುಚ್ಚಿದರೂ ಓಂಕಾರ ಸ್ವರೂಪ ಕಾಣುತ್ತದೆ' ಎಂಬ ಪದ್ಯ ನೆನಪಾಯಿತು. ನಾನು ತಲೆ ಎತ್ತಿ ಸೂರ್ಯಾಭಿಮುಖ ಮಾಡಿ ಕಂಗಳನ್ನು ಮುಚ್ಚಿಕೊಂಡೆ. ಆದರೂ ನನಗೆ ಆ ಆಕೃತಿ ಗೋಚರಿಸುತ್ತಲೇ ಇತ್ತು. ನನಗೆ ಸಂತೋಷವಾಗಿ ನನ್ನಷ್ಟಕ್ಕೆ ನಗಲಾರಂಭಿಸಿದೆ. ಸುತ್ತಲಿನ ಸಹಪಾಠಿಗಳು ನನ್ನ ಮೂರ್ಖತನ ಕಂಡು ನಕ್ಕಿರಲೂ ಬಹುದು.

ದೇವರು ಎಲ್ಲೆಡೆ ಇದ್ದಾನೆ ಎಂಬುದು ಸತ್ಯವಲ್ಲ. ಅವನು ಭಕ್ತರ ಎದುರಿಗೆ ಮಾತ್ರವಿದ್ದಾನೆ. ನನ್ನ ಗುರು ಮಹಾರಾಜರು ನನ್ನನ್ನು ಒಂದು ಹೆಜ್ಜೆ ಮುಂದಕ್ಕೆ ಒಯ್ದರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಇಂದು ರಜೆ.'

ಇಂಥ ಗುರು ಬಂಧುಗಳ ಸಹವಾಸದಲ್ಲಿ ನಾಮಸ್ಮರಣೆಯು ನಡೆಯುತ್ತಿರುವು ದರಿಂದ ಆರೋಗ್ಯ ಸುಧಾರಣೆ ಹಾಗೂ ಮಾನಸಿಕ ನೆಮ್ಮದಿ ಸಿಗುತ್ತದೆ ಎಂದು ಭಾವಿಸಿ ಗುರುದೇವರು ಬೇರೆ ಯಾವುದೇ ಔಷಧೋಪಚಾರವನ್ನು ಮಾಡಿಕೊಳ್ಳಲು ಮುಂದಾಗುತ್ತಿರಲಿಲ್ಲ. ಅಂಥದ್ದೇ ಒಂದು ಘಟನೆ ಹೀಗಿದೆ– ಗುರುದೇವರು ಅನಾರೋಗ್ಯದಿಂದಾಗಿ ಡೆಕ್ಕನ್ ಕಾಲೇಜಿನ ತಮ್ಮ ಕೋಣೆಯನ್ನು ತೊರೆದು ಊರಲ್ಲಿ ವಾಸ ಮಾಡಬೇಕೆಂದುಕೊಂಡಾಗ ಅವರ ಜಮಖಂಡಿಯ ಗೆಳೆಯನೊಬ್ಬನು ಮೂರೇ ದಿನಗಳಲ್ಲಿ ಸಂಪೂರ್ಣ ಭಗವದ್ಗೀತೆಯನ್ನು ಓದಿ ತೋರಿಸಿದ. ಹದಿನೆಂಟನೇ ಅಧ್ಯಾಯದಲ್ಲಿರುವ 'ಮಚ್ಚಿತ್ತಃ ಸರ್ವ ದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ...' ಎಂಬ ಶ್ಲೋಕ ಗುರುದೇವರ ಕಣ್ಣಿಗೆ ಬಿತ್ತು. ದೇವರ ನಾಮಸ್ಮರಣೆಯಲ್ಲಿ ಮನವನ್ನು ವಿಲೀನ ಮಾಡಿದರೆ, ಅವನು ಸಕಲ ಸಂಕಟದಿಂದ ಪಾರುಮಾಡಬಲ್ಲ. ಅದರ ಬದಲು ಅಹಂಕಾರದಿಂದ ಕೂಡಿದ ಲೌಕಿಕ ಪ್ರಯತ್ನದಿಂದ ಸರ್ವನಾಶವೇ ಆಗುತ್ತದೆ–ಎಂಬ ಕಾರಣದಿಂದ ಅವರು ನಿರಂತರ ನಾಮಸ್ಮರಣೆಯನ್ನು ಶುರು ಮಾಡಿದರು. ಗುರುಮಾತೆಯವರೂ ಇದಕ್ಕೆ ಬೆಂಬಲ ಸೂಚಿಸಿದರು. ಈ ರೀತಿ ಅಸಹನೀಯವಾದ ಅನಾರೋಗ್ಯದ ಯಾತನೆಯನ್ನು ತಾಳ್ಮೆಯಿಂದ ಸಹಿಸಿ ಅಖಂಡವಾಗಿ ನಾಮಸ್ಮರಣೆ ಯನ್ನು ಗುರುದೇವರು ಮುಂದು ವರಿಸಿಕೊಂಡು ಹೋದರು.

ಯುವಕ–ಗುರುದೇವರು ಅನಾರೋಗ್ಯದಿಂದ ಬಳಲುತ್ತಿದ್ದಾಗ, ಅವರ ಊರಲ್ಲಿರುವ ಗೋಡಬೋಲೆಯವರ ವಾಡೆಯಲ್ಲಿರುತ್ತಿದ್ದರು. ಒಂದು ದಿನ ಅವರು ಮಹಡಿಯಲ್ಲಿ ಕುಳಿತು ನಾಮಸ್ಮರಣೆಯಲ್ಲಿ ತಲ್ಲೀನರಾಗಿದ್ದಾಗ ಅವರಿಗೆ ಒಂದೇ ಗಂಟೆಯ ನಾದ ಕೇಳಿಬಂತು. ಇದು ಸನಿಹದಲ್ಲಿರುವ ಮಹಾದೇವ ಮಂದಿರದ ಗಂಟೆಯೋ? ಎಂದವರು ಮಾತೆಗೆ ಕೇಳಿದರು. 'ಅಲ್ಲಿ ಭಟ್ಟರು ಬಂದಿಲ್ಲ. ಯಾವ ಪೂಜೆಯೂ ನಡೆಯುತ್ತಿಲ್ಲ' ಎಂದು ತಾಯಿ ಉತ್ತರಿಸಿದರು. ಹೀಗಾಗಿ ಕೇಳಿ ಬರುವ ಈ ಗಂಟಾನಾದವೂ ಆಧ್ಯಾತ್ಮಿಕ ಅನುಭವದ್ದೇ ಒಂದು ಭಾಗವಾಗಿರಬೇಕು ಎಂದುಕೊಂಡರು. ಅದೇ ಕಾಲಕ್ಕೆ ಅವರ ಸ್ನೇಹಿತ ಕಳಿಸಿದ ಶಂಕರಾಚಾರ್ಯರ 'ಯೋಗತಾರಾವಲಿ' ಎಂಬ ಗ್ರಂಥ ಲಭಿಸಿತು. ಅದರ ಬಗೆಗೆ ಗುರುದೇವರ ಭಾವನೆ ಹೀಗಿದೆ 'ಶಂಕರಾಚಾರ್ಯರು ಯೋಗತಾರಾವಲಿಯ ಆರಂಭಕ್ಕೆ ಹೇಳಿದ್ದೇನೆಂದರೆ, ದೇವರಲ್ಲಿ ಮನೋಲಯಗೊಳ್ಳುವ ಲಕ್ಷಾಂತರ ಮಾರ್ಗಗಳಿವೆ. ಇದರಲ್ಲಿ ನಾದಾನುಸಂಧಾನವು ಶ್ರೇಷ್ಠವಾದ ಲಯ...ಶಂಕರಾಚಾರ್ಯರ ಆತ್ಮಸಾಕ್ಷಾತ್ಕಾರಕ್ಕೆ ಇದು ಉಪಯೋಗವಾಗಿರಬಹುದು. ಅದ್ವೈತದ ಸಾಕ್ಷಾತ್ಕಾರಕ್ಕಾಗಿ ಶ್ರೀ ಶಂಕರಾಚಾರ್ಯರೂ ಸಹ ರಾಜಯೋಗ ಮಾರ್ಗವನ್ನೇ ಅವಲಂಬಿಸಬೇಕಾಯಿತು'.

ತಾವು ಕೇಳಿದ ಗಂಟಾನಾದ ಸಹ ಶಂಕರರು ಬಣ್ಣಿಸಿದ ಅನಾಹತನಾದದಲ್ಲಿ ಒಂದಾಗಿರಬೇಕೆಂದು ಅನಿಸಿ ಗುರುದೇವರ ಅಂತರಂಗ ಸಂತೋಷದಿಂದ ತುಂಬಿ ಕೊಂಡಿತು. ಈ ಘಟನೆಯ ಬಗ್ಗೆ ಅವರು ಆಳವಾದ ಅಧ್ಯಯನವನ್ನು ಕೈಕೊಂಡು 'ಶ್ರೀ ಶಂಕರಾಚಾರ್ಯರ ಆತ್ಮಸಾಕ್ಷಾತ್ಕಾರ' ಎಂಬ ಲೇಖನವನ್ನು ಬರೆದರು.

ಗುರುದೇವರ ಅಸಾಮಾನ್ಯ ಬುದ್ಧಿ ಹಾಗೂ ಸದ್ಗುಣವನ್ನು ಕಂಡು ಮೆಚ್ಚಿದ ಅವರ ಡೆಕ್ಕನ್ ಕಾಲೇಜಿನ ಪ್ರಾ. ವುಡ್‌ಹೌಸ್ ಹಾಗು ಪ್ರೊ. ಸೆಲಿನ್ಸನ್ ಮುಂತಾದ ವಿದೇಶಿ ಪ್ರಾಧ್ಯಾಪಕರು ಅವರ ಅನಾರೋಗ್ಯವನ್ನು ಕಂಡು ಚಿಂತಾತುರರಾದರು. ಸಸೂನ್ ಆಸ್ಪತ್ರೆಯಲ್ಲಿ ಅವರ ಉಪಚಾರದ ವ್ಯವಸ್ಥೆಯನ್ನು ಮಾಡಿದರು. ಇಂಥ ಬಿಕ್ಕಟ್ಟಿನ ಪರಿಸ್ಥಿತಿ ಯಲ್ಲೂ ಸಹ ಗುರುದೇವರು ತಮಗಾದ ಗಂಟಾನಾದದ ಅನುಭಾವದಿಂದಾಗಿ ಪ್ರಾಧ್ಯಾಪಕರ ಸಲಹೆಯನ್ನು ನಿರಾಕರಿಸಿದರು. ಗುರುದೇವರ ಪ್ರತಿಯೊಂದು ಕಾರ್ಯ ಸದ್ಗುರುವಿನ ಮಾರ್ಗದರ್ಶನವನ್ನು ಅವಲಂಬಿಸಿರುತ್ತಿತ್ತು. ಅವರ ದೇವರ ನಿಷ್ಠೆಯ ಮನೋಭೂಮಿಕೆಯಿಂದಾಗಿ, ಅವರು ಲೌಕಿಕ ಉಪಾಯವನ್ನು ಉದಾಸೀನವಾಗಿ ಕಂಡರು. ಸದ್ಗುರು ಕೃಪೆಯಿಂದಲೇ ತಾನು ಗುಣಮುಖನಾಗಬಲ್ಲೆ ಎಂಬ ದೃಢವಾದ ನಂಬಿಕೆ ಅವರದ್ದಾಗಿತ್ತು. ಹೀಗಾಗಿ ಅವರು ೧.೪.೧೯೦೯ರಲ್ಲಿ ಸದ್ಗುರುವಿಗೆ ಪತ್ರ ಬರೆದು ಪರಿಸ್ಥಿತಿಯನ್ನು ನಿವೇದಿಸಿದರು. ೭.೪.೧೯೦೯ರಲ್ಲಿ ಇಂಚಗೇರಿಯಿಂದ ಮಾರುತ್ತರ ಬಂತು.

ಕಣ್ಮುಚ್ಚಿ ನಾಸಿಕಾಗ್ರದಲ್ಲಿ ಗಮನ ಕೇಂದ್ರೀಕರಿಸಿದರೆ ತಲೆಸುತ್ತುವುದು ನಿಲ್ಲುತ್ತದೆ. ಅಚ್ಯುತಾನಂದ ಗೋವಿಂದ ನಾಮಸ್ಮರಣೆಯಿಂದ 'ನಶ್ಯಂತಿ ಸಕಲಾರೋಗಾಃ ಸತ್ರಂ ಸತ್ಯಂ ವಧಾಮ್ಯಯಂ' ತಿಳಿಸಿ, ತಮ್ಮ ಪ್ರಸಾದ ಸ್ವೀಕರಿಸುವಂತೆ ಸೂಚಿಸಿದ್ದರು. ಸದ್ಗುರುವಿನ ಸಲಹೆ ಹಾಗೂ ಪ್ರಸಾದ ಸ್ವೀಕರಿಸಿದ್ದರಿಂದ ಗುರುದೇವರು ಚೇತರಿಸಿಕೊಂಡರು. ಜುಲೈ ೧೯೧೦ರಲ್ಲಿ ಗುರುದೇವರು ತಮ್ಮ ಮಾತೋಶ್ರೀಯವರ ಜೊತೆಗೆ ಸೊಲ್ಲಾಪುರಕ್ಕೆ ಹೋದರು. ಆಗ ಸದ್ಗುರುಗಳು ದಾಸಬೋಧವನ್ನು ವಿವರಿಸಿ ಹೇಳಿದರು. ಸಮರ್ಥ ರಾಮದಾಸರ ಮಾತಿನಂತೆ ಜೀವನಕ್ರಮವನ್ನು ರೂಪಿಸಿಕೊಳ್ಳಬೇಕೆಂಬ ಉಪದೇಶವನ್ನು ನೀಡಿದರು. ಸೊಲ್ಲಾಪುರ ವಾಸ್ತವ್ಯದಲ್ಲಿದ್ದಾಗ ಗುರುದೇವರು ಆಮಶಂಕೆಯಿಂದ ಬಳಲ ಬೇಕಾಯಿತು. ಸದ್ಗುರುಗಳ ಒಪ್ಪಿಗೆಯನ್ನು ಪಡೆದೇ ಗುರುದೇವರು ಔಷಧಿಯನ್ನು ಸ್ವೀಕರಿಸಿದರು. ರೋಗ ನಿವಾರಣೆಯಾಯಿತು. ಅದಾದನಂತರ ಎಲ್ಲರೂ ಇಂಚಗೇರಿಗೆ ಮರಳಿದರು. ಶ್ರೀಸದ್ಗುರುಗಳು, ಗುರುದೇವರು ಹಾಗೂ ಅವರ ಮಾತೋಶ್ರೀಯವರು ಒಂದು ಕುದುರೆ ಟಾಂಗಾದಲ್ಲಿ ಕೂತರು. ದಾರಿಯಲ್ಲಿ ಗುರುದೇವರು ತಮಗಾದ ಪಾರಮರ್ಥಿಕ ಅನುಭವದ ಬಗೆಗೆ ಸದ್ಗುರುವಿಗೆ ಹೇಳಿದರು. ಸದ್ಗುರುಗಳು ಶಾಂತವಾಗಿ ಆಲಿಸಿದರು. ಕುಮಠಾ ಎಂಬೂರು ಪ್ರವೇಶಿಸುವಾಗ ಬೆಕ್ಕು ಅಡ್ಡಬಂತು. ಪೂರ್ವ ಸಂಸ್ಕಾರದಿಂದಾಗಿ ಗುರುದೇವರು ಅಪಶಕುನವಾಯಿತೆಂದು ಭಾವಿಸಿದರು. ನಾಲ್ಕು ದಿನಗಳ ಬಳಿಕ ಎಲ್ಲರೂ ನಿಂಬಾಳ ಊರಿಗೆ ಹೋದರು. ಎರಡು ದಿನ ನಾಡಗೌಡರ ಮನೆಯಲ್ಲಿ ವಾಸ್ತವ್ಯ ಮಾಡಿದರು. ಅಲ್ಲಿಂದ ಇಂಚಗೇರಿಗೆ ಬಂದು ಸೇರಿದರು.

ಇಂಚಗೇರಿಯಲ್ಲಿ ಮಾತೋಶ್ರೀ ಪಾರ್ವತಿಬಾಯಿಯವರು ಮಗನ ಮಿದುಳು ರೋಗದ ವಿಷಯವನ್ನು ಸದ್ಗುರುವಿಗೆ ನಿವೇದಿಸಿಕೊಂಡರು. ಸದ್ಗುರುಗಳು ತಮ್ಮ ದಿವ್ಯದೃಷ್ಟಿಯಿಂದ

'ಅರವತ್ತು ವರ್ಷಗಳ ವರೆಗೆ ಗುರುದೇವರಿಗೆ ಯಾವ ಭಯವೂ ಇಲ್ಲ. ಅವರಿಂದ ಸಾಕಷ್ಟು ಪಾರಮಾರ್ಥಿಕ ಕಾರ್ಯವಾಗಬೇಕಿದೆ. ಯಾವುದೇ ಚಿಂತೆ ಬೇಡ' ಎಂದರು. ಸದ್ಗುರುವಿನ ಆಶೀರ್ವಾದದಿಂದ ತಾಯಿ ಮಗನಿಗೆ ಸಮಾಧಾನ ವಾಯಿತು. ಇದರಿಂದ ಅವರಲ್ಲಿ ಸದ್ಗುರುವಿನ ಬಗೆಗಿರುವ ಶ್ರದ್ಧೆ ಮತ್ತು ಭಕ್ತಿ ಮತ್ತಷ್ಟು ಬೆಳೆಯಲು ಸಹಾಯವಾಯಿತು. ಗುರುಮಾತೆಯವರೂ ಸಹ ಸದ್ಗುರುವಿನಿಂದ ನಾಮದ ವರದಾನವನ್ನು ಬೇಡಿದರು. ಮಗನ ಆರೋಗ್ಯದ ನಿಮಿತ್ತದಲ್ಲಿ ಪಾರ್ವತಿಬಾಯಿ ಸಹ ನಾಮವನ್ನು ಬೇಡಿದ್ದು ಕಂಡು ಸದ್ಗುರುವಿಗೂ ಸಮಾಧಾನವಾಯಿತು.

ಇಂಚಗೇರಿಯಲ್ಲಿ ಸದ್ಗುರುವಿನ ಸಾನಿಧ್ಯದಲ್ಲಿದ್ದಾಗ, ಒಂದು ರಾತ್ರಿ ಸದ್ಗುರುಗಳು ಗುರುದೇವರನ್ನು ಬಳಿಗೆ ಕರೆದು, 'ಈ ದೀಪದ ಬೆಳಕಿನಲ್ಲಿ ಹಗಲು ಕಾಣುವ ವಸ್ತು ರಾತ್ರಿ ಗೋಚರಿಸುತ್ತದೆಯೋ?' ಎಂದು ಪ್ರಶ್ನಿಸಿದರು. ಗುರುದೇವರು 'ಹೌದೆಂದು' ಉತ್ತರಿಸಿದರು. ಸದ್ಗುರುವಿಗೆ ಶಿಷ್ಯನ ಮೇಲೆ ನಂಬಿಕೆಯಾಯಿತು. ಕುಮಠೆಯಲ್ಲಿ ಬೆಕ್ಕು ಅಡ್ಡಬಂದ ವಿಷಯವನ್ನು ಪ್ರಸ್ತಾಪಿಸಿ, ಅದನ್ನು ಅಪಶಕುನವೆಂದು ಭಾವಿಸಬೇಕಿಲ್ಲ. ದೇವರ ಅನುಭವ ಬಂದ ಭಕ್ತರಿಗೆ ಬೆಕ್ಕಿಗಿಂತ ಮೊದಲು 'ವಸ್ತು'ವಿನ ದರ್ಶನವಾಗುತ್ತದೆ. ಹೀಗಾಗಿ ಸಾಕ್ಷಾತ್ಕಾರಿ ಸಾಧಕರಿಗೆಂದು ಅಪಶಕುನವಾಗುವುದಿಲ್ಲ. 'ಹರಿದಾಸರಿಗೆ ದಶದಿಕ್ಕು ಶುಭಕಾಲ' ಎಂದು ನುಡಿದರು. ಈ ರೀತಿ ಮೂಢನಂಬಿಕೆಯನ್ನು ಬದಿಗೊತ್ತಿ, ಶುದ್ಧಭಕ್ತಿಯ ಜೋಪಾಸನೆ ಮಾಡುವಂತೆ ಗುರುದೇವರಿಗೆ ಉಪದೇಶವನ್ನು ಮಾಡಿದರು. ಸದ್ಗುರುವಿನ ಬುದ್ಧಿನಿಷ್ಠ ಭಕ್ತಿಯಿಂದಾಗಿ ಪವಾಡ, ಮೂಢನಂಬಿಕೆಯ ಬಗೆಗಿನ ಗುರುದೇವರ ಪೂರ್ವಾಗ್ರಹ ದೂರವಾಯಿತು. ಹಲವು ದಿನಗಳ ಸಾನಿಧ್ಯದಿಂದ ಮಹಾಪುರುಷರ ಯೋಗ್ಯತೆ ಅರಿವಾಗುತ್ತದೆ ಎಂದು ಗುರುದೇವರು 'ನಿತ್ಯನೇಮಾವಲಿ' ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಈ ಲೇಖಕನಿಗೂ ಸಹ ಗುರುದೇವರ ನಿಸ್ಪೃಹತೆ, ದಯೆ, ಮನೋನಿಗ್ರಹ, ಸಮತೆ, ಶಿಷ್ಯಪ್ರೇಮ, ಮತ್ತು ಆತ್ಮಜ್ಞಾನದ ಮೇಲಿನ ನಿಸ್ಸೀಮ ಭಕ್ತಿ, ಅಲೌಕಿಕ ಶಾಂತಿ, ನಿರ್ಲಿಪ್ತ ಭಾವ ಇವೆಲ್ಲವೂ ಅನುಭವಕ್ಕೆ ಬಂದಿದೆ.

ಗುರುದೇವರು ೧೯೧೦ರಲ್ಲಿ ಇಂಚಗೇರಿಯಲ್ಲಿ ಸದ್ಗುರು ಸಾನಿಧ್ಯದಲ್ಲಿದ್ದಾಗ ಅವರ ಪರಮಾರ್ಥ ಅನುಭವ ಮತ್ತಷ್ಟು ವಿಸ್ತಾರಗೊಂಡಿತು. 'ಜ್ಞಾನದ ಮೂಲವೇ ಅಗ್ನಿ, ಭಕ್ತಿಯ ಮೂಲ ವಿರಕ್ತಿ, ನೆನಪಾದರೆ ಅದೇ ಪರಬ್ರಹ್ಮ, ನೆನಪಾಗದಿರೆ ಅದೇ ಭವಭ್ರಮೆ'– ಸದ್ಗುರುಗಳ ಈ ಮೂರೂ ಸೂತ್ರಗಳನ್ನು ಗುರುದೇವರು ಹಸ್ತಗತ ಮಾಡಿಕೊಂಡರು. ಅನಾರೋಗ್ಯದಿಂದಾಗಿ ನಾಮಸ್ಮರಣೆಯ ವೇಗವನ್ನು ಹೆಚ್ಚಿಸಿದರು. ದೇಹದ ಆಸಕ್ತಿ ಕಡಿಮೆಯಾಗಿದ್ದರಿಂದ ವೈರಾಗ್ಯ ದೃಢಗೊಂಡಿತು. ಅದರ ಫಲವೇ ಅನುಭವದ ರೂಪದಲ್ಲಿ ಪಾಲಿಗೆ ಬಂತು. ಅವರಿಗೆ ವಿವಿಧ ಬಣ್ಣಗಳ ಬೆಳಕಿನ ಅನುಭವ ಬಂತು. ಇದು ಮುಂದೆ ಬರುವ ವರ್ಣರಂಜಿತ ಬೆಳಕಿನ ಅನುಭವಗಳ ಮೊದಲ ಅವಸ್ಥೆ. ಈ ಅನುಭವದಲ್ಲಿ ಆಕರ್ಷಣೆಯ ಅದ್ಭುತ ಸಾಮರ್ಥ್ಯವಿದೆ.

ಇಂಚಗೇರಿಯಲ್ಲಿದ್ದಾಗ ಅವರ ಆರೋಗ್ಯ ಸುಧಾರಿಸಿತು. ಇದಕ್ಕೆಲ್ಲ ನಾಮ ಸ್ಮರಣೆಯೇ ಕಾರಣವೆಂದು ಸದ್ಗುರುಗಳು ಹೇಳಿದರು. ಬಳಿಕ ಸದ್ಗುರುಗಳ ಆದೇಶದ ಮೇರೆಗೆ ಅವರು ಪುಣೆಗೆ ಹೋಗುವ ನಿರ್ಧಾರವನ್ನು ಮಾಡಿದರು. ಇಂಚಗೇರಿ ಯಲ್ಲಿದ್ದಾಗಲೇ ಗುರುದೇವರಿಗೆ ಶ್ರೀ ಅಂಬುರಾವ ಮಹಾರಾಜರ ಪರಿಚಯವಾಯಿತು. ಅವರ ಬಗೆಗೆ ಪ್ರೇಮಾದರ ಬೆಳೆಯಿತು. ಸದ್ಗುರು ಮಹಾರಾಜರ ತೀಕ್ಷ್ಣಬುದ್ಧಿ ಮತ್ತು ಶಿಸ್ತು, ಕಠೋರತನ ಹಾಗೆಯೇ ಶ್ರೀ ಅಂಬೂರಾವರ ಸದ್ಗುರುಗಳ ಬಗೆಗಿನ ನಿಷ್ಠೆ, ಅಮಾಯಕತೆ, ನಾಮಸ್ಮರಣೆಯ ಮೇಲಿರುವ ಅವಿಚಲ ಭಕ್ತಿ ಈ ಎಲ್ಲ ಗುಣಗಳ ಸಮ್ಮೀಳನ ಗುರುದೇವರ ಜೀವನದಲ್ಲೂ ಗೋಚರಿಸುತ್ತದೆ.

ಸದ್ಗುರುವಿನ ಆದೇಶದಂತೆ ಸಾಧಕರಿಗಾಗಿ ಭಜನೆಗಳ ಕಿರುಹೊತ್ತಿಗೆ, ಸಂತರ ಆಯ್ದ ವಚನಗಳ ಸಂಗ್ರಹವನ್ನು ಪ್ರಸ್ತಾವನೆ ಸಹಿತ ಪ್ರಕಟಿಸಿದರು.

೧೯೧೦ರಿಂದ ಗುರುದೇವರ ಗಮನ ಲೋಕಕಲ್ಯಾಣದ ಕಡೆಗೆ ಹರಿಯಿತು. ೧೨-೭-೧೯೧೦ರಲ್ಲಿ ಸದ್ಗುರುಗಳಿಗೆ ಬರೆದ ಪತ್ರದಲ್ಲಿ ಈ ಸಂಗತಿಯನ್ನು ವ್ಯಕ್ತ ಮಾಡಲಾಗಿದೆ. ಅನುಭವವಿರದ್ದರಿಂದ ಭಕ್ತಿ ಬೆಳೆಯುವದೂ ಇಲ್ಲ. ಬೆಳೆಸುವುದೂ ಸಾಧ್ಯವಿಲ್ಲ. ಹೀಗಾಗಿ ಅಲ್ಲಲ್ಲಿ ಸಾಧನೆಯ ಸ್ತಂಭವನ್ನು ನಿಲ್ಲಿಸುವುದು ಒಳಿತು. ಜನರಲ್ಲಿ ಬುದ್ಧಿ-ಶಕ್ತಿ ಎರಡೂ ಸೇರಿದಾಗಲೇ ನಿಜವಾದ ಮಾರ್ಗದ ಅರಿವಾಗುತ್ತದೆ.

ದಿನಾಂಕ ೪-೧೦-೧೯೧೦ರ ಪತ್ರದಲ್ಲಿ 'ನೀವು ಮಾಡುವ ಪ್ರಯತ್ನಕ್ಕೆ (ನೌಕರಿ ವಿಷಯದಲ್ಲಿ) ಯೋಗ್ಯ ಫಲ ಸಿಗಲಿದೆ' ಎಂಬ ಭರವಸೆ ಸದ್ಗುರುವಿನಿಂದ ಲಭಿಸಿದ್ದರಿಂದ ಗುರುದೇವರು ಖಚಿತವಾಗಿ ನೇಮವನ್ನು ಆರಂಭಿಸಿದರು. ಪ್ರತಿಸಲದಂತೆ ಈ ಸಲವೂ ದೀಪಾವಳಿಗೆ ಜಮಖಂಡಿಗೆ ಹೋದಾಗ ಈ ವರ್ಷದ ಪ್ರಯಾಣದಲ್ಲಿ ಗುರುದೇವರೂ ಸೇರಿಕೊಳ್ಳಲಿ ಎಂದರು ಸದ್ಗುರು. ಗುರುದೇವರಿಗೆ ಸಂತೋಷವಾಯಿತು. ಅದರಂತೆ ತೇರದಾಳ ಸಪ್ತಾಹ ಮುಗಿಸಿ ಸದ್ಗುರು ಮಹಾರಾಜರು ಚಿಮ್ಮಡಿಗೆ ಆಗಮಿಸಿದರು. ನಿಂಬರಗಿ ಮಹಾರಾಜರ ಸೂಚನೆಯಂತೆ ಭಾವೂ ಸಾಹೇಬರು ಪ್ರತಿವರ್ಷ ಅಲ್ಲಿಗೆ ಹೋಗುತ್ತಾರೆ. ೧೯೧೦ರಲ್ಲಿ ಚಿಮ್ಮಡಿಗೆ ಹೋದಾಗ ಶ್ರೀಯರಗಟ್ಟಿಯವರ ಮಗ ಸಾಕ್ಷಾತ್ಕಾರ ತತ್ವಕ್ಕೆ ಅವಮಾನವಾಗುವಂತೆ ವರ್ತಿಸಿದರು. ಮಹಾರಾಜರಿಗೆ ದುಃಖವಾಯಿತು. ಗುರುದೇವರು ಉಪನಿಷತ್ತುಗಳು ಮತ್ತು ಗೀತೆಯ ಆಧಾರದಿಂದ ಸತ್ಯ 'ವಸ್ತು' ಸ್ಥಿತಿಯ ಅರಿವು ಮಾಡಿಕೊಟ್ಟರು. ಮಹಾರಾಜರಿಗೆ ಆನಂದವಾಯಿತು. ಆದರೆ ಇದರ ಬಳಿಕ ಮಹಾರಾಜರು ಅತ್ತ ಎಂದೂ ಹೋಗಲೇ ಇಲ್ಲ.

■■

# ಗುರುಪರಂಪರೆ ಮತ್ತು ಪರಮಾರ್ಥ ಮಾರ್ಗ

ಗುರುದೇವರ ಗುರುಪರಂಪರೆಯು ನಾಥಪಂಥದ ರೇವಣಸಿದ್ಧರಿಂದ ನಡೆಯುತ್ತ ಬಂದಿದೆ. ರೇವಣರು ನವನಾಥರಲ್ಲೊಬ್ಬರು. ಮಹಾಪುರುಷರು. ಶ್ರೀ ದತ್ತನ ಅನುಗ್ರಹದಿಂದ ಆತ್ಮಜ್ಞಾನ ಪಾರಂಗತರಾದರು. ಎಲ್ಲ ವಿದ್ಯೆ, ಕಲೆಯಲ್ಲಿ ಪರಿಣತರಾಗಿದ್ದರು. ರೇವಣ–ಮರುಳ–ಏಕೋರಾಮ–ಪಂಡಿತಾರಾಧ್ಯ ಹೀಗೆ ಪಂಚಸಿದ್ಧರ ಪರಂಪರೆ ಯಿಂದ ಗುರು ಲಿಂಗ ಜಂಗಮ ವರೆಗೆ ಸಾಕ್ಷಾತ್ಕಾರಿ ಪರಂಪರೆಯು ನಡೆದು ಬಂದಿದೆ. ಗುರು ಲಿಂಗ ಜಂಗಮ ಇಲ್ಲವೇ ಶ್ರೀ ಮುಪ್ಪಿನ ಮುನಿಯವರು ಶ್ರೀ ನಿಂಬರಗಿಕರರಾದ ನಾರಾಯಣರಾಮ ಮಹಾರಾಜರಿಗೆ ಅನುಗ್ರಹ ಮಾಡಿದರು. ನಿಂಬರಗಿಕರರು ಶ್ರೀ ರಘುನಾಥಪ್ರಿಯರಿಗೆ ನಾಮೋಪದೇಶ ಮಾಡಿದರು. ಮುಂದೆ ಅವರ ಸದುಪದೇಶವನ್ನು ಕೇಳಿ ಶ್ರೀ ಭಾವೂಸಾಹೇಬ ಮಹಾರಾಜ ದೇಶಪಾಂಡೆಯವರು ಶ್ರೀ ನಿಂಬರಗಿ ಮಹಾರಾಜರ ಪಾದದ ಬಳಿಗೆ ಬಂದರು. ಶ್ರೀ ನಿಂಬರಗಿ ಮಹಾರಾಜರು ಶ್ರೀ ರಘುನಾಥ ಪ್ರಿಯ ಮಹಾರಾಜರ ಮುಖಾಂತರ ಶ್ರೀ ಭಾವೂಸಾಹೇಬ ದೇಶಪಾಂಡೆರವರಿಗೆ ನಾಮೋಪದೇಶ ಮಾಡಿಸಿದರು. ಮುಂದೆ ಭಾವೂ ಸಾಹೇಬರಿಂದ ಶ್ರೀ ಅಂಬೂರಾವ, ಶ್ರೀ ಶಿವಲಿಂಗವ್ವ, ಶ್ರೀ ರಾಮಭಾವೂ ಅವರಿಗೆ ಸಬೀಜ ನಾಮದ ಅನುಗ್ರಹವಾಯಿತು. ಈ ಬಗೆಯಲ್ಲಿ ಬ್ರಹ್ಮಜ್ಞಾನದ ಫಲ್ಗೂ ನದಿಯು ರೇವಣಸಿದ್ಧರಿಂದ ಉಗಮಗೊಂಡು ನೇರವಾಗಿ ಗುರುದೇವರ ವರೆಗೆ ಹರಿಯುತ್ತ ಬಂದು ಗುಪ್ತವಾಯಿತು.

ಇಂಥ ಮಹಾಪುರುಷರಲ್ಲಿ ನಾರಾಯಣ ಮಹಾರಾಜರೂ ಒಬ್ಬರು. ಅವರಿಗೆ ದಾಸಬೋಧೆ ಹಾಗೂ ತುಕಾರಾಮನ ಮೇಲೆ ಅಪಾರ ಶ್ರದ್ಧೆಯಿತ್ತು. ಶ್ರೀ ಕಾಡಸಿದ್ಧೇಶ್ವರ ಅನುಗ್ರಹದಿಂದ ಮತ್ತು ಸಾಧನೆಯಿಂದ ಅವರು ಆತ್ಮಜ್ಞಾನವನ್ನು ಪಡೆದರು. ಅವರು ತಮ್ಮ ಮಾರ್ಗವನ್ನು ರಹಸ್ಯವಾಗಿರಿಸಿದರು. ಸ್ನೇಹಿತರಿಗೂ ಹೇಳಿರಲಿಲ್ಲ. ಅವರು ಜೀರ್ಣಗೊಂಡ ಆತ್ಮಜ್ಞಾನದ ಜೀರ್ಣೋದ್ಧಾರ ಕೈಕೊಂಡರು. ಮುಂದೆ ಅದು ಫಲಕೊಟ್ಟಾಗ ಅವರ ಯೋಗ್ಯತೆಯು ಗೊತ್ತಾಗುತ್ತದೆ.

ಸದ್ಗುರು ಶ್ರೀ ಭಾವೂ ಸಾಹೇಬರ ಸೂಚನೆಯಂತೆ ಗುರುದೇವರು ಸಂಪ್ರದಾಯ ದಲ್ಲಿದ್ದ ಭಜನೆಯ ಆಧಾರದಿಂದ ಇತರ ಸಂತ ಸಾಹಿತ್ಯದ ಸಹಾಯದಿಂದ ದೈನಂದಿನ ಭಜನೆಯ ಕಿರು ಹೊತ್ತಿಗೆಯನ್ನು ಬರೆದರು. ಇಲ್ಲಿ ಗುರುಪರಂಪರೆಗೆ ಮಹತ್ವ ನೀಡಲಾಗಿತ್ತು. ಆತ್ಮಜ್ಞಾನದ ಬಳಿಕ ಎಲ್ಲ ಜಾತಿ ಮತ ಪಂಥದವರು ಒಂದೇ ಆಗಿರುತ್ತಾರೆ. ಸೌಹಾರ್ದತೆಯಿಂದ ವರ್ತಿಸುತ್ತಾರೆ.

ಸಾಧಕ ಗುರುದೇವರ ಪಾರಮಾರ್ಥಿಕ ಅನುಭವ, ಬೌದ್ಧಿಕ ವೈಭವದಲ್ಲಿ ಪ್ರಗತಿಯಾಗುತ್ತ ಸಾಗಿದಂತೆ, ಅವರಲ್ಲಿದ್ದ ಸದ್ಗುಣ ಹಾಗೂ ನೈತಿಕತೆಯೂ ಏಳ್ಗೆಯನ್ನು ಹೊಂದುತ್ತಲಿತ್ತು. ಇದು ಮುಂದಿನ ಸಂಗತಿಯಿಂದ ಸ್ಪಷ್ಟವಾಗುತ್ತದೆ. ಕ್ರಿ.ಶ. ೧೯೦೮ರಿಂದ ೧೯೦೯ರ ವರೆಗೆ ಡೆಕ್ಕನ ಕಾಲೇಜಿನಲ್ಲಿ 'ದಕ್ಷಿಣಾ ಫೆಲೋ' ಆಗಿದ್ದಾಗ ಎಫ್.ವೈ. ಆರ್ಟ್ಸ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಕಲಿಸುತ್ತಿದ್ದರು. ಈ ಪ್ರಸಂಗ ಹಾಗೂ ವಿದ್ಯಾರ್ಥಿ ಜೀವನದ ಅನುಪಮ ಯಶದಿಂದಾಗಿ ಗುರುದೇವರು ಎಲ್ಲರಿಗೂ ಪರಿಚಿತರಾಗಿದ್ದರು. ಹೀಗಾಗಿ ಆ ವರ್ಷದ ಡೆಕ್ಕನ್ ಕಾಲೇಜಿನ ಪತ್ರಿಕೆಯಲ್ಲಿ ಗುರುದೇವ ರಾನಡೆಯವರ ಕುಶಾಗ್ರ ಬುದ್ಧಿವಂತಿಕೆಯ ಪರಿಚಯ ಮಾಡಿಕೊಡುವ ಲೇಖನವನ್ನು ಶ್ರೀಖಂಡೆಯರು ಬರೆದಿದ್ದರು. ಈ ವಿಷಯ ರಾನಡೆಯವರಿಗೆ ಗೊತ್ತಿರಲಿಲ್ಲ. ಆಕಸ್ಮಿಕವಾಗಿ ಮುದ್ರಣಾಲಯಕ್ಕೆ ಹೋದಾಗ ಅಚ್ಚಿಗೆ ಸಿದ್ಧವಾಗುತ್ತಿರುವ ಲೇಖನವನ್ನು ಕಂಡು, ನೇರವಾಗಿ ಶ್ರೀ ಖಂಡೆಯವರನ್ನು ಭೇಟಿಯಾಗಿ ಯಾರ ಅನುಮತಿ ಪಡೆದು ಈ ಲೇಖನವನ್ನು ಪ್ರಕಟಿಸುತ್ತಿದ್ದೀರಿ? ಎಂದು ಕೇಳಿದರು. ಪ್ರಾ. ಬೆನ್‌ರ ಸಲಹೆಯ ಮೇರೆಗೆ ಈ ಲೇಖನ ಬರೆಯಲಾಗಿದೆ ಎಂದು ಶ್ರೀ ಖಂಡೆ ಉತ್ತರಿಸಿದರು. ಇಲ್ಲಿಂದ ನೇರವಾಗಿ ಯುರೋಪಿಯನ್ ಪ್ರಾಧ್ಯಾಪಕರನ್ನು ಕಂಡು ನಮ್ರರಾಗಿ 'To praise a young rising friend is to curse him' ಎಂದು ನುಡಿದರು. ಬಳಿಕ ಆ ಲೇಖನವನ್ನು ಹರಿದು ಹಾಕಿದರು. ನಿಜಕ್ಕೂ ಧನ್ಯರು ಆ ಗುರುದೇವ ರಾನಡೆಯವರು! ಆತ್ಮಸಾಕ್ಷಾತ್ಕಾರದ ಶಿಖರವನ್ನು ಆರೋಹಣ ಮಾಡಲು ಬಯಸುತ್ತಿರುವ ರಾನಡೆಯವರು ೨೬ನೇ ವಯಸ್ಸಿಗೆ ಕೀರ್ತಿಯನ್ನು ಧಿಕ್ಕರಿಸಿದರು. ಸದ್ಗುರುಗಳು ೧೯-೧೨-೧೯೧೧ರಲ್ಲಿ ಪತ್ರ ಬರೆದು ಪಾಲಿಗೆ ಬಂದದ್ದೇ ಪಂಚಾಮೃತ ಎಂಬ ರೀತಿಯಲ್ಲಿ ಬದುಕುವುದನ್ನು ಕಲಿತರೆ ಉತ್ತಮ ಭವಿಷ್ಯವಿದೆ ಎಂದು ಆಶೀರ್ವದಿಸಿದರು.

ಪರಮಾರ್ಥಕ್ಕೆ ಅನುಕೂಲವಾಗುವಂತಹ ನೌಕರಿಯನ್ನು ಹಿಡಿಯಬೇಕೆಂದು ರಾನಡೆಯವರು ನಿರ್ಧರಿಸಿದರು. ಎರಡು ಕಡೆ ಸಂದರ್ಶನಕ್ಕೆ ಕರೆಬಂತು. ಒಂದು ಕುರಂದವಾಡ ರಾಜೇಸಾಹೇಬರಿಂದ, ಮತ್ತೊಂದು ಗದಗ ಹೈಸ್ಕೂಲ್‌ನಲ್ಲಿ ಹೆಡ್‌ಮಾಸ್ಟರ್ ಹುದ್ದೆಗಾಗಿ. ಸದ್ಗುರುಗಳ ಸಲಹೆ ಕೇಳಿದಾಗ, 'ತಾನಾಗಿಯೇ ಬಂದುದನ್ನು ದೇವರ ಕೃಪೆ ಎಂದು ಸ್ವೀಕರಿಸು' ಎಂದು ಸಲಹೆ ನೀಡಿದರು.

೧೯೧೧ರಲ್ಲಿ ಫರ್ಗ್ಯೂಸನ್ ಕಾಲೇಜಿನಲ್ಲಿ ಆಂಗ್ಲ ಪ್ರಾಧ್ಯಾಪಕರೆಂದು ನೇಮಕಾತಿ ಮಾಡಿದರು. ರಾನಡೆಯವರು ವಿದ್ಯಾರ್ಥಿಗಳಿಗೆ ಸಾಹಿತ್ಯಶಾಸ್ತ್ರ ವಿಷಯವನ್ನು ಸುಲಭವಾದ ರೀತಿಯಲ್ಲಿ ಆಕರ್ಷಕವಾಗಿ ಕಲಿಸಲಾರಂಭಿಸಿದರು. 'Books help when friends do not and when books do not meditation.' ಈ ರೀತಿ ಭಾಷೆಯ ವಿಷಯವನ್ನು ಕಲಿಸುವಾಗಲೂ ಸಹ ಜೀವನಮೌಲ್ಯದ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆಯುತ್ತಿದ್ದರು. ರಾನಡೆಯವರು ಒಂದು ವರ್ಷ ಯಶಸ್ವಿಯಾಗಿ ಪ್ರಾಧ್ಯಾಪಕ ವೃತ್ತಿಯನ್ನು ಪೂರೈಸಿದರು. ಆತ್ಮೀಯತೆಯಿಂದ

ಕಲಿಸುವ ಪದ್ಧತಿ ಹಾಗು ಆಳವಾದ ವ್ಯಾಸಂಗದಿಂದಾಗಿ ಅವರು ವಿದ್ಯಾರ್ಥಿಗಳ ಪ್ರಿಯ ಶಿಕ್ಷಕರಾದರು. ರಾನಡೆಯವರ ಸ್ವಭಾವವು ನೇರವೂ ನಿರ್ಮಲವೂ ಮತ್ತು ಗುಣಗ್ರಾಹಿಯೂ ಆಗಿರುವುದರಿಂದ ಮತ್ತು ಅವರ ಸ್ಮರಣಶಕ್ತಿಯೂ ಅಸಾಮಾನ್ಯವಾಗಿರುವುದರಿಂದಲೂ ನಾಲ್ಕು ದಶಕಗಳ ಹಿಂದಿನ ಸಂಗತಿಗಳನ್ನು ಯಥಾವತ್ತಾಗಿ ನೆನಪು ಮಾಡಿಕೊಳ್ಳುತ್ತಿದ್ದರು.

ಪ್ರಾಧ್ಯಾಪಕರಾಗಿದ್ದಾಗಲೂ ಗುರುದೇವ ರಾನಡೆಯವರ ಪರಮಾರ್ಥ ಸಾಧನೆ ಮತ್ತು ಸದ್ಗುರು ಭಕ್ತಿಯು ವೃದ್ಧಿಯಾಗುತ್ತಲೇ ಇತ್ತು. 'ನಿತ್ಯ ನೇಮಾವಲಿ'ಯ ನಿಮಿತ್ತದಿಂದ ಆರಂಭಗೊಂಡ ಅವರ ಬರವಣಿಗೆಯ ಹಿಂದೆ ಸದ್ಗುರು ಬಗೆಗಿನ ಭಕ್ತಿ ಹಾಗೂ ಪ್ರೇಮಾದರದ ಮನೋಭೂಮಿಕೆಯೇ ಇತ್ತು.

೧೭-೩-೧೯೧೨ರಂದು ಸದ್ಗುರುವಿಗೆ ಬರೆದ ಪತ್ರವು ರಾಡನೆಯವರ ಮನಃ ಸ್ಥಿತಿಯನ್ನು ಚೆನ್ನಾಗಿ ಬಿಂಬಿಸುತ್ತದೆ. 'ನಿಮ್ಮ ಮತ್ತು ಆತ್ಮಜ್ಞಾನದ ಯೋಗ್ಯತೆಯನ್ನು ವಿಶ್ವದ ತುಂಬ ಪಸರಿಸಲು ದೇಹ ಮತ್ತು ಬುದ್ಧಿಯನ್ನು ವ್ಯಯಿಸಬೇಕೆಂದು ನಿರ್ಧರಿಸಿದ್ದೇನೆ. ನಿಮ್ಮಂಥ ಜ್ಯೋತಿಸ್ವರೂಪ ಸಾಧುಸಂತರು ತೀರ ವಿರಳ. ಹೀಗಾಗಿ ಸಾಧ್ಯವಾದಷ್ಟು ಆತ್ಮಜ್ಞಾನದ ಡಂಗುರವನ್ನು ಜಗತ್ತಿನ ಉದ್ದಕ್ಕೂ ಬಾರಿಸುವ ಸಂಕಲ್ಪ ಮಾಡಿದ್ದೇನೆ'.

ಇದಕ್ಕೆ ೨೮-೩-೧೯೧೨ರಲ್ಲಿ ಸದ್ಗುರುವಿನ ಉತ್ತರ ಬಂತು. '...ಧೀರ, ಉದಾರ ಗಂಭೀರವಾಗಿ ವರ್ತಿಸಿ, ಅಖಂಡ ನಾಮಸ್ಮರಣೆ ಮಾಡುತ್ತಿರಬೇಕು. ನಾರಾಯಣ ಎಲ್ಲ ಕಾರ್ಯವನ್ನು ನೆರವೇರಿಸುತ್ತಾನೆ...ಚಿಂತಿಸಬೇಕಿಲ್ಲ'

'ಕರೆಯದಲೇ ಬಂದಿಹುದು ಹರಿನಾಮ ಕಾಮಧೇನು' ಎಂಬ ಕೃಷ್ಣದಾಸರ ಪದ್ಯದಂತೆ ಸದ್ಗುರು ನೀಡಿದ ನಾಮವು ಕಾಮಧೇನುವಿನಂತಿದೆ ಎಂದು ಗುರುದೇವ ರಾನಡೆಯವರು ಬರೆಯುತ್ತಾರೆ.

೧೯೧೩ರಲ್ಲಿ ರಾನಡೆಯವರನ್ನು ಹಸ್ತಪ್ರತಿಯ ಗ್ರಂಥಪಾಲರೆಂದು ನೇಮಿಸಲಾಯಿತು. ಅವರ ಏಕಾಂತಪ್ರಿಯ ಮತ್ತು ಸಂಶೋಧನ ಪರ ಮನೋವೃತ್ತಿಗೆ ಹೊಂದುವಂತಹ ನೌಕರಿ ಸಿಕ್ಕಾಗ ಅದರ ಸಂಪೂರ್ಣ ಲಾಭವನ್ನು ಪಡೆದರು. ಇದೇ ಕಾಲಕ್ಕೆ ಗ್ರೀಕ್ ಹಾಗೂ ಸಂಸ್ಕೃತದ ತೌಲನಿಕ ಅಧ್ಯಯನದ ಮೂಲಕ ಗ್ರೀಕ್ ತತ್ವಜ್ಞಾನದ ಆಳವಾದ ಅಧ್ಯಯನವನ್ನು ಕೈಕೊಂಡರು.

ಗುರುದೇವ ರಾನಡೆಯುವರು ಕಾಲೇಜಿನಲ್ಲಿ ಕ್ಯೂರೇಟರ್‌ರೆಂದು ಕೆಲಸ ಮಾಡುತ್ತಿರುವುದರಿಂದ ಇಂಚಗೇರಿಯ ಶ್ರಾವಣ ಸಪ್ತಾಹಕ್ಕೆ ಹೋಗುವುದು ಸಾಧ್ಯವಿರಲಿಲ್ಲ. ಈ ವಿಷಯವನ್ನು ಅವರು ಪತ್ರದ ಮೂಲಕ ಸದ್ಗುರುವಿಗೆ ತಿಳಿಸಿದರು. ಆತ್ಮ ನಿರೀಕ್ಷಣೆ ಮಾಡುವ ನಿಜವಾದ ಸಾಧಕನ ಅಂತರಂಗವನ್ನು ಅಲ್ಲಿ ಗುರುತಿಸ ಬಹುದಾಗಿತ್ತು.

'ಶ್ರಾವಣದ ಸಪ್ತಾಹ ಸದ್ಗುರು ಕೃಪೆಯಿಂದ ಸಾಂಗವಾಗಿ ನೆರವೇರುತ್ತಿರಬಹುದು. ನಾನಿಲ್ಲಿಗೆ ಬಂದಿರುವುದರಿಂದ ಸರಿಯಾಗಿ ಸಾಧನ ಮಾಡುವುದು ಸಾಧ್ಯವಾಗುತ್ತಿಲ್ಲ. ಕುಟುಂಬದವರ ಸೇವೆಯಿಂದ ಕಾಲಹರಣವಾಗುತ್ತಿದೆ. ಸಾಧನೆಯ ಆನಂದ ಲಭಿಸುತ್ತಿಲ್ಲ. ಸದ್ಗುರು ವಚನ ಕೇಳಲು ಸಿಗುವುದಿಲ್ಲ. ಈ ಸಂಸಾರದಿಂದ ಸದ್ಗುರು ಯಾವಾಗ ಮುಕ್ತಿ ಮಾಡುವರೋ ಗೊತ್ತಿಲ್ಲ. ಸಾಧನ ಮಾಡುವುದರಿಂದ ಮೈಯಲ್ಲಿ ಬಲ ಬಂದಂತಾಗುತ್ತದೆ. ಮನಸ್ಸು, ದೇಹ, ಬುದ್ಧಿಯ ಸಾಮರ್ಥ್ಯ ಹೆಚ್ಚುವುದು ಎಂದು ಸಾಧೂ ಸಂತರು ಹೇಳುವ ಮಾತಿನ ಅನುಭವವನ್ನು ಪಡೆಯುವ ಯೋಗ್ಯತೆ ಮೈಯಲ್ಲಿಲ್ಲ. ಪ್ರಪಂಚವನ್ನು ತ್ಯಾಗ ಮಾಡುವುದು ಸಾಧ್ಯವಾಗುತ್ತಿಲ್ಲ. ಪ್ರಪಂಚದ ಮಾಯೆಯ ಶಕ್ತಿ ಅಗಾಧವಾಗಿದೆ! ಹರಿಮಾಯೆ ಎಂದು ಹುಟ್ಟುವುದೋ ಎಂದು ಜಾತಕದಂತೆ ಹಾದಿ ಕಾಯುತ್ತಿದ್ದೇನೆ. ಶ್ರೀ ಅಂಬೂರಾವ್ ಮಹಾರಾಜರು ಸಾಧನೆ ಮಾಡಿ ನಿಮ್ಮನ್ನು, ಗುರುವನ್ನು ಪುನೀತರನ್ನಾಗಿ ಮಾಡಿದರು. ಈ ಸಾಮರ್ಥ್ಯ ಬರಲು ಸದ್ಗುರುವಿನ ಕೃಪೆಯಲ್ಲದೆ ಅನ್ಯಮಾರ್ಗವಿಲ್ಲ. ನೀವು ಇಂಚಗೇರಿಯಂಥ ಪವಿತ್ರ ತಾಣದಲ್ಲಿ ಹಲವು ವರ್ಷಗಳಿಂದ ಜನರನ್ನು ಸನ್ಮಾರ್ಗಕ್ಕೆ ಹಚ್ಚುವ ಕಾರ್ಯ ಮಾಡುತ್ತಿದ್ದೀರಿ. ಇದಕ್ಕಿಂತ ಶ್ರೇಷ್ಠ ಕಾರ್ಯ ಜಗತ್ತಿನಲ್ಲಿ ಬೇರೆ ಯಾವುದಿದೆ? ನಿಮ್ಮಂಥವರ ಸಹವಾಸ ಲಭಿಸಿದ್ದು ನನ್ನ ಭಾಗ್ಯ. ಸಕಲ ಸಂತರಿಗೆ ನಮಸ್ಕಾರ...'

ಈ ಪತ್ರದಿಂದ ರಾನಡೆಯವರ ಅಂತರಂಗದಲ್ಲಿ ಪರಮಾರ್ಥ ಸಾಧನೆಯ ಬಗೆಗಿನ ನಿಷ್ಠೆ, ಸದ್ಗುರುವಿನ ಬಗೆಗಿನ ನಿಸ್ಸೀಮ ಪ್ರೇಮ, ಅನುಪಮ ಶ್ರದ್ಧೆ ಸತ್ಸಂಗದ ಜೊತೆಗೆ ಸಾಧನೆ ಮಾಡಬೇಕೆನ್ನುವ ಕಳಕಳಿಯು ಗಮನಕ್ಕೆ  ಬರದೆ ಇರುವುದಿಲ್ಲ. ಕೊನೆಗವರು ಪುಣೆಯಲ್ಲೇ ಉತ್ಕಟ ಸಾಧನೆಯನ್ನು ಕೈಕೊಂಡರು. ನಿದ್ದೆ ಕೇವಲ ಎರಡು ಮೂರು ಗಂಟೆ. ಕೋಣೆಯ ಮಧ್ಯದಲ್ಲಿ ಚಾಪೆಯನ್ನು ಹಾಸಿ, ಬದ್ಧಪದ್ಮಾಸನ ದಲ್ಲಿ ಕೂತು, ನಾಸಿಕದ ಅಗ್ರದಲ್ಲಿ ನೋಟವನ್ನು ಸ್ಥಿರಗೊಳಿಸಿ ರಾತ್ರಿಯ ಪ್ರಶಾಂತ ವಾತಾವರಣದಲ್ಲಿ ಅವರು ನಾಮಸ್ಮರಣೆಯಲ್ಲಿ ಮುಳುಗಿ ಬಿಡುತ್ತಿದ್ದರು. ಸಮಯದ ಅರಿವೂ ಇರುತ್ತಿರಲಿಲ್ಲ. ಅವರ ಅಂತರಂಗದಲ್ಲಿ ಪರಮಾರ್ಥ ಭಕ್ತಿಯು ವೃದ್ಧಿಯಾಗುತ್ತಲಿತ್ತು.

ಅವರು ಡೆಕ್ಕನ್ ಕಾಲೇಜಿನ ತಮ್ಮ ಕೋಣೆಯಲ್ಲೇ ಸದಾಕಾಲ ತಮ್ಮ ನೇಮ, ವಾಚನ, ವ್ಯಾಸಂಗದಲ್ಲೇ ಮುಳುಗಿರುತ್ತಿದ್ದರು.  ಕ್ಲಬ್ ಮನುಷ್ಯ ಕೋಣೆಯ ಹೊರಗೆ ಅವರ ಊಟವನ್ನು ತಂದಿಡುತ್ತಿದ್ದ. ನೇಮ ಮುಗಿಸಿದ ಬಳಿಕ ಅವರು ಊಟ ಸೇವಿಸುತ್ತಿದ್ದರು. ಅಧ್ಯಾತ್ಮಜ್ಞಾನ ಪ್ರಾಪ್ತಿಯಾಗಿ ಸತತ ನಾಮಸ್ಮರಣೆ, ಬುದ್ಧಿಯ ಬುನಾದಿಯನ್ನು ಅವಿಚಲವಾಗಿಡಲು ತತ್ವಜ್ಞಾನದ ಓದು, ಮನನದಲ್ಲಿ ತೊಡಗಿರುವುದೇ ಅವರ ಮುಖ್ಯ ಕಾರ್ಯವಾಗಿರುತ್ತಿತ್ತು. ಜನರಿಂದ ನಿರ್ಲಿಪ್ತರಾಗಿರುತ್ತಿದ್ದರು.

ಶ್ರಾವಣ ಸಪ್ತಾಹಕ್ಕೆ ಇಂಚಗೇರಿಗೆ ಹೋಗಲು ಸಾಧ್ಯವಾಗದೇ ಇದ್ದುದರಿಂದ ಮಾರ್ಗಶೀರ್ಷ ತಿಂಗಳಲ್ಲಿ ಹೋಗುವ ನಿರ್ಧಾರ ಮಾಡಿದರು. ಅಂಥ ಬಿಕ್ಕಟ್ಟು ಪರಿಸ್ಥಿತಿಯೂ

ಬಂತು. ೧೯೧೩ರಲ್ಲಿ ರಾನಡೆಯವರ ಅಕ್ಕ ಕ್ಷಯದಿಂದ ತೀರ ಬಳಲುತ್ತಿದ್ದರು. ತಾನು ಸದ್ಗುರು ಕೃಪೆಯಿಂದಲೇ ಮುಕ್ತರಾಗಿರುವುದು ನೆನಪಾಗಿ ಅಕ್ಕ ಮತ್ತು ತಾಯಿಯವರನ್ನು ಇಂಚಗೇರಿಗೆ ಕರೆದೊಯ್ಯುವ ನಿರ್ಧಾರ ಮಾಡಿದರು.

೧೯೧೩ರ ಮಾರ್ಗಶೀರ್ಷ ತಿಂಗಳಲ್ಲಿ ಪುಣೆಯಲ್ಲಿ ಪ್ಲೇಗರೋಗ ಹರಡಿತ್ತು. ಇಂಚಗೇರಿಗೆ ಹೋದ ಬಳಿಕ ಗುರುದೇವ ರಾನಡೆಯವರು ಪ್ಲೇಗ ರೋಗದ ವಿಷಯ ಸದ್ಗುರುವಿಗೆ ಅರುಹಿದರು. ರಾನಡೆ ಕುಟುಂಬದ ಮೇಲೆರಗಿದ ಸಂಕಟ ಕಂಡು ಸದ್ಗುರುಗಳು ಮರುಗಿದರು. ಒಂದು ಕ್ಷಣ ಆಗಸವನ್ನು ದಿಟ್ಟಿಸಿದರು. ಸದ್ಗುರು ಸೃಷ್ಟಿಕರ್ತನಲ್ಲಿ ತದ್ರೂಪಗೊಂಡಂತೆ ರಾನಡೆಯವರಿಗೆ ಅನಿಸಿತು. ಬಳಿಕ ಸದ್ಗುರು ಗೋಣು ಅಲುಗಾಡಿಸಿ, ತಮ್ಮ ಚೀಲದಿಂದ ನಾಲ್ಕು ಮದ್ದಿನ ಗುಳಿಗೆಯನ್ನು ಹೊರತೆಗೆದು ರಾನಡೆಯವರ ಭಗಿನಿಗಾಗಿ ನೀಡಿದರು. ಅದರ ಸೇವನೆಯಿಂದ ಭಗಿನಿ ಚೇತರಿಸಿ ಕೊಂಡರು. ಇದರಿಂದಾಗಿ ಗುರುದೇವ ರಾನಡೆ ಹಾಗೂ ಅವರ ಮಾತೋಶ್ರೀಯವರಲ್ಲಿ ಸದ್ಗುರು ನಿಷ್ಠೆಯು ಮತ್ತಷ್ಟು ದೃಢಗೊಂಡಿತು.

ಒಂದು ದಿನ ರಾನಡೆಯವರು ಸದ್ಗುರುವಿನ ಬಳಿಯಿದ್ದಾಗ 'ದೇವರು ಕೊಟ್ಟು ಮರತಾನ' ಎಂದು ಹೇಳಿದರು. ರಾನಡೆಯವರು ಗಲಿಬಿಲಿಗೊಂಡರು. 'ದೇವರು ನಿನಗೆ ಬೇಕಾದಷ್ಟು ಕೊಟ್ಟರೂ ನೀನು ಅವನನ್ನು ಮರೆತಿರುವೆ' ಎಂದು ನಂದಪ್ಪಣ್ಣ ವಿವರಿಸಿದಾಗ ರಾನಡೆಯವರು ತಕ್ಷಣ ತಮ್ಮ ಬಳಿಯಿರುವ ೫೦ರೂ. ಖರ್ಚು ಮಾಡಿ, ಶ್ರೀ ನಿಂಬರಗಿ ಮಹಾರಾಜರ ಸಮಾಧಿಗೆ ಬುಂದಿಲಾಡುವಿನ ನೈವೇದ್ಯ ತೋರಿಸಿದರು. ಸದ್ಗುರು ಮಹಾರಾಜರು ಸಂತೋಷದಿಂದ ಐದು ಲಡ್ಡುವನ್ನು ಪ್ರಸಾದವೆಂದು ಗುರುದೇವರಿಗೆ ನೀಡಿದರು.

ಇಂಚಗೇರಿಗೆ ಹೋಗುವ ಮುನ್ನ ರಾನಡೆಯವರ ಕಾಲಿಗೆ ನೋವಾಗಿತ್ತು. ವೈದ್ಯರು ಶಸ್ತ್ರಕ್ರಿಯೆ ಮಾಡಬೇಕೆಂದು ಹೇಳಿದ್ದರು. ಸಪ್ತಾಹದ ಕಾಲಕ್ಕೆ ಗುರುದೇವರು ಕುಂಟುತ್ತ ನಡೆಯುವುದನ್ನು ಕಂಡು ಸದ್ಗುರು ಮುಂದಿನ ಉಪಾಯವನ್ನು ಹೇಳಿದರು. ಪ್ರತಿದಿನ ನಾಮಸ್ಮರಣೆ ಮಾಡಿದ ನಾಲಿಗೆಯ ಜೊಲ್ಲಿನಿಂದ ಕಾಲು ಉಜ್ಜಬೇಕು. ಎರಡು ವಾರಗಳ ಬಳಿಕ ಈ ಉಪಚಾರದಿಂದ ಕಾಲು ಸರಿಯಾಯಿತು. 'ನಾಮಬಲದಿಂದ ವಿಷ ಬಾಧೆಯೂ ಆಗಲಾರದು' ಎಂದವರು ಸಮರ್ಥರ ವಾಕ್ಯವನ್ನು ಉದ್ಧರಿಸುತ್ತಿದ್ದರು. ನಾದಬಿಂದು ಪ್ರಕಾಶಾದಿ ಅನುಭವದಂತೆ ಯಾರ ನಾಲಿಗೆಯ ಮೇಲೆ ಅಮೃತರಸ ಶ್ರವಿಸುವುದೋ ಅಂಥ ಭಾಗ್ಯವಂತ ಸಾಧಕರೇ ಶ್ರೀ ಸದ್ಗುರು ಹೇಳಿದ ಉಪಾಯವನ್ನು ಕೈಕೊಳ್ಳಬೇಕು. ಇಂಚಗೇರಿಯ ಸಪ್ತಾಹವನ್ನು ಮುಗಿಸಿ ರಾನಡೆಯವರು ಪುಣೆಗೆ ಮರಳಿದರು.

ಇಂಚಗೇರಿಯಲ್ಲಿದ್ದಾಗಲೇ ಶ್ರೀ ಮಹಾರಾಜರ ಆರೋಗ್ಯ ಹದಗೆಟ್ಟ ವಿಷಯ ತಿಳಿದು ಬಂದಿತು. ಶ್ರೀ ಶಿವಲಿಂಗವ್ವ ಮತ್ತು ಇತರ ಸಾಧಕರ ಬಲವಂತಕ್ಕೆ ಮಣಿದು ಇಚ್ಛಾಮರಣಿಯಾದ ಮಹಾರಾಜರು ತಮ್ಮ ಸಾವನ್ನು ಮುಂದೂಡಿದರು. ಸಪ್ತಾಹ ಮುಗಿಸಿ ಹೊರಡಲು ಸಿದ್ಧರಾದಾಗ

ಮಹಾರಾಜರೂ ಸಹ ಗದ್ಗದಿತರಾದರು. ವರ್ಷದಲ್ಲಿ ಹನ್ನೊಂದು ತಿಂಗಳು ಸಂಸಾರ ಮಾಡಿ, ಒಂದು ತಿಂಗಳು ಇಂಚಗೇರಿಗೆ ಬಂದು, ಸಂತರ ಸಾಂಗತ್ಯದಲ್ಲಿ ತ್ರಿಕಾಲ ನೇಮ, ಧಾರ್ಮಿಕ ಗ್ರಂಥ ಪಠಣ, ಭಜನೆ ಮಾಡಿದಿ ರಾದರೆ, ಜೀವನದ ದುಃಖ, ಉದ್ವೇಗ ಮತ್ತು ಚಿಂತೆ ದೂರವಾಗುತ್ತದೆ ಎಂದರು. ಭಕ್ತ ಜನರು ತಮ್ಮೂರಿಗೆ ಹೊರಟು ನಿಂತಾಗ ಮಹಡಿಯಲ್ಲಿ ನಿಂತು ಅವರೆಲ್ಲರಿಗೆ ವಿದಾಯ ಹೇಳುವಾಗ ಅವರ ಕಂಗಳಲ್ಲಿ ಭಕ್ತಿಪ್ರೇಮದ ಕಂಬನಿ ತುಂಬಿಕೊಂಡಿರುತ್ತಿತ್ತು. ನಿಜಕ್ಕೂ ಇದೆಂಥ ಅಲೌಕಿಕ ಮತ್ತು ನಿಸ್ವಾರ್ಥ ಪ್ರೇಮ. ಕೇವಲ ಒಬ್ಬ ಸದ್ಗುರು ಮಾತ್ರ ಇಂಥ ಪ್ರೇಮವನ್ನು ವ್ಯಕ್ತಮಾಡಬಲ್ಲ!

ಈ ರೀತಿ ಮಹಾರಾಜರಿಗೆ ವಿದಾಯ ಹೇಳಿ ರಾನಡೆಯವರು ಪುಣೆಗೆ ಮರಳಿದರು. ಪುಣೆಯಿಂದ ಅವರು ಗುರುಭಗಿನಿ ಶ್ರೀ ಶಿವಲಿಂಗವ್ವಕ್ಕರಿಗೆ ಒಂದು ಪತ್ರವನ್ನು ಬರೆದರು. ಈ ಪತ್ರವು ಆ ಕಾಲದ ಪರಿಸ್ಥಿತಿ ಹಾಗು ಅವರ ಮನಸ್ಥಿತಿಯನ್ನು ಬಿಂಬಿಸುತ್ತದೆ.

ಶ್ರೀಗುರು ಸಮರ್ಥ

ಡೆಕ್ಕನ್ ಕಾಲೇಜ, ಪುಣೆ

೨೦-೧೨-೧೯೧೩

ಶ್ರೀಮತ್ ಸಕಲಾನಂದಸ್ವರೂಪಿ ಶಿವಲಿಂಗವ್ವ ಇವರ ಪಾದಕಮಲಗಳಿಗೆ ರಾಮಚಂದ್ರ ದತ್ತಾತ್ರಯ ರಾನಡೆಯವರ ಶಿರಸಾಷ್ಟಾಂಗ ನಮಸ್ಕಾರ.

ಮಾರ್ಗಶೀರ್ಷ ತಿಂಗಳಲ್ಲಿ ತಮ್ಮ ಭೇಟಿಯಿಂದ ತಮ್ಮನ್ನು ಕಾಣುವ ಇಚ್ಛೆ ಈಡೇರಿತು. ಆತ್ಮದ ದಾರಿಯ ಮೂಲಕವಾಗಿ ಯಾರು ಉಚ್ಚಸ್ಥಾನವನ್ನು ಪಡೆದರೋ, ಯಾರು ಗುರುವಿನ ಮತ್ತು ಆತ್ಮದ ಅನುಭವವನ್ನು ಐಕ್ಯಗೊಳಿಸಿ ದರೋ, ಅಂಥ ನಿಮ್ಮಂಥವರ ವಾಕ್ಯವನ್ನು ಪರಿಪಾಲಿಸುವುದೇ ನನ್ನಂಥ ಅಜ್ಞಾನಿಯ ಕರ್ತವ್ಯ. ಸದ್ಗುರುಗಳಿಗೂ ಪತ್ರ ಬರೆದಿದ್ದೇನೆ. ಸಮರ್ಥರ ಆರೋಗ್ಯದ ಚಿಂತೆ ಈ ಸಲ ಕಾಡಿತು. ಈಗವರ ಆರೋಗ್ಯ ಸುಧಾರಿಸಿದ್ದರಿಂದ ಸಮಾಧಾನ ವೆನಿಸುತ್ತಿದೆ. ಈಗವರು ಇಮ್ಮಡಿ ತೇಜದಿಂದ ಬೆಳಗಬಹುದು.

ಪತ್ರದ ಮೂಲಕ ಅನುಭವವನ್ನು ಹಂಚಿಕೊಂಡಾಗ ಸಿಗುವ ಆನಂದವನ್ನು ಬಣ್ಣಿಸುವುದು ಸಾಧ್ಯವಿಲ್ಲ. ತಮ್ಮ ಸೇವಾಕಾಂಕ್ಷಿ

**ರಾಮಚಂದ್ರ ದತ್ತಾತ್ರಯ ರಾನಡೆ**

ಮುಂದೆ ೨೩-೧-೧೯೧೪ರಲ್ಲಿ ಶಿವಲಿಂಗವ್ವರಿಗೆ ಎರಡನೆಯ ಪತ್ರವನ್ನು ಬರೆದರು. ಈ ಪತ್ರದಲ್ಲಿ ನೇಮದ ಬಗೆಗೆ ಉಭಯತರಲ್ಲಿರುವ ಕಳಕಳಿ ಮತ್ತು ಸದ್ಗುರುವಿನ ಬಗೆಗಿರುವ ಉತ್ಕಟ ಪ್ರೇಮ ವ್ಯಕ್ತವಾಗುತ್ತದೆ. ಈ ಪತ್ರದಲ್ಲಿ ಅವರು ಸದ್ಗುರು ಮಹಾರಾಜರ ಬಗೆಗೆ ವ್ಯಕ್ತಪಡಿಸಿದ ಆತಂಕವನ್ನು ಗುರುತಿಸಬಹುದಾಗಿದೆ. ಇದಕ್ಕೆ ಮಹತ್ವದ ಕಾರಣವೂ ಇದೆ. ಇದೇ ಸುಮಾರಿಗೆ

ಅವರಿಗೊಂದು ಕನಸು ಬಿತ್ತು. ಕನಸಿನಲ್ಲಿ ಮಹಾರಾಜರ ಖಾಲಿಯಾಗಿರುವ ಹಾಸಿಗೆ ಮಾತ್ರ ಕಾಣಿಸಿತು. ಇದರಿಂದಾಗಿ ರಾನಡೆಯವರು ಆತಂಕ ಕ್ಕೊಳಗಾಗಿದ್ದರು. ಹೀಗಾಗಿ ಅವರು ಶಿವಲಿಂಗವ್ವರಿಗೆ ಪತ್ರ ಬರೆದಿದ್ದರು. ದುರಾದೃಷ್ಟ ವೆಂದರೆ, ಪತ್ರ ಬರೆದ ಆರನೇ ದಿನಕ್ಕೆ ಅಂದರೆ ೨೯-೧-೧೯೧೪ರಂದು ಶ್ರೀ ಸಮರ್ಥ ಭಾವೂ ಸಾಹೇಬ ಮಹಾರಾಜರ ನಿರ್ಯಾಣ ಇಂಚಗೇರಿಯಲ್ಲಾಯಿತು. ತಕ್ಷಣ ರಾನಡೆಯವರು ಇಂಚಗೇರಿಗೆ ಧಾವಿಸಿದರು. ಸದ್ಗುರುವಿನ ದೇಹತ್ಯಾಗದಿಂದ ರಾನಡೆಯವರು ಅಪಾರ ದುಃಖವನ್ನು ಅನುಭವಿಸಿದರು. ಬಳಿಕ ಸದ್ಗುರುವಿನ ನಿರ್ಯಾಣದ ಅಭಂಗವನ್ನು ರಚಿಸಿದರು. ಈ ಅಭಂಗಗಳಲ್ಲಿ ಸದ್ಗುರುವಿನ ಸಮಗ್ರ ಜೀವನದ ಹಿನ್ನೆಲೆಯನ್ನು ನೀಡಿದ್ದು ಇದು ಅಂತಃಕರಣವನ್ನು ಕಲಕುತ್ತದೆ.

**ನಿರ್ಯಾಣದ ಅಭಂಗ**

(೨೯ ಜನೇವರಿ ೧೯೧೪ ಗುರುವಾರ ಮಾಘ ಶು. ३ ಶಕ ೧೮३೫)

ಅವತಾರ ಕಾರ್ಯ ಮುಗಿಯಿತೆಂದು
ತ್ವರೆ ಮಾಡಿದಿರಾ ॥೧॥
ಹೋಗುವುದಾಗಿ ಮೊದಲೇ ಹೇಳಿದಿರಿ
ಸಕಲ ಉಪಾಧಿಯನ್ನು ತ್ಯಜಿಸಿದಿರಿ ॥೨॥
ಶಿಷ್ಯರು ಕೇಳುವರು ನಿಮ್ಮ ಬಳಿಕ
ಭಕ್ತಿಕಾರ್ಯ ಮುನ್ನಡೆಸುವವರು ಯಾರೆಂದು ॥३॥
ನಿಮಗೇಕೆ ಅದರ ಚಿಂತೆ
ಭಕ್ತಿ ಮುನ್ನಡೆಸಲು ದೇವನಿಹನು ॥೪॥
ಎಷ್ಟೇ ಯೋಚಿಸಿದರೂ ಆಗುವುದು
ತಪ್ಪದು ದೈವಚಿತ್ತವದು ॥೫॥
ಮಾತುನಿಂತ ಬಳಿಕ ಅಂತರಂಗದಲ್ಲಿ
ನಾಮಾವಳಿ ಶುರುವಾಯಿತು ॥೬॥
ನಾಮಸ್ಮರಣೆ ಏಕಾದಶ ದಿನದ ವರೆಗೆ
ನಡೆಯಿತು ಭೋಜನ ತ್ಯಾಗವಾಯಿತು ॥೭॥
ಮಾಘಶುದ್ಧ ತೃತೀಯಾದ ಗುರುವಾರದಂದು
ರಾತ್ರಿಯ ಒಂದು ಪ್ರಹರ ಕಳೆಯಿತು ॥೮॥
ಶಿಷ್ಯರಿಂದ ಭಜನೆ ನಡೆದಾಗ
ಜೀವನ ಪ್ರೀತಿ ಕಂಗಳಲಿ ಗೋಚರಿಸಿತು ॥೯॥
ಭಜನೆಯ ಕೊನೆಗೆ ವಿಠ್ಠಲನ

ಘೋಷ ಮೊಳಗಿತು. ॥೧೦॥
ಕರ್ಪೂರದ ಜ್ಯೋತಿ ಮಂದಗೊಂಡಿತು
ಚಪ್ಪಾಳೆ ಬಾರಿಸಿ ದೇಹ ತೊರೆದೆ ॥೧೧॥
ದೇಹ ತೊರೆದ ನಮ್ಮ ಧನ್ಯ ಗುರುನಾಥ
ಜ್ಯೋತಿಯೊಳಗೆ ಜ್ಯೋತಿ ಸೇರಿ ಐಕ್ಯಗೊಂಡಿತು ॥೧೨॥
(ನಿತ್ಯ ನೇಮಾವಲಿ ಪು. ೧)

ಈ ರೀತಿ ದಿನಾಂಕ ೨೯ ಜನೇವರಿ ೧೯೧೪ರಂದು ಶ್ರೀ ಭಾವೂಸಾಹೇಬ ಮಹಾರಾಜರು ದೇವರಲ್ಲಿ ಏಕರೂಪಗೊಂಡರು. ಇದೇ ಸುಮಾರಿಗೆ ಶ್ರೀ ಅಂಬುರಾವ ಬಾಬಾ ಅವರು ಗುರುದೇವರಿಗೆ ಪತ್ರ ಬರೆದರು. ಮಹಾರಾಜರ ನಿರ್ಯಾಣದಿಂದ ವಿಹ್ವಲಗೊಂಡು ವರ್ಷವಿಡೀ ಕಂಬನಿ ಸುರಿಸಿದರೂ, ಶಾಂತ ಮತ್ತು ಸಮಚಿತ್ತದಿಂದ ಶ್ರೀ ಬಾಬಾರವರು ಸಮಾಧಿ ಹಾಗೂ ಉಳಿದ ವ್ಯವಹಾರವನ್ನು ಯಶಸ್ವಿಯಾಗಿ ನೆರವೇರಿಸಿದರು. ಇದು ಅವರ ಸ್ಥಿತಪ್ರಜ್ಞೆಯ ದ್ಯೋತಕವಾಗಿದೆ.

ಮಾಘಶುದ್ಧ ೧೫ರಂದು ಶ್ರೀ ಮಹಾರಾಜರ ಸಮಾಧಿಯನ್ನು ನಿರ್ಮಿಸಲಾಯಿತು. ಆಗ ರಾನಡೆಯವರಿಗೆ ಇಂಚಗೇರಿಗೆ ಹೋಗುವುದಾಗಲಿಲ್ಲ. ಸಮಾಧಿ ಕಾರ್ಯದ ಸಮಯದಲ್ಲಿ ಮಹಾರಾಜರ ಅಸ್ಥಿಯಿಂದ ಹೊರಹೊಮ್ಮಿದ ನಾದವನ್ನು ಬ್ರಾಹ್ಮಣ ರೆಲ್ಲರೂ ಆಲಿಸಿರುವುದಾಗಿ ಶ್ರೀ ಬಾಬಾ ಪತ್ರದಲ್ಲಿ ತಿಳಿಸಿದ್ದಾರೆ.

ಶ್ರೀ ಭಾವೂ ಸಾಹೇಬ ಮಹಾರಾಜರ ವಿಯೋಗದಿಂದ ದಿಙ್ಮೂಢರಾದ ಗುರುದೇವ ರಾನಡೆಯವರು ಶ್ರೀ ಬಾಬಾ ಅವರಿಗೆ ಪತ್ರ ಬರೆದು ಅವರ ಪವಿತ್ರ ಕಾರ್ಯದ ಸಹವಾಸದಲ್ಲಿರುವ ಕಳಕಳಿಯನ್ನು ವ್ಯಕ್ತ ಮಾಡಿದರು.

೧೯೧೪ರಲ್ಲಿ ಗುರುದೇವ ರಾನಡೆಯವರ ಬೌದ್ಧಿಕ ವೈಶಾಲ್ಯವನ್ನು ವಿಶ್ವಕ್ಕೆ ಅರಿವು ಮಾಡಿಕೊಡುವ ಒಂದು ಪ್ರಸಂಗ ನಡೆಯಿತು. ಅದರ ವಿವರವನ್ನು ಮುಂದಿನ ಅಧ್ಯಾಯದಲ್ಲಿ ನೀಡಲಾಗಿದೆ. ರಾನಡೆಯವರು ಎಂ.ಎ. ಪರೀಕ್ಷೆ ಮುಗಿಸಿ, ಶ್ರೀ ಅಂಬುರಾವ ಅವರ ಸಾನಿಧ್ಯದಲ್ಲಿರಲು ಇಂಚಗೇರಿಗೆ ಹೋದರು. ಫಲಿತಾಂಶದ ಹಿಂದಿನ ದಿನ ನಾಮಸ್ಮರಣೆಯಲ್ಲಿ ತಲ್ಲೀನರಾಗಿದ್ದಾಗ ಫಸ್ಟ್ ಕ್ಲಾಸ್ ಫರ್ಸ್ಟ್ ಚಾನ್ಸಲರ್ ಪದಕ–ತೇಲಂಗ ಸುವರ್ಣ ಪದಕ ಎಂಬ ಧ್ವನಿ ಕೇಳಿದಂತಾಯಿತು. ಮರುದಿನ ಅಂಥದೇ ತಂತಿ ಸಂದೇಶವೂ ಬಂದಿತು.

■■

# ಬೌದ್ಧಿಕ ಪ್ರಗತಿ ಮತ್ತು ಪ್ರಾಪಂಚಿಕ ಆಘಾತ

೧೯೧೪ರಲ್ಲಿ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯು, ಫರ್ಗ್ಯೂಸನ್ ಕಾಲೇಜಿನ ಪ್ರಾಧ್ಯಾಪಕ ವೃತ್ತಿಯನ್ನು ಸ್ವೀಕರಿಸುವಂತೆ ಗುರುದೇವ ರಾನಡೆಯವರನ್ನು ಕೇಳಿಕೊಂಡಿತು. ಅವರು ಬಿ.ಎ. ಪದವಿ ಪಡೆದಾಗಲೂ ಇದೇ ಸೊಸೈಟಿಯು ಅವರನ್ನು ಆಜೀವ ಸದಸ್ಯರನ್ನಾಗಿ ನೇಮಿಸಿತು. ಸದ್ಗುರು ಕೃಪೆಯಿಂದ ಜೀವನದಲ್ಲಿಯ ಅತೀ ದೊಡ್ಡ ಸಮಸ್ಯೆ ದೂರಗೊಂಡಂತಾಯಿತು. ಬದುಕಿಗೊಂದು ಸ್ಥಾವರ ಸ್ಥಿತಿ ಲಭಿಸಿದಂತಾಯಿತು.

ರಾನಡೆಯವರು ತತ್ವಜ್ಞಾನದ ಅಧ್ಯಯನವನ್ನು ಶುರು ಮಾಡಿದಾಗ ಪೌರ್ವಾತ್ಯ ಪಾಶ್ಚಿಮಾತ್ಯ ತತ್ವಜ್ಞಾನದಲ್ಲಿರುವ ಸಾಮ್ಯವನ್ನು ಯಾರೂ ಗಮನಿಸಲಿಲ್ಲ ಎನ್ನುವುದು ಅವರ ಗಮನಕ್ಕೆ ಬಂತು. ವಾಸ್ತವಿಕವಾಗಿ ದೇಶ ಕಾಲ ಪರಂಪರೆ ಭಾಷೆಯ ಭಿನ್ನತೆ ಯಿಂದಾಗಿ ತತ್ವಜ್ಞಾನದ ಮೂಲಭೂತ ವಿಚಾರ ಬರುವುದಿಲ್ಲ. ಈ ವೈಚಾರಿಕ ಏಕರೂಪವನ್ನು ಶೋಧಿಸಲೆಂದು ಅವರು ಈ ಅಧ್ಯಯನವನ್ನು ಕೈಕೊಂಡರು. ೧೯೧೪ರಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ತತ್ವಜ್ಞಾನಕ್ಕೆ ಸಂಬಂಧಿಸಿದ ಒಂದು ನಿಬಂಧವನ್ನು ಬರೆದರು. (ಆನ್ ದಿ ಸ್ಟಡಿ ಆಫ್ ಇಂಡಿಯನ್ ಆ್ಯಂಡ್ ಯುರೋಪಿಯನ್ ಫಿಲಾಸಫಿ) ಬ್ರೆಡ್ಲೆಯು ಪ್ರತಿಪಾದಿಸಿದ Absolutism ನಿರಪೇಕ್ಷ ಮತ್ತು ಸ್ವತಂತ್ರ ಮೂಲತತ್ವವಾದಿ ವಿಚಾರ ಪ್ರಣಾಲಿಯು ಶಂಕರಾಚಾರ್ಯರ ಅದ್ವೈತವಾದಕ್ಕೆ ಹೊಂದುತ್ತದೆ. ಅವರಿಬ್ಬರ ಪ್ರಕಾರ ಈ ಮೂಲತತ್ವ ಒಂದೇ ಆಗಿದ್ದು, ಅದೇ ಅಂತಿಮ ಸತ್ಯವಾಗಿದೆ. ದೇವರು ಈ ಮೂಲತತ್ವಕ್ಕಿಂತ ಭಿನ್ನವಾಗಿದ್ದಾನೆ. ಈ ಮೂಲತತ್ವದೊಂದಿಗೆ ಹೋಲಿಸಿದರೆ, ನಾವು ಒಪ್ಪುವ ದೇವರು ನಿಜವಾದ ದೇವರಲ್ಲ. ನಮ್ಮ ದೇಹ, ಆತ್ಮ ಮತ್ತು ಇತರ ಐಹಿಕ ಸಂಗತಿಗಳು ಎಲ್ಲವೂ ಬಾಹ್ಯ ಸ್ವರೂಪದ್ದಾಗಿದೆ ಎಂದು ಇಬ್ಬರೂ ಪ್ರತಿಪಾದಿಸುತ್ತಾರೆ. ಹೀಗೆ ರಾನಡೆಯವರು ಶಂಕರ ಮತ್ತು ಬ್ರೆಡ್ಲೆ; ರಾಮಾನುಜ್– ಜೇಮ್ಸ್ ವಾರ್ಡ್‌ರಂತಹ ತತ್ವಜ್ಞಾನಿಗಳಲ್ಲಿ ಮತ್ತು ಮೆಕ್ಟಗಾರ್ಟರಂತಹ ವಿಚಾರವಾದಿಗಳ ತಾತ್ವಿಕ ವಿವೇಚನೆಯಲ್ಲಿರುವ ಸಾಮ್ಯ ಮತ್ತು ವ್ಯತ್ಯಾಸವನ್ನು ತೋರಿಸಿದ್ದಾರೆ.

'Hero and Hero worship' ಮತ್ತು ಕಾರ್ಲೈಲನ 'Characteristics and the sign of the times' ಈ ಗ್ರಂಥವು ರಾನಡೆಯವರ ಮೇಲೆ ತುಂಬ ಪ್ರಭಾವ ಬೀರಿತ್ತು. ಆಳವಾದ ತೌಲನಿಕ ಅಧ್ಯಯನ ಮಾಡಿ, ಟಿಪ್ಪಣಿಯನ್ನು ಬರೆದು, ವಿದ್ಯಾರ್ಥಿಗಳಿಗೆ ಸರಿಯಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಆಕ್ಸಫರ್ಡ್ ಯುನಿವರ್ಸಿಟಿಯವರು ಈ ಟಿಪ್ಪಣಿಯನ್ನು ಪ್ರಕಟಿಸಿದರು. ಇದು ವಿದ್ಯಾರ್ಥಿಗಳಲ್ಲೂ ಪ್ರಿಯವಾಯಿತು. ಗುರುದೇವ ರಾನಡೆಯವರ ಈ ಟೀಕಾತ್ಮಕ ಟಿಪ್ಪಣಿಯು ಉಳಿದ ಭಾರತೀಯ ಲೇಖಕರಿಗಿಂತ ಶ್ರೇಷ್ಠವಾಗಿದೆ ಎಂದು ಪುಸ್ತಕ

ವಿಮರ್ಶೆಯಲ್ಲಿ ಹೇಳಲಾಗಿದೆ. ಈ ಗ್ರಂಥದಿಂದ ಲಭಿಸಿದ ಎಂಟುನೂರು ರೂಪಾಯಿಯಿಂದ ಕಾಲೇಜಿನ ಆವರಣದಲ್ಲೇ ಒಂದು ಚಿಕ್ಕ ಕುಟೀರವನ್ನು ಕಟ್ಟಿದರು. ಅಲ್ಲಿ ಏಕಾಂತದಲ್ಲಿ ಅಧ್ಯಯನ ಮತ್ತು ಮನನ ಮಾಡುವ ಉದ್ದೇಶ ಅವರದ್ದಾಗಿತ್ತು. ಅದಕ್ಕೆ 'ಕಾರ್ಲೈಲ್ ಕಾಟೇಜ್' ಎಂದು ನಾಮಕರಣ ಮಾಡಿದರು.

ರಾನಡೆಯವರು ಎಂ.ಎ.ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ಉತ್ತೀರ್ಣ ರಾಗಿದ್ದರಿಂದ ಮುಂಬೈ ವಿ.ವಿ.ಯು ಎರಡು ಸುವರ್ಣ ಪದಕವನ್ನು ನೀಡಿ ಗೌರವಿಸಿತು. ಅವರ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಿದವರು 'The Examinee knows more than the Examiner' ಎಂಬ ತೀರ್ಪು ನೀಡಿದ್ದರು. ರಾನಡೆಯವರ ಅಪೂರ್ವ ಯಶಸ್ವಿನಿಂದಾಗಿ ಅವರು ಇಡೀ ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಚಿತರಾದರು. ಹೀಗೆ ಅವರು ಸಂಸ್ಕೃತ, ಗಣಿತ ಮತ್ತು ಇಂಗ್ಲಿಷ್ ವಿಷಯದಲ್ಲಿ  ಪ್ರಭುತ್ವವನ್ನು ಪಡೆದು ತತ್ವಜ್ಞಾನದ ಉಚ್ಚ ಶಿಖರದ ಮೇಲೆ ಆರೂಢರಾಗಿ ಬೆಳಗಲಾರಂಭಿಸಿದರು.

ರಾನಡೆಯವರಿಗೆ ಎಂ.ಎ. (ತತ್ವಜ್ಞಾನ) ಪರೀಕ್ಷೆಯಲ್ಲಿ ಸುವರ್ಣ ಪದಕ ಲಭಿಸಿದಾಗ ಅವರ ಗೆಳೆಯರೆಲ್ಲರೂ ಪದಕ ಸಹಿತ ಒಂದು ಫೋಟೋ ತೆಗೆಸಿಕೊಳ್ಳಿ ಎಂದರು. ಆಗ ರಾನಡೆಯವರು 'ಹಾಗೆ ಫೋಟೋ ತೆಗೆಸಿಕೊಳ್ಳಲು ನಾನೇನು ಕಾರಹುಣ್ಣಿಮೆಯ ಎತ್ತು ಅಂತ ತಿಳಕೊಂಡಿರೇನು?' ಎಂದು ಮಾರುತ್ತರ ನೀಡಿದರು. ಅವರು ಐಹಿಕ ವಸ್ತುವನ್ನು ನೋಡುವಾಗ ಸ್ಥಿತಪ್ರಜ್ಞಭಾವವನ್ನು ಹೊಂದಿರುತ್ತಿದ್ದರು. ಅವರಿಂದಾಗಿ ಅವರ ಕಾಲೇಜಿಗೂ ಕೀರ್ತಿ ಬಂದಿತು.

ಗುರುದೇವ ರಾನಡೆಯವರು ತತ್ವಜ್ಞಾನದ ಪ್ರಾಧ್ಯಾಪಕರಾಗುವುದಕ್ಕಿಂತ ಮೊದಲು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರತ್ಯಕ್ಷವಾದ ಮತ್ತು ಆಜ್ಞೆಯವಾದ ಎಂಬೆರಡು ಬುದ್ಧಿವಾದಿ ಮತ ಪ್ರಣಾಲಿ ಬಳಕೆಯಲ್ಲಿತ್ತು. ಈಗ ಅವರು ಧ್ಯೇಯವಾದ ಮತ್ತು ಸಾಕ್ಷಾತ್ಕಾರಶಾಸ್ತ್ರವನ್ನು ಅದಕ್ಕೆ ಸೇರ್ಪಡೆ ಮಾಡಿದರು. ಆಳವಾದ ವ್ಯಾಸಂಗ–ಸ್ವತಂತ್ರ ಪ್ರಜ್ಞೆಯಿಂದಾಗಿ ರಾನಡೆಯವರ ವ್ಯಕ್ತಿತ್ವವು ಶೈಕ್ಷಣಿಕ ಕ್ಷೇತ್ರದಲ್ಲಿ ಧ್ರುವತಾರೆಯಂತೆ ಮಿನುಗಲಾರಂಭಿಸಿತು. ಅದರಿಂದಾಗಿ ದೂರದೂರದ ವಿದ್ಯಾರ್ಥಿಗಳು ತತ್ವಜ್ಞಾನದ ಲಾಲಸೆಯಿಂದಾಗಿ ಅವರತ್ತ ಆಕರ್ಷಿತರಾದರು. ಅವರ ಪಾಠ–ಪ್ರವಚನವು ಆಂತರಿಕ ಸ್ಫೂರ್ತಿಯಿಂದ ನಡೆಯುತ್ತಿದ್ದು ದರಿಂದ ಕೆಲವೇ ಸಮಯದಲ್ಲಿ ಅವರು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿದರು. ಅವರ ಮಾತು ಅವತಾರಿ ಪುರುಷರಂತೆ ಮೊಳಗುತ್ತಿತ್ತು. ಇದರಿಂದ ಹಲವು ವಿದ್ಯಾರ್ಥಿ ಗಳಲ್ಲಿ ಸುಪ್ತವಾಗಿದ್ದ ತಾತ್ವಿಕ ಚಿಂತನೆಯ ಪ್ರವೃತ್ತಿಯು ಜಾಗೃತಗೊಂಡಿತು. ಅವರು ವಿದ್ಯಾರ್ಥಿಗಳೊಂದಿಗೆ ಮಾರ್ಗದರ್ಶಕ ಸಹೃದಯ ಮತ್ತು ಸದ್ವಿಚಾರ ಪ್ರವರ್ತಕ ತತ್ವಜ್ಞಾನಿಯ ಸಂಬಂಧವನ್ನು ಹೊಂದಿದ್ದರು. ಅವರ ಪ್ರಬುದ್ಧ ಪ್ರಾಧ್ಯಾಪಕ ಜೀವನದಲ್ಲಿಯ ಕೊನೆಯ ಮೂರ್‍ನಾಲ್ಕು ವರ್ಷಗಳಲ್ಲಿ ಎಂ.ಎ. ಪಿಎಚ್.ಡಿ. ನಿಮಿತ್ತದಿಂದಾಗಿ ಉಪನ್ಯಾಸ ಕೇಳುವ ಅವಕಾಶ ಈ ಲೇಖಕನಿಗೆ ಲಭಿಸಿತ್ತು.

ಅವರು ಫರ್ಗ್ಯೂಸನ್ ಕಾಲೇಜಿನಲ್ಲಿ ತತ್ವಜ್ಞಾನದ ಪ್ರಾಧ್ಯಾಪಕರಾದ ಬಳಿಕ ಅವರ ಬೌದ್ಧಿಕ ತೇಜಸ್ಸು ಮತ್ತಷ್ಟು ಪ್ರಖರಗೊಂಡಿತು. ಅವರೊಬ್ಬ ಪ್ರಬುದ್ಧ ಆದರ್ಶ ಪ್ರಾಧ್ಯಾಪಕರೂ ಎನಿಸಿಕೊಂಡರು. ಬೆಂಗಳೂರಿನಲ್ಲಿ ಸಂಸ್ಕೃತ ಅಕಾಡೆಮಿ ಸ್ಥಾಪನೆಯ ನೆಪದಲ್ಲಿ ಅವರನ್ನು ಉಪನ್ಯಾಸ ನೀಡಲು ಆಮಂತ್ರಿಸಲಾಯಿತು. ಉಪನಿಷತ್ತಿನ ಮೇಲೆ ಮೂರು ಉಪನ್ಯಾಸ ನೀಡಲು ರಾನಡೆಯವರು ಒಪ್ಪಿದರು. ಆಗ ಅವರ ವಯಸ್ಸು ಕೇವಲ ೨೯. ಈ ಗೋಷ್ಠಿಯ ಅಧ್ಯಕ್ಷರಾಗಿದ್ದ ಬರೋಡೆಯ ಸಯ್ಯಾಜಿರಾವ್ ಗಾಯಕವಾಡರು ರಾನಡೆಯವರ ಉಪನ್ಯಾಸವನ್ನು ಆಲಿಸಿ ಬೆರಗಾದರು. 'ರಾನಡೆಯವರು ನೀಡಿದ ಭಾಷಣವನ್ನು ಇಂಗ್ಲಿಷ್ ಹಾಗೂ ಇತರ ಭಾರತೀಯ ಭಾಷೆಗಳಲ್ಲಿ ಭಾಷಾಂತರಿಸಿದರೆ ಅವರ ಜ್ಞಾನದಾನವನ್ನು ಸಾಕಷ್ಟು ಪ್ರಸಾರ ಮಾಡಿದಂತಾಗುತ್ತದೆ' ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದರು. ರಾನಡೆಯವರು ತಮ್ಮ ಅಧ್ಯಾತ್ಮಿಕ ಅನುಭವವನ್ನು ನಿಕಷಕ್ಕೊಡ್ಡಿ ಉಪನಿಷತ್ತಿನ ತೌಲನಿಕ ವಿಚಾರವನ್ನು ಮಂಡಿಸಿ ಜಗತ್‌ಪ್ರಸಿದ್ಧರಾದರು. ಈ ಉಪನ್ಯಾಸವು ರಾನಡೆಯವರ ಮುಂದೆ ಬರಲಿರುವ 'ಉಪನಿಷತ್ ರಹಸ್ಯ' ಎಂಬ ಗ್ರಂಥದ ಪೂರ್ವ ಸಿದ್ಧತೆಯಾಗಿತ್ತು.

೧೯೧೫ರಲ್ಲಿ ಲೋಕಮಾನ್ಯ ತಿಲಕರು ರಾನಡೆಯವರನ್ನು ಕರೆದು 'ಕೇಸರಿ' ಮತ್ತು 'ಮರಾಠಾ' ಎಂಬ ಪತ್ರಿಕೆಯ ಸಂಪಾದಕತ್ವ ಸ್ವೀಕರಿಸಲು ಸೂಚಿಸಿದರು. ರಾನಡೆಯವರು ತಮ್ಮ ಆಧ್ಯಾತ್ಮಿಕ ಮನೋವೃತ್ತಿಯ ಬಗೆಗೆ ವಿವರಿಸಿ ಈ ಸಂಪಾದಕತ್ವವನ್ನು ಸವಿನಯವಾಗಿ ನಿರಾಕರಿಸಿದರು. ಆಗ ತಿಲಕರು 'ನೀವು ಶ್ರೀ ಅರವಿಂದರಂತೆ ಮಿಸ್ಟಿಕ್ ಆಗಿದ್ದೀರಿ' ಎಂದರು. ಬಳಿಕ ತಮ್ಮ 'ಗೀತಾರಹಸ್ಯ'ವನ್ನು ಇಂಗ್ಲಿಷ್ ಭಾಷಾಂತರ ಮಾಡಲು ಹೇಳಿದರು. ತನ್ನ ಕಿರುವಯಸ್ಸಿನಲ್ಲಿ ಇಂಥ ಹೊಣೆಗಾರಿಕೆಯನ್ನು ಹೊರುವುದು ಯೋಗ್ಯವಾಗಲಾರದು ಎಂದು ರಾನಡೆಯವರು ತಿಳಿಸಿದರು.

೧೯೧೩ರಿಂದ ರಾನಡೆಯವರು ಮೂಲಗ್ರಾಹಿ ಪದ್ಧತಿಯಲ್ಲಿ ವ್ಯಾಸಂಗವನ್ನು ಆರಂಭಿಸಿ, ಗ್ರೀಕ್ ಭಾಷೆಯ ವಿವಿಧ ತತ್ವಜ್ಞಾನಗಳನ್ನು ಸಂಗ್ರಹಿಸಿ ನಿಬಂಧವನ್ನು ಬರೆದರು. ೧೯೧೫ರಲ್ಲಿ 'ಗ್ರೀಕ್ ಆ್ಯಂಡ್ ಸಂಸ್ಕೃತ : ಎ ಕಂಪೇರೀಟಿವ್ ಸ್ಟಡಿ' ಪ್ರಕಟಗೊಂಡ ಈ ನಿಬಂಧವನ್ನು ಓದಿ ಶ್ರೀ ಅರವಿಂದರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. 'ಪ್ರೊ. ರಾನಡೆಯವರು ತೌಲನಿಕವಾಗಿ ವ್ಯಾಸಂಗವನ್ನು ಮಾಡಿ, ಸಾದ್ಯಂತವಾಗಿ ಈ ವಿಷಯವನ್ನು ವಿವರಿಸಿದ್ದಾರೆ. ಇದು ಅವರು ಮುಂದಿನ ವಿಸ್ತೃತ ಬರವಣಿಗೆಯ ಆರಂಭ ವೆಂದು ಭಾವಿಸುತ್ತೇನೆ. ಗ್ರೀಕ್ ಭಾಷೆ ಹಾಗೂ ವೇದದ ಉಚ್ಚಾರದಲ್ಲಿರುವ ಸಾಮ್ಯ–ಗ್ರೀಕ್ ಕ್ರಿಯಾಪದದ ಪುನರ್ರಚನೆಯ ಮಾಹಿತಿಯು ನಾವೀನ್ಯಪೂರ್ಣವೂ ಆಕರ್ಷಕವೂ ಆಗಿದೆ'

ಇದರ ಬಳಿಕ ಫೆಬ್ರುವರಿ ೧೯೧೬ರಲ್ಲಿ 'ಹಿರಾಕ್ಲಿಟಸ್' ಎಂಬ ಗ್ರೀಕ್ ತತ್ವಜ್ಞಾನಿಯ ಕುರಿತು ಚಿಕಿತ್ಸಕ ದೃಷ್ಟಿಯಿಂದ ನಿಬಂಧವನ್ನು ಬರೆದರು. 'ಹಿರಾಕ್ಲಿಟಸ್‌ನು ಎಲ್ಲೆಡೆ ಯುದ್ಧವನ್ನೇ

ಕಾಣುವ ತತ್ವಜ್ಞಾನಿ. ಯುದ್ಧವು ಕೇವಲ ನೈಸರ್ಗಿಕ ಮತ್ತು ನ್ಯಾಯಬದ್ಧವಾಗಿರದೆ, ಎಲ್ಲ ಸಂಗತಿಗಳು ಜಗಳದಿಂದ ಶುರುವಾಗುತ್ತದೆ ಎಂದವನು ಭಾವಿಸುತ್ತಾನೆ'.

ಗುರುದೇವ ರಾನಡೆಯವರ ಈ ನಿಬಂಧವು ಎಲ್ಲ ವಿದ್ವಾಂಸರಿಗೆ ಒಪ್ಪಿಗೆಯಾಗಿತ್ತು. 'ಗ್ರೀಕ್ ತತ್ವಜ್ಞಾನದ ಬಗೆಗೆ ಭಾರತದಲ್ಲಿ ವಿಶೇಷ ಅಧ್ಯಯನ ನಡೆಯದೇ ಇರುವುದರಿಂದ ನೀವದನ್ನು ಮಾಡಿದ್ದು ಯೋಗ್ಯವಾಗಿದೆ' ಎಂದು ಪ್ರಿ. ಬೆನ್ ಅವರು ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು.

ಪ್ರಿ. ಬೆನ್ ಅವರ ಸೂಚನೆಯಂತೆ ಮುಂದೆ ಗ್ರೀಕ್ ತತ್ವಜ್ಞಾನದ ಬಗೆಗೆ ಹಲವು ನಿಬಂಧಗಳನ್ನು ಬರೆದರು. ಬೆನ್ ಅವರು ತಮ್ಮ ಬಳಿಯಿರುವ ವಿರಳವಾದ ಗ್ರೀಕ್ ಭಾಷೆಯ ಗ್ರಂಥಗಳನ್ನು ದೇಣಿಗೆಯಾಗಿ ನೀಡಿದರು. 'ಹಿರಾಕ್ಲಿಟಸ್' ಸಾಕ್ಷಾತ್ಕಾರಿ ವ್ಯಕ್ತಿಯಲ್ಲ ಎಂಬ ರಾನಡೆಯವರ ಅಭಿಪ್ರಾಯವನ್ನು ಶ್ರೀ ಅರವಿಂದರು ಒಪ್ಪಿರಲಿಲ್ಲ. ಈ ಭಿನ್ನಾಭಿಪ್ರಾಯವನ್ನು ವ್ಯಕ್ತಮಾಡಲು ಅವರು ರಾನಡೆ ಅವರಿಗೆ ಹಲವು ಪತ್ರಗಳನ್ನು ಬರೆದರು. 'Let us wait and see' ಎಂಬ ಉತ್ತರವನ್ನು ರಾನಡೆಯವರು ನೀಡಿ ಈ ವಿವಾದವನ್ನು ನಿಲ್ಲಿಸಿದರು. ಶ್ರೀ ಅರವಿಂದರು ಡಿಶಂಬರ್ ೧೯೧೬– ಜೂನ ೧೯೧೭ ವರೆಗೆ ತಮ್ಮ 'ಆರ್ಯ' ಎಂಬ ಪತ್ರಿಕೆಯಲ್ಲಿ ಈ ಬಗೆಗೆ ಹಲವು ಲೇಖನಗಳನ್ನು ಬರೆದರು. ಮುಂದೆ ಇದು ಗ್ರಂಥರೂಪದಲ್ಲಿ ಪ್ರಕಟಗೊಂಡಿತು. ಪ್ರಸ್ತಾವನೆಯಲ್ಲಿ ರಾನಡೆಯವರ ಪ್ರತಿಭೆಯನ್ನು ಅವರು ಕೊಂಡಾಡಿದ್ದಾರೆ.

ರಾನಡೆಯವರ ಜೀವನದಲ್ಲಿ ನಡೆಯುತ್ತಿರುವ ಪಾರಮಾರ್ಥಿಕ ಮತ್ತು ಬೌದ್ಧಿಕ ವೈಭವದ ಏರಿಕೆಗೆ ಅವರ ದೈಹಿಕ ಹಾಗು ಪ್ರಾಪಂಚಿಕ ದುಃಖವು ಹೆಜ್ಜೆ ಹೆಜ್ಜೆಗೂ ತಡೆಯನ್ನುಂಟು ಮಾಡುತ್ತಿತ್ತು. ಪ್ರಾಪಂಚಿಕ ಆಪತ್ತಿನ ಘನ ಅಂಧಕಾರದಲ್ಲೇ, ಪಾರಮಾರ್ಥಿಕ ಆನಂದದ ಬಲದಿಂದಲೇ ಅವರು ಕೊನೆಯವರೆಗೂ ಜೀವಿಸ ಬೇಕಾಯಿತು. ಮುಂದೆ ಸಾಕಷ್ಟು ವರ್ಷಗಳ ಬಳಿಕ ಫೆಬ್ರುವರಿ ೧೯೧೬ರಲ್ಲಿ, ಅವರಿಗೆ ಮೊದಲ ಮಗ ಹುಟ್ಟಿದ. ಆದರೆ ದುರ್ದೈವಕ್ಕೆ ಅವರ ಋಣಾನುಬಂಧ ಬಹಳ ದಿನಗಳದ್ದಲ್ಲ. ಮಗು ಜನಿಸಿದ್ದರಿಂದ ಮಾತೆ ಮತ್ತು ಪತ್ನಿಗಾದ ಸಂತೋಷವನ್ನು ಶಬ್ದಗಳಲ್ಲಿ ಬಣ್ಣಿಸುವುದು ಸಾಧ್ಯವಿಲ್ಲ. ಆದರೆ ಗುರುದೇವರ ಸ್ವಭಾವವೇ ಬೇರೆ. ಮಗ ಹುಟ್ಟಿದ ಸಂತೋಷವು ಅಂತರಂಗದಲ್ಲಿರುವ ಸದ್ಗುರುವಿನ ವಿಯೋಗವನ್ನು ಕಡಿಮೆ ಮಾಡುವಂತಿರಲಿಲ್ಲ. ಜನೇವರಿ ೧೯೧೪ರಲ್ಲಿ ಶ್ರೀ ಸದ್ಗುರು ಭಾವೂಸಾಹೇಬ ಮಹಾರಾಜರು ನಿರ್ಯಾಣಗೊಂಡು ಎರಡು ವರ್ಷ ಕಳೆದರೂ ಸಹ ಗುರುದೇವ ರಾನಡೆಯವರ ಮನದೊಳಗೆ ಯಾವ ಯೋಚನೆ ಕಾಡುತ್ತಿತ್ತು ಎಂಬ ಸಂಗತಿಯನ್ನು ೧೬–೭–೧೯೧೬ರಂದು ಗುರುಭಗಿನಿಯಾದ ಶ್ರೀ ಶಿವಲಿಂಗವ್ವರಿಗೆ ಬರೆದ ಪತ್ರದಲ್ಲಿ ವ್ಯಕ್ತಮಾಡಿದ್ದಾರೆ.

'.....ಶ್ರೀ ಸಮರ್ಥರ ಬಳಿಕ ಅವರ ನಾಮನಿಷ್ಠೆಯು ಹೇಗೆ ಮುಂದುವರಿಯ ಬಹುದು ಎಂಬ ಯೋಚನೆಯಲ್ಲಿ ನಾನೂ ಮುಳುಗಿದ್ದೆ. ಮಾಡುವುದು, ಮಾಡದೇ ಇರುವುದು ಪ್ರಭುಗೆ

ಸೇರಿದ್ದು. ರಜೆ ಹಾಕಬೇಕೆಂದರೂ ಸಾಧ್ಯವಾಗುತ್ತಿಲ್ಲ. ಈ ಸಂಕಟದಿಂದ ಪಾರು ಮಾಡಿ ಸದ್ಗುರು ಎಂದಿನಿಂದ ಪ್ರೇರಣೆ ನೀಡುವರೋ ಎಂಬ ಪ್ರತೀಕ್ಷೆಯಲ್ಲಿದ್ದೇನೆ.'

೧೦-೧೨-೧೯೧೬ರಂದು ರಾನಡೆಯವರು ಶ್ರೀ ಅಂಬುರಾವ ಬಾಬಾ ಅವರಿಗೆ ಪತ್ರ ಬರೆದು ತಮ್ಮ ಮಗ ಚಿ। ವೆಂಕಟೇಶನ ಚೌಳ (ಜವಳ)ಕಾರ್ಯವನ್ನು ಇಂಚಗೇರಿ ಮಠದಲ್ಲಿ ಕೈಕೊಳ್ಳಬೇಕೆಂದಿರುವುದಾಗಿ ತಿಳಿಸಿದರು. ಆದರೆ ಶ್ರೀ ಬಾಬಾ ಅವರು ನೀಡಿದ ಉತ್ತರ ಮಾತ್ರ ಮಾರ್ಮಿಕವಾಗಿತ್ತು. 'ಮಜಕೂರು ತಿಳಿಯಿತು' ಎಂದಷ್ಟೇ ಬರೆದಿದ್ದರು.

ಹಲವು ವರ್ಷಗಳ ಬಳಿಕ ಜನಿಸಿದ ಹತ್ತು ತಿಂಗಳ ಏಕೈಕ ಮೊಲೆ ಕೂಸಿನ ಮೇಲೆ ೨೮ ಡಿಶಂಬರ ೧೯೧೬ರಂದು ಅನಿರೀಕ್ಷಿತವಾಗಿ ಸಾವು ಬಂದೆರಗಿತು. ರಾನಡೆಯವರ ತಾಯಿ ಮತ್ತು ಪತ್ನಿಯ ಮೇಲೆ ಸಿಡಿಲೆರಗಿದಂತಾಯಿತು. ಕೊಲ್ಲಾಪುರ ದಲ್ಲಿದ್ದಾಗ ಆಕಸ್ಮಿಕವಾಗಿ ಮಗು ತೀರಿಕೊಂಡಾಗ ಗುರುದೇವರು ಜಮಖಂಡಿಯ ಪ್ರೌಢಶಾಲೆಯ ಸ್ನೇಹ ಸಮ್ಮೇಳನದ ಅತಿಥಿಯಾಗಿ ಹೋಗಿದ್ದರು. ಆಕಸ್ಮಿಕವಾಗಿ ತಂತಿ ಸಂದೇಶ ಸಿಕ್ಕಾಗ, ಅದನ್ನು ಗೆಳೆಯರಿಗೆ ತೋರಿಸಿ, 'ದೇವರು ನೀಡಿದ, ದೇವರೇ ಕರೆದೊಯ್ದ, ದೇವರ ಹೆಸರು ಚಿರಾಯುವಾಗಲಿ' ಎಂದು ಶಾಂತಚಿತ್ತದಿಂದ ನುಡಿದರು. ಶಾಂತ ಮನದಿಂದ ಕಾರ್ಯಕ್ರಮ ಮುಗಿಸಿ, ಕೊಲ್ಲಾಪುರಕ್ಕೆ ಮರಳಿ, ಕೆಲದಿನಗಳ ಬಳಿಕ ಪುಣೆಗೆ ತೆರಳಿ ಕೆಲಸಕ್ಕೆ ಹಾಜರಾದರು.

ಶ್ರೀ ಶಿವಲಿಂಗವ್ವರಿಗೆ ೧೫-೧-೧೯೧೭ರಂದು ಪತ್ರ ಬರೆದು ಮಗ ಸಾವಿನ ವಿಷಯವನ್ನು ತಿಳಿಸಿದರು. ಸಮರ್ಥರ ಇಚ್ಛೆಯಿಂದಲೇ ಜೀವನದಲ್ಲಿ ಸುಖ ದುಃಖಗಳು ಬಂದೆರಗುತ್ತವೆ ಎನ್ನುವುದು ಅವರ ದೃಢನಂಬಿಕೆಯಾಗಿತ್ತು. ಅನಂತರ ೨೮-೬-೧೯೧೭ರಂದು ಕಾಕಾ ಕಾರಖಾನಿಸರಿಗೂ ಪತ್ರ ಬರೆದರು. ಕ್ರಮಕ್ರಮವಾಗಿ ಅಂತರಂಗದಲ್ಲಿ ಬೆಳೆಯುತ್ತಿರುವ ದೇವರ ಭಾವನೆ, ಸದ್ಗುರುನಿಷ್ಠೆ ಮತ್ತು ನಾಮಭಕ್ತಿಗೆ ಆ ಪತ್ರ ಸಾಕ್ಷಿಯಾಗಿತ್ತು.

ಪುತ್ರ ವಿಯೋಗದ ನಂತರ ಸದ್ಗುರು ನೀಡಿದ ನಾಮವನ್ನು ಬಾಯಲ್ಲಿ ಮನದೊಳಗೆ ಇರಿಸಿ ಕಾಲವನ್ನು ಸಾರ್ಥಕಗೊಳಿಸಿದರು. ಆಗಾಗ ಬಂದೆರಗಿದ ದುಃಖ ಸಂಕಟದಿಂದ ಅಂತರಂಗದಲ್ಲೆದ್ದ ಕೋಲಾಹಲವನ್ನು 'ನಾಮ' ಚಿಂತನೆಯಿಂದ, ತತ್ವಜ್ಞಾನದ ಅಧ್ಯಯನ ದಿಂದ ಶಾಂತಗೊಳಿಸುತ್ತಿದ್ದರು. ಗ್ರೀಕ್ ತತ್ವಜ್ಞಾನದ ಬಗ್ಗೆ ಅಧ್ಯಯನವನ್ನು ಮಾಡಿ ಏಳು ನಿಬಂಧಗಳನ್ನು ಬರೆದರು. ಲೇಖನಗಳು ವ್ಯಾಪಕ ಮೂಲಗ್ರಾಹಿ ಚಿಕಿತ್ಸಕವಾಗಿ ದ್ದರಿಂದ ಪ್ರಿ. ಬೆನ್, ಶ್ರೀ ಅರವಿಂದರ ಮೆಚ್ಚುಗೆಗೆ ಪಾತ್ರವಾದವು.

೧೯೧೭ರಲ್ಲಿ ರಾನಡೆಯವರು 'ಉಪನಿಷತ್ತಿನಲ್ಲಿಯ ಮಾನಶ್ಶಾಸ್ತ್ರ' ಎಂಬ ನಿಬಂಧ ವನ್ನು ಬರೆದರು. ಇದೇ ಸುಮಾರಿಗೆ ಪ್ರೊ. ಎ.ಜಿ. ವಿಜರಿ ಎಂಬ ಪಾಶ್ಚಾತ್ಯ ಪ್ರಾಧ್ಯಾಪಕನ ಸಹಕಾರದಿಂದ 'ಭಾರತೀಯ ತತ್ವಜ್ಞಾನದ ಸಮಾಲೋಚನೆ' ಎಂಬ ತ್ರೈಮಾಸಿಕವನ್ನು ಆರಂಭಿಸಿದರು. ೩೦ರ ವಯಸ್ಸಿನಲ್ಲೇ ಸಂಪಾದಕತ್ವದ ಜವಾಬ್ದಾರಿಯನ್ನು ಹೊತ್ತಿರುವುದು

ಬುದ್ಧಿಯ ಪ್ರಖರತೆ, ಕರ್ತೃತ್ವದ ವಿಶಾಲತೆ ಎಷ್ಟು ಉನ್ನತದರ್ಜೆಯದು ಎಂಬುದನ್ನು ಎತ್ತಿ ತೋರಿಸುತ್ತದೆ. 'ಟೈಮ್ಸ್ ಆಫ್ ಇಂಡಿಯಾ'ದಂತಹ ಪತ್ರಿಕೆ ಸಹ ಅವರ ತ್ರೈಮಾಸಿಕ ಪತ್ರಿಕೆಯನ್ನು ಹೊಗಳಿದೆ. ಭಾರತ ಪಾರತಂತ್ರದಲ್ಲಿದ್ದರೂ ತತ್ವಜ್ಞಾನದ ಕ್ಷೇತ್ರದಲ್ಲಿ ಅದಕ್ಕೆ ಗೌರವದ ಸ್ಥಾನವನ್ನು ದೊರಕಿಸಿ ಕೊಡಲು, ರಾನಡೆಯವರ ದೇದೀಪ್ಯಮಾನ ಹಾಗೂ ಮೂಲಗ್ರಾಹಿ ಬರವಣಿಗೆ ತುಂಬ ಉಪಯೋಗಕ್ಕೆ ಬಂತು ಎಂದು ಹೇಳಿದರೆ ಅತಿ ಶಯೋಕ್ತಿಯಾಗಲಾರದು. ಅವರು ಭಾರತೀಯ ತತ್ವಜ್ಞಾನದ ಸಂಪ್ರದಾಯದ ಮತ್ತು ಉಪಲಬ್ಧವಿರುವ ಉಪನಿಷತ್‌ನ್ನು ದೀರ್ಘಕಾಲದ ವರೆಗೆ ಅಧ್ಯಯನವನ್ನು ಕೈಕೊಂಡು ಅದರಲ್ಲಿಯ ವಿಚಾರ ಮತ್ತು ತತ್ವವನ್ನು ಸ್ವಂತ ಅನುಭವ ಹಾಗೂ ಮೂಲಗ್ರಾಹಿಯೊಂದಿಗೆ ಹೋಲಿಸಿ, ಒಂದು ವಿಧಾಯಕವಾದ ಸಮಾಲೋಚನೆಯನ್ನು ಕೈಕೊಂಡರು. ಈ ನಿಬಂಧವು ಔಪನಿಷಧಿಕ ತತ್ವಜ್ಞಾನದ ಮೊದಲ ಫಲ. ಇದನ್ನವರು 'ಇಂಡಿಯನ್ ಫಿಲಾಸಫಿಕಲ್ ರಿವ್ಯೂ'ನಲ್ಲಿ ಪ್ರಕಟಿಸಿದರು. ಹಳೆಯ ತಲೆಮಾರಿನ ಭಾರತೀಯ ಖ್ಯಾತಿಯ ವಿದ್ವಾಂಸರಾದ ಡಾ. ಆರ್.ಜಿ. ಭಾಂಡಾರಕರ ಅವರು ರಾನಡೆಯವರ ಲೇಖನವನ್ನು ಓದಿ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದು ಹೀಗೆ–

'ಉಪನಿಷತ್ತಿನಲ್ಲಿಯ ಮಾನಶ್ಶಾಸ್ತ್ರ' ಎಂಬ ನಿಬಂಧದಲ್ಲಿ ನಿಮ್ಮ ಟೀಕಾತ್ಮಕ ಸಂಶೋಧನೆಯ ಅನುಪಮ ಕೌಶಲ್ಯ ಹಾಗೂ ಕ್ಲಿಷ್ಟ ವಿಚಾರವನ್ನು ಸುಸಂಬದ್ಧವಾಗಿ ಮಂಡಿಸುವ ಶೈಲಿಯನ್ನು ಕಂಡು ನಾನು ಬೆರಗಾದೆ. ಇಂಥ ಆಳವಾದ ಬರವಣಿಗೆಯನ್ನು ನೀವು ಮುಂದುವರೆಸುವಿರಾಗಿ ನಂಬಿದ್ದೇನೆ'.

ಹಿರಿಯ ವಿದ್ವಾಂಸರೊಬ್ಬರು ರಾನಡೆಯವರನ್ನು ಈ ಬಗೆಯಿಂದ ಹೊಗಳಿದ್ದು ಕಂಡಾಗ ಅವರ ಅಗಾಧ ಪ್ರತಿಭೆಗೆ ಯಾರೂ ಮಣಿಯದೇ ಇರಲಾರರು. ಈ ಮೊದಲು ಅವರು ಪುನರ್ಜನ್ಮದ ಕಲ್ಪನೆಯು ವಿದೇಶಿ ಸಂಸ್ಕೃತಿಯಿಂದ ಬಂದದ್ದು ಎಂದವರು ಹೇಳಿಕೆ ನೀಡಿದ್ದರು. ಆದರೆ ರಾನಡೆಯವರು ವೇದ ಉಪನಿಷತ್ತಿನಲ್ಲಿರುವ ಪುರಾವೆಯನ್ನು ಎತ್ತಿ ತೋರಿಸಿ, ಪುನರ್ಜನ್ಮವು ಭಾರತೀಯರ ಕಲ್ಪನೆ ಎಂದು ತೋರಿಸಿದ್ದರು. ಹೀಗಾಗಿ ಅವರು ಗುರುದೇವ ರಾನಡೆಯವರನ್ನು ತುಂಬ ಪ್ರೀತಿಯಿಂದ ಕಾಣುತ್ತಾರೆ.

ಬಾಲ್ಯದಿಂದಲೇ ಧ್ಯೇಯವಾದಿ ಹಾಗೂ ಕಲ್ಪಕ ಬುದ್ಧಿಯವರಾದ ರಾನಡೆಯವರು ಮೇ ೧೯೧೫ರ ಸುಮಾರಿಗೆ ಡಾ. ಕುರ್ತಕೋಟಿ, ಡಾ. ಬೆಲವಲ್ಕರ್, ಡಾ. ಗುಣೆಯವ ರೊಂದಿಗೆ ವಿಚಾರ ವಿನಿಮಯುವನ್ನು ಮಾಡಿ 'ಭಾಂಡಾರಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್'ವನ್ನು ಸ್ಥಾಪಿಸುವ ಮೊದಲ ಸಂಕಲ್ಪವನ್ನು ಮಾಡಿದರು. ಮುಂದೆ ಅವರ ಕನಸು ನನಸೂ ಆಯಿತು. ೮ ಸೆಪ್ಟಂಬರ ೧೯೧೮ರಂದು ಸ್ಥಾಪನೆಗೊಂಡ ಮೊದಲ ನಿಯಾಮಕ ಮಂಡಳಿಯ ಮತ್ತು ಕಾರ್ಯಕಾರಿ ಸಮತಿಯ ಸದಸ್ಯರೆಂದು ಆಯ್ಕೆಯಾದರು. ಹೀಗಾಗಿ ಅವರ ಭಾವೀ ಮಹಾಕಾರ್ಯದ ಬೀಜ ತಾರುಣ್ಯದಲ್ಲೇ ಬಿತ್ತಲಾಗಿತ್ತು. 'ಹಿರಾಕ್ಲಿಟಸ್' ಹಾಗೂ

'ಉಪನಿಷತ್ತಿನಲ್ಲಿಯ ಮಾನಶ್ಶಾಸ್ತ್ರ' ಎಂಬ ಶ್ರೇಷ್ಠ ಮಟ್ಟದ ಮೌಲಿಕ ಬರವಣಿಗೆಯನ್ನು ಅವರು ಪ್ರಾಧ್ಯಾಪಕ ಜೀವನದ ಆರಂಭದಲ್ಲೇ ಶುರು ಮಾಡಿದರು. ಅವರ ಸಂಪೂರ್ಣ ೭೧ ವರ್ಷ ಆಯುಷ್ಯದಲ್ಲಿ ಒಂದು ಕ್ಷಣವನ್ನೂ ವ್ಯರ್ಥ ಮಾಡಲಿಲ್ಲ. ಈ ವಸ್ತುಸ್ಥಿತಿಯನ್ನು ಗಮನಿಸಿ ಅವರು ಪ್ರಕಟಿತ ಮತ್ತು ಅಪ್ರಕಟಿತ ಮೌಲಿಕ ಬರವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವರ ಪಾರಮಾರ್ಥಿಕ ಜೀವನದ ಬಗೆಗೆ ಅವರ ಸಂಪ್ರದಾಯದ ಯಾರಾದರೂ ಅಧಿಕಾರಯುತ ವ್ಯಕ್ತಿಯು ಬರೆದರೆ ಗುರುದೇವ ರಾನಡೆಯವರ ಅತೀದೊಡ್ಡ ಸೇವೆಯನ್ನು ಕೈಕೊಂಡಂತಾಗುವುದು. ಅಗಾಧ ವಿದ್ವತ್ತು, ಅವಿಶ್ರಾಂತ ಅಧ್ಯಯನಶೀಲತೆ ಮತ್ತು ಅಖಂಡ ನಾಮಸ್ಮರಣೆ ಇಂಥ ಸದ್ಗುಣಗಳ ತ್ರಿವೇಣಿ ಸಂಗಮದಿಂದಾಗಿ ಗುರುದೇವರ ಸ್ಫೂರ್ತಿದಾಯಕ ವ್ಯಕ್ತಿತ್ವವು ಒಂದು ಪಾವನ ಪ್ರಯಾಗಕ್ಷೇತ್ರವೇ ಆಗಿತ್ತು. ಇಷ್ಟಾದರೂ ಅವರ ಉಜ್ವಲ ಜೀವನದಲ್ಲಿ ಆಗಾಗ ಕಟು ಅನುಭವವೂ ಬರುತ್ತಿತ್ತು. ೧೯೦೯ರಲ್ಲಿ ಅವರ ಮೇಲೆರಗಿದ ಮಿದುಳಿನ ಅನಾರೋಗ್ಯ, ಬಳಿಕ ಅಸಹನೀಯವಾದ ಸದ್ಗುರುವಿನ ವಿಯೋಗ ಮತ್ತು ಅವರ ಏಕೈಕ ಮಗನ ಸಾವು– 'ಜನ್ಮ ದುಃಖದ ಅಂಕುರ, ಶೋಕದ ಸಾಗರ, ಭಯದ ಪರ್ವತ' ಎಂಬ ಸಮರ್ಥರ ಮಾತಿಗೆ ಸಾಕ್ಷಿಯಾಗಿದೆ. ಆದಾಗ್ಯೂ ಅವರ ದೇವರ ಬಗೆಗಿನ ನಿಷ್ಠೆ, ಶ್ರೀ ಸದ್ಗುರು ಭಕ್ತಿ–ಕೀರ್ತಿಯನ್ನು ಬೆಳೆಸುವ ತಳಮಳವು ಹೆಚ್ಚುತ್ತಲೇ ಸಾಗಿತ್ತು.

ಪ್ರಪಂಚದಲ್ಲಿ ಸಿಲುಕಿ ದುಃಖವನ್ನು ಭೋಗಿಸುವ ಜೀವಗಳಿಗೆ ಆತ್ಮಜ್ಞಾನದ ಮಾರ್ಗ ಹೇಗೆ ಲಭಿಸಬಹುದು ಎಂದು ಯೋಚಿಸುವ ತತ್ವಜ್ಞಾನಿ ಪ್ರಾಧ್ಯಾಪಕರು ಎಷ್ಟು ಜನರಿದ್ದಾರೆ?

ಎರಡು ವರ್ಷಗಳ ಹಿಂದಷ್ಟೇ ಏಕೈಕ ಮಗನನ್ನು ಕಳಕೊಂಡು ವಿಯೋಗದಿಂದ ಗುರುದೇವರ ಅಂತರಂಗವು ಪರಮಾರ್ಥ ಸಾಧನೆ ಮತ್ತು ದೈವೀ ಅನುಭವದಿಂದ ನೆಮ್ಮದಿಯನ್ನು ಪಡೆಯುತ್ತಿರುವಾಗಲೇ, ಆಗಸದ ಮೂರನೇ ಕೊಡಲಿ ಪ್ರಹಾರವು ಅವರ ಧರ್ಮಪತ್ನಿಯ ಮೇಲೆ ಬಂದೆರಗಿತು. ೧೯೧೮ರಲ್ಲಿ ಹರಡಿದ ಇನ್‌ಫ್ಲ್ಯುಯೆಂಜಾ ರೋಗದಿಂದಾಗಿ ೨೯ ಸಪ್ಟಂಬರ ೧೯೧೮ರಂದು ಅವರ ಪತ್ನಿ ದೈವಾಧೀನರಾದರು. ಇಂಚಗೇರಿಯಲ್ಲಿದ್ದ ಶ್ರೀ ಬಾಬಾರಿಗೆ ಇದರ ಪೂರ್ವ ಕಲ್ಪನೆ ಬಂದಿರಬೇಕು. ಅವರು ಹರಿದಾಸನ ಕೈಯಲ್ಲಿ ಪತ್ರವನ್ನು ಬರೆದು ಕಳಿಸಿದರು. ಹರಿದಾಸ ಪುಣೆಗೆ ಹೋದ ಕೆಲ ದಿನಗಳಲ್ಲೇ ರಾನಡೆಯವರ ಪತ್ನಿಯ ದೇಹಾಂತವಾಗಿದ್ದರಿಂದ ಮುಂದಿನ ಸಂಸ್ಕಾರವನ್ನೆಲ್ಲ ಹರಿದಾಸನೇ ಮಾಡಿ ಮುಗಿಸಿದ. ರಾನಡೆಯವರಂತೂ ದುಃಖದಿಂದ ಜರ್ಜಿತರಾದರು. ಅವರ ಪ್ರಾಪಂಚಿಕ ರಥದ ಒಂದೊಂದೇ ಚಕ್ರ ಕಳಚಿ ಹೋಗಿದ್ದರಿಂದ ಹತಬಲರಾಗುವ ಸ್ಥಿತಿ ಅವರಿಗೆ ಬಂದಿತ್ತು. ಆದರೆ ಸದ್ಗುರು ಕೃಪೆ ಹಾಗೂ ಉತ್ಕಟ ಸಾಧನೆಯಿಂದ ಸ್ಥಿತಪ್ರಜ್ಞತೆಯನ್ನು ಸಾಧಿಸಿದರು. ಅವರು ೧೩ ಅಕ್ಟೋಬರ್ ೧೯೧೮ರಂದು ಶ್ರೀ ಅಂಬುರಾವ ಮಹಾರಾಜರಿಗೊಂದು ಪತ್ರ ಬರೆದು, ತಮ್ಮ ಪತ್ನಿಗೆ ಸದ್ಗತಿಗೆ ಲಭಿಸಿತು ಎಂಬ ವಿಷಯವನ್ನು ತಿಳಿಸಿದರು. ಇದು ಅವರ ಧೀರಗಂಭೀರ ಮನೋವೃತ್ತಿಗೆ ಸಾಕ್ಷಿ.

೧೯೧೫-೧೯೧೬ರ ಕಾಲಾವಧಿಯಲ್ಲಿ ಶ್ರೀಮಂತ ಪ್ರತಾಪಶೇಠರ ಬೆಂಬಲದಿಂದ ರಾನಡೆಯವರು ಅಮಳನೇರದಲ್ಲಿ 'ತತ್ವಜ್ಞಾನ ಮಂದಿರ' ಎಂಬ ಸಂಸ್ಥೆಯನ್ನು ಆರಂಭಿಸಿದರು. ಪತ್ನಿಯ ಸಾವಿನ ಬಳಿಕ ಅವರು ಅಲ್ಲೊಂದು ವಾರ ತಂಗಿದರು. ಪ್ರಾಪಂಚಿಕ ದುಃಖದಿಂದ ವಿರಾಮ ಪಡೆಯಲು ಅವರು ಪರಮಾರ್ಥ ಸಾಧನೆ ಹಾಗೂ ತತ್ವಜ್ಞಾನದ ಪರಿಶೀಲನೆಯನ್ನು ಕೈಕೊಳ್ಳುತ್ತಿದ್ದರು. ಈ ಸಂಸ್ಥೆ ಇವತ್ತಿಗೂ ಕಾರ್ಯವನ್ನು ನಿರ್ವಹಿಸುತ್ತಲಿದೆ. ಹಲವು ವಿದ್ಯಾರ್ಥಿಗಳು ತತ್ವಜ್ಞಾನವನ್ನು ಓದಿ ಪ್ರಬುದ್ಧರಾಗುತ್ತಿದ್ದಾರೆ. ಪತ್ನಿಯ ಸಾವಿಗಿಂತ ಮೊದಲೇ ಅವರ ಮಾತೋಶ್ರೀಯವರು ಅನಾರೋಗ್ಯದಿಂದ ಮಲಗಿದ್ದರು. ತಾಯಿ ಮತ್ತಷ್ಟು ವರ್ಷ ಬದುಕಿ ಪರಮಾರ್ಥ ಸಾಧನೆಯನ್ನು ಕೈಕೊಂಡು ಆತ್ಮಜ್ಞಾನ ಪಡೆಯಬೇಕೆಂಬ ಅಭಿಲಾಷೆ ಅವರದ್ದಾಗಿತ್ತು. ಇದನ್ನವರು ಶ್ರೀ ಬಾಬಾರಿಗೆ ಬರೆದ ಪತ್ರದಲ್ಲೂ ನಮೂದಿಸಿದ್ದಾರೆ. ಆದರೆ ಶಕೆ ೧೮೪೦ ಅಶ್ವೀನ ಶುದ್ಧ ೧೫, ಶನಿವಾರ ಮುಂಜಾನೆ ಆರರ ಸುಮಾರಿಗೆ ಗುರುಮಾತೆ ಪಾರ್ವತಿಬಾಯಿಯ ನಿಧನ ವಾಯಿತು. ಆ ಸಮಯದಲ್ಲಿ ಗುರುದೇವರು ದಾಸಬೋಧೆಯನ್ನು ಓದುತ್ತಿದ್ದರು. ಮಾತೆಯ ಮೃತದೇಹಕ್ಕೆ ಅಗ್ನಿಸಂಸ್ಕಾರ ಮಾಡಿದ ಬಳಿಕ ಚಿತೆಯ ಜ್ವಾಲೆಯ ಜೊತೆಗೆ ಗುರುದೇವ ರಾನಡೆಯವರ ವಿರಹಾನಲದ ಜ್ವಾಲೆಯೂ ಭುಗಿಲೆದ್ದಿತು. ಭಕ್ತಿಭಾವದ ಉದ್ದೀಪನದಿಂದ ಅವರ ಕಣ್ಣೆದುರಿನ ಪಾರಮಾರ್ಥಿಕ ಅನುಭವದ 'ವಸ್ತು' ಚಿತೆಯ ಉರಿಯುತ್ತಿರುವ ಜ್ವಾಲೆಯ ಮೇಲೆ ಪ್ರಖರವಾಗಿ ಹೊಳೆಯಲಾರಂಭಿಸಿತು. ಈ ಘಟನೆಯನ್ನು ರಾನಡೆಯವರು ಅತ್ಯಂತ ಭಾವುಕರಾಗಿ ಹೇಳಿಕೊಂಡಿದ್ದಾರೆ. ನಿಸ್ಸಂದೇಹವಾಗಿ ತಮ್ಮ ಮಾತೋಶ್ರೀ ಸದ್ಗತಿ ಹೊಂದಿದರು ಎಂಬ ಭಾವನೆಯು ಅವರದ್ದಾಗಿತ್ತು.

ದುರ್ದೈವದ ಅಲೌಕಿಕ ಚಕ್ರದಲ್ಲಿ ಸಿಲುಕಿದ ಗುರುದೇವ ರಾನಡೆಯವರ ಮೇಲೆ ಎರಗಿದ ಮಾತೃವಿಯೋಗದ ಮೂರನೇ ಆಘಾತದಿಂದಾಗಿ ಅವರು ತೀರಾ ಹೈರಾಣಾದರು. ಆ ಘಟನೆಯನ್ನು ಬರೇ ನೆನಪು ಮಾಡಿಕೊಂಡರೂ ಸಾಕು, ಮನಸ್ಸು ವ್ಯಾಕುಲಗೊಳ್ಳುತ್ತದೆ. ಮೃತ್ಯುವಿನ ತಾಂಡವನೃತ್ಯದ ಎದುರಿಗೆ ಎಲ್ಲರೂ ತಲೆ ಬಾಗಲೇ ಬೇಕಾಗುತ್ತದೆ. ಹೀಗೆ ೧೯ ಅಕ್ಟೋಬರ ೧೯೧೮ರಂದು ಗುರುಮಾತೆಯವರು ದೇವರಲ್ಲಿ ಸಮರಸಗೊಂಡರು. ರಾನಡೆಯವರು ಪುತ್ರ, ಪತ್ನಿ, ಮಾತೆಯ ಸಾವನ್ನು ಹಾಲಾಹಲ ದಂತೆ ಶಾಂತವಾಗಿ ಸೇವಿಸಿದರು. ಇದೆಲ್ಲ ಕೇವಲ ೩೩ನೇ ವಯಸ್ಸಿನೊಳಗೇ ಬಂದೆರಗಿದ ಆಘಾತ. ಈಗ ನಾಮಸಾಧನೆಯೇ ಅವರ ಒಂಟಿಜೀವನದ ಸಾರ ಸರ್ವಸ್ವವಾಯಿತು. ಪ್ರತಿದಿನ ಏಳುಗಂಟೆಯಾದರೂ ಅವರು ಈ ಸಾಧನೆಯಲ್ಲಿ ಮುಳುಗಿರುತ್ತಿದ್ದರು. ಆಗಾಗ ಶ್ರೀ ಬಾಬಾರೊಂದಿಗೆ, ಶ್ರೀ ಶಿವಲಿಂಗವ್ವರೊಂದಿಗೆ ಪತ್ರ ವ್ಯವಹಾರ ಮಾಡಿ ವಿಚಾರ ವಿನಿಮಯ ಮಾಡುತ್ತಿದ್ದರು.

ಈಗ ಅವರು ಅಕ್ಕನ ಜೊತೆಗೆ ಇರಲಾರಂಭಿಸಿದರು. ಆಗಾಗ ಕಾರ್ಲೈಲ್ ಕಾಟೇಜಿಗೂ ಹೋಗಿ ಏಕಾಂತದಲ್ಲಿ ಕಳೆಯುತ್ತಿದ್ದರು. ಹೀಗೆ ತಾಪತ್ರಯದಲ್ಲಿ ಬೆಂದ ರಾನಡೆಯವರು ಹೆಚ್ಚೆಚ್ಚು ಏಕಾಂತಪ್ರಿಯರಾದರು.

೧೯೧೯ರಲ್ಲಿ ಭಾಂಡಾರಕರ ಸಂಸ್ಥೆಯ ಮಾರ್ಗದಲ್ಲೇ ಒಂದು ಜಾಗವನ್ನು ಖರೀದಿಸಿ, ಸ್ವಂತಕ್ಕಾಗಿ ಒಂದು ಮನೆಯನ್ನು ಕಟ್ಟಲಾರಂಭಿಸಿದರು. ಅದೇ ಕಾಲದಲ್ಲಿ ಕನಸಿನಲ್ಲಿ ಜ್ಞಾನದೇವನು ಕಾಣಿಸಿಕೊಂಡಿದ್ದರಿಂದ ಆಳಂದಕ್ಕೆ ಹೋಗಿ ಬಂದರು. ಮನೆ ನಿರ್ಮಾಣದ ಹಂತದಲ್ಲಿರುವಾಗಲೇ ಭಾರೀ ಮಳೆಯಿಂದಾಗಿ ಅದರ ಒಂದು ಭಾಗ ಕುಸಿಯಿತು. ಗುತ್ತಿಗೆದಾರನ ಮೇಲೆ ದಯೆ ತೋರಿ ೨–೩ ಸಾವಿರ ಹೆಚ್ಚು ಹಣವನ್ನು ನೀಡಿದರು. ಇಂಥ ಸಂಕಟಗಳ ಸರಮಾಲೆಯನ್ನು ಸಹಿಸುವುದು ಗುರುದೇವ ರಾನಡೆಯಂತಹ ಅವತಾರಿ ಮಹಾಪುರುಷರಿಗೇ ಸಾಧ್ಯ.

ಪುಣೆಯ ಹೊಸ ಮನೆಯಲ್ಲಿ ವಾಸ್ತವ್ಯ ಆರಂಭಿಸಿದ ಬಳಿಕ ಗುರುದೇವರಿಗೆ ಆಗಾಗ ಚಳಿಜ್ವರ ಕಾಡುತ್ತಿತ್ತು. ಶ್ರೀ ಬಾಬಾರವರು ಅವರ ಪರಿಸ್ಥಿತಿಯನ್ನು ಕಂಡು ಸೇವೆಗಾಗಿ ಡಿಶಂಬರ್ ೧೯೧೯ರಲ್ಲಿ ಜಮಖಂಡಿಯಿಂದ ಜಗನ್ನಾಥ ಲೇಲೆ ಅವರನ್ನು ಕಳಿಸಿದರು. ಇದೇ ಸುಮಾರಿಗೆ ಆಧ್ಯಾತ್ಮ ಭುವನದ ಗೋಡೆ ಕುಸಿದು ಬಿದ್ದಿರುವುದಾಗಿ ರ್‍ಯಾಂಗ್ಲರ್ ಪರಾಂಜಪೆಯವರು ತಿಳಿಸಿದರು. ಮುಂದೆ ೧೯೨೦ರಲ್ಲಿ ಅನಾರೋಗ್ಯ ದಿಂದಾಗಿ ಇಂಚಗೇರಿಗೆ ಹೋದಾಗ ಭಜನೆ ನಡೆದಾಗ 'ಈಗ ನಿಮ್ಮ ಮೇಲಿರುವ ಜ್ಞಾನೇಶ್ವರ ಕೋಪ ಅಳಿದಿದೆ' ಎಂದು ಶ್ರೀ ಬಾಬಾ ಹೇಳಿದರು. ಕನಸಿನಲ್ಲಿ ಜ್ಞಾನೇಶ್ವರ ಮುನಿದಿದ್ದಾನೆ ಎಂಬ ದೃಷ್ಟಾಂತವಾಗಿದ್ದರಿಂದ ರಾನಡೆಯವರು ಆಳಂದಿಗೆ ಹೋಗಿ ಬಂದಿರುವ ವಿಷಯ ಶ್ರೀ ಬಾಬಾರವರಿಗೂ ಗೊತ್ತಿತ್ತು.

ಪತ್ನಿ ಹಾಗೂ ಮಾತೆ ತೀರಿಕೊಂಡ ಬಳಿಕ ರಾನಡೆಯವರು ಶನಿವಾರ ಪೇಟೆ ಯಲ್ಲಿರುವ ಅಕ್ಕ ಭಾಗೂ ದಾಮಲೆಯವರ ಮನೆಯಲ್ಲೇ ವಾಸ ಮಾಡಿಕೊಂಡಿದ್ದರು. ಪ್ರತಿರಾತ್ರಿ ಊಟದ ಬಳಿಕ ತುಕಾರಾಮನ ಅಭಂಗವನ್ನು ಹಾಡಿಕೊಳ್ಳುತ್ತ ಸೈಕಲ್ಲೇರಿ ಅಧ್ಯಾತ್ಮ ಭವನಕ್ಕೆ ತೆರಳಿ ಅಲ್ಲೇ ಮಲಗುತ್ತಿದ್ದರು. ಆಧ್ಯಾತ್ಮ ಭವನದಲ್ಲಿದ್ದಾಗ ಒಂದು ದಿನ ಅಪರಾಹ್ನದ ಕಾಲಕ್ಕೆ ಬಂಗಲೆಯ ಸುತ್ತ ಸುತ್ತಾಡುವಾಗ ಒಬ್ಬ ಗುರುಬಂಧು ಅವರನ್ನು ಕೇಳಿದ, 'ಇಂದು ಈ ಸಮಯದಲ್ಲಿ ನೀವೇಕೆ ಸುತ್ತು ಹಾಕುತ್ತಿದ್ದೀರಿ?' ಅದಕ್ಕೆ ಅವರು 'ಇಂದು ತೇಜಸ್ವಿ ಹನುಮನ ದರ್ಶನವಾಗುತ್ತಿದೆ' ಎಂದರು. ಅದಕ್ಕವನು 'ಇಂದು ಹನುಮಾನ ಜಯಂತಿ ಅಲ್ಲವೇ' ಎಂದನು. ಹೀಗೆ ಅವರ ಪಾರಮಾರ್ಥಿಕ ಅನುಭವ ಪ್ರಗತಿಪಥದಲ್ಲಿ ಸಾಗಿತು.

■■

# ಮರಣವೇ ಮಹಾನವಮಿ!

ಬೆಳೆಯುತ್ತಿರುವ ಪಾರಮಾರ್ಥಿಕ ಅನುಭವದಿಂದ ಸಿಗುವ ಸಂತಸದ ಪ್ರಸಂಗ ಆಗಾಗ ಸಿಗುತ್ತಿರಲಿ ಎಂಬ ಕಾರಣಕ್ಕಾಗಿ ಗುರುದೇವ ರಾನಡೆಯವರು ನಾಮಸಾಧನೆ ಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡರು. ಅಧ್ಯಾಪನದ ನಿಮಿತ್ತದಿಂದ ನಡೆಯುತ್ತಿರುವ ತತ್ವಜ್ಞಾನದ ಹಾಗೂ ಸಂತಸಾಹಿತ್ಯದ ಕಾಲವನ್ನು ಸ್ವಗತಕಾಲ ಎಂದೆನ್ನಬಹುದು. ಅದರಿಂದ ಸಿಗುವ ಸಾತ್ವಿಕ ಆನಂದ ಮತ್ತು ಪಾರಮಾರ್ಥಿಕ ಅನುಭವದಿಂದ ಸಿಗುವ ದೈವೀ ಆನಂದ. ಈ ಎರಡರ ಸಹಾಯದಿಂದ ಅವರು ಉಚ್ಚಾಪ್ರಯಸ್ಥಿತಿಯನ್ನು ತಲುಪಿದರು.

ಅದೇ ರೀತಿ ೧೯೧೬ರಿಂದ ೧೯೧೮ರ ವರೆಗೆ ಗುರುದೇವರ ಜೀವನದಲ್ಲಿ ಮೃತ್ಯುದೇವತೆಯ ಅಕಾಂಡ ತಾಂಡವ ನಡೆದಿತ್ತು. ೧೯೧೯ರಲ್ಲಿ ಪುಣೆಯಲ್ಲಿ 'ಅಧ್ಯಾತ್ಮ ಭವನ'ವನ್ನು ಕಟ್ಟುತ್ತಿದ್ದರು. ಆಕಸ್ಮಿಕವಾಗಿ ಅದೂ ಕುಸಿದು ಬಿತ್ತು. ಇಂಥ ಸಂಕಟಗಳ ಸರಮಾಲೆಯಿಂದಾಗಿ ಕಲ್ಲು ಹೃದಯವನ್ನಾಗಿ ಮಾಡಿಕೊಂಡಿದ್ದ ರಾನಡೆಯವರ ಕಾಲಗತಿಯಿಂದಾಗಿ ಆರೋಗ್ಯ ಹದಗೆಟ್ಟಿತು. ಪ್ರತಿನಿತ್ಯ ಅವರು ಜ್ವರದಿಂದ ಬಳಲಾರಂಭಿಸಿದರು. ಫರ್ಗ್ಯೂಸನ್ ಕಾಲೇಜಿನಲ್ಲಿ ತತ್ವಜ್ಞಾನದ ಪ್ರಾಧ್ಯಾಪಕರೆಂದು ಕಾರ್ಯನಿರ್ವಹಿಸಬೇಕಾಗುತ್ತಿತ್ತು. ಕರ್ತವ್ಯ ನಿರತ ರಾನಡೆಯವರು ಮೊದಮೊದಲು ಆರೋಗ್ಯವನ್ನು ನಿರ್ಲಕ್ಷಿಸಿದರು. ಆದರೆ ಪುಣೆಯ ಚಳಿಜ್ವರ ಸಹಿಸುವುದು ಸಾಧ್ಯವಾಗದೆ ಹೋಗಿ ೧೯೧೯ರ ಕೊನೆಗೆ ಅವರ ಸ್ಥಿತಿ ಚಿಂತಾಜನಕವಾಯಿತು. ಅವರು ರಜೆ ಹಾಕಿ ಜಮಖಂಡಿಗೆ ಹೋದರು. ಅವರು ಎರಡು ಪತ್ರಗಳನ್ನು ಕಾಕಾ ಕಾರಖಾನಿಸರಿಗೂ, ಒಂದು ಪತ್ರ ಶ್ರೀ ಬಾಬಾರವರಿಗೂ ಬರೆದರು. ಅದು ಅವರ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಜೀವನವನ್ನು ಯಥಾವತ್ತಾಗಿ ಬಿಂಬಿಸುತ್ತದೆ.

೨೧-೧-೧೯೨೦ರ ಪತ್ರ.... ಈ ಹಿಂದೆ ಪತ್ರ ಬರೆದಾಗ ಪ್ರತಿದಿನ ಜ್ವರ ಬರುತ್ತಿತ್ತು. ಈ ಮೂರ್‍ನಾಲ್ಕು ದಿನಗಳಿಂದ ಜ್ವರ ಬಂದಿಲ್ಲ. ಜ್ವರ ಬರದಿದ್ದರೆ, ಇಲ್ಲೇ ಒಂದು ತಿಂಗಳು ನಿಲ್ಲಬೇಕೆಂದು ಕೊಂಡಿದ್ದೇನೆ. ಈ ಸಲ ಮಾಘ ಸಪ್ತಾಹ ಇಲ್ಲೇ ನೆರವೇರಲಿದೆ. ಇಂಚಗೇರಿಗೆ ಹೋಗುವುದು ಸಾಧ್ಯವಿಲ್ಲ. ಆರೋಗ್ಯ ಸುಧಾರಿಸಿದರೆ ಮುಂದೆ ಹೋಗಬಹುದು. ಚಿಂಚವಡ ತೊರೆದು ಪುಣೆಯ 'ಅಧ್ಯಾತ್ಮ ಭವನ'ದಲ್ಲಿ ವಾಸಿಸುವ ವಿಷಯದ ಬಗೆಗೆ ಪ್ರತ್ಯಕ್ಷ ಭೇಟಿಯಾದಾಗ ಮಾತಾಡೋಣ.

ಮಹಾರಾಷ್ಟ್ರದ ಆಂತರಿಕ ಸ್ಥಿತಿ ತೀರ ಹದಗೆಟ್ಟಿದೆ. ಉತ್ಸಾಹೀ ಕಾರ್ಯಕರ್ತರಿಗೆ ಯೋಗ್ಯವಾದ ಕಾರ್ಯಕ್ಷೇತ್ರ ಸಿಗದೇ ಇರುವುದು ಒಂದು ದುರ್ದೈವ. ದೇವರ ಮೇಲೆ ನಂಬಿಕೆಯಿರಿಸಿ ಕಾರ್ಯ ಮಾಡುವುದಷ್ಟೇ ನಮ್ಮ ಕೈಯಲ್ಲಿದೆ.

ಸಂಶೋಧನೆಯ ದೃಷ್ಟಿಯಿಂದ 'ಚಾಂಗದೇವ ಪಾಷಷ್ಟಿ' ಎಂಬ ಗ್ರಂಥವು ಜ್ಞಾನೇಶ್ವರದ್ದಲ್ಲ ಎಂದು ಶ್ರೀ ದೇವ ಹೇಳಿದರು. ಅದು ಯಾರದ್ದು ಎನ್ನುವುದಕ್ಕಿಂತ ಅಲ್ಲಿ ಯಾವ ಸಿದ್ಧಾಂತವಿದೆ ಎನ್ನುವುದೇ ಮಹತ್ವದ್ದು. ಸಿದ್ಧಾಂತದ ದೃಷ್ಟಿಯಿಂದ ಅದು ತೀರ ಸತ್ಯ. ಬಾಹ್ಯಕ್ಕಿಂತ ಆಂತರಿಕ ಸಂಶೋಧನೆ ನಡೆದರೆ ನೀವು ಹೇಳಿದಂತೆ ಮಹಾರಾಷ್ಟ್ರದ ದೈವ ತೆರೆಯಬಲ್ಲದು.

ಇಲ್ಲಿ ಬಂದ ಬಳಿಕ ನನ್ನ ಆರೋಗ್ಯ ಚೇತರಿಸಿಕೊಂಡಿದೆ. ಹಸಿವೂ ಆಗುತ್ತಿದೆ. ಆಗೀಗ ಚಳಿ ಎನಿಸಿ ಜ್ವರ ಬರುತ್ತದೆ. ೭-೮ ದಿನಗಳ ಬಳಿಕ, ನಿನ್ನೆ ಬೆವರು ಬಂತು. ಬೆವರು ಮಾತ್ರ ಸಾಕಷ್ಟು ಬರುತ್ತದೆ. ಈಗ ಗಂಟಲು ನೋವು ಶುರುವಾಗಿದೆ. ಕಿರುನಾಲಿಗೆ ಕತ್ತರಿಸಬೇಕಾಗುವುದು ಎಂದು ವೈದ್ಯರು ಹೇಳುತ್ತಾರೆ. ೧೦ ಮಾರ್ಚ ವರೆಗೆ ಇಲ್ಲಿರಬಹುದು. ಮುಂದೆ ಬಿ.ಎ. ಪರೀಕ್ಷೆಯ ಫಿಲಾಸಫಿಯ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲು ಮೊದಲು ಪುಣೆಗೆ, ಬಳಿಕ ಮುಂಬೈಗೆ ಹೋಗಬೇಕಾಗುತ್ತದೆ.

೨೪-೨-೧೯೨೦ ಶ್ರೀ ಅಂಬುರಾವ ಬಾಬಾರಿಗೆ ಬರೆದ ಪತ್ರದ ಪರಿಚ್ಛೇದ

'... ಸಮರ್ಥರ ಕೃಪೆಯಿಂದ ಈಗ ಆರೋಗ್ಯ ಸ್ವಲ್ಪ ಸುಧಾರಿಸಿದೆ. ಹೀಗೆಯೇ ಆರೋಗ್ಯ ಸುಧಾರಿಸಿ ತನುಮನಧನದಿಂದ ಸಮರ್ಥರ ಸೇವೆ ಮಾಡುವ ಶಕ್ತಿ ಬರಲಿ. ಭಕ್ತಿಮಾರ್ಗ ಹೀಗೇ ಬೆಳೆಯಲಿ ಎಂದು ಸಮರ್ಥರಲ್ಲಿ ಪ್ರಾರ್ಥನೆ. ಹಣ ಕಳಿಸುತ್ತಲಿದ್ದೇನೆ. ಪತ್ರಕ್ಕೆ ಉತ್ತರ ಬರೆಯಿರಿ.'

ಮುಂದೆ ಮಾರ್ಚ ತಿಂಗಳ ಕೊನೆಗೆ ರಾನಡೆಯವರು ಪುಣೆಗೆ ಹೋದರು. ಚೈತ್ರಶುದ್ಧ ೧೫ ಶಕೆ ೧೮೪೨ರಲ್ಲಿ 'ಅಧ್ಯಾತ್ಮ ಭವನ'ದ ವಾಸ್ತುಶಾಂತಿ ನೆರವೇರಿತು. ಆರೋಗ್ಯವಂತೂ ಹದಗೆಟ್ಟಿತು. ಇದೇ ಸುಮಾರಿಗೆ ಶ್ರೀ ಬಾಬಾ ಅವರನ್ನು ಇಂಚಗೇರಿಗೆ ಕರೆಸಿಕೊಂಡರು. ಆದರೆ ರಾನಡೆಯವರಿಗೆ ಹೋಗುವುದು ಸಾಧ್ಯವಾಗಲಿಲ್ಲ. ೩-೪-೧೯೨೦ರಂದು ಪತ್ರ ಬರೆದು ತಮ್ಮ ಅನಾರೋಗ್ಯದ ವಿಷಯವನ್ನು ತಿಳಿಸಿದರು. ಆ ಪತ್ರದಲ್ಲಿ ಅವರು ಇಂಚಗೇರಿಯ ಸನಿಹದಲ್ಲಿರುವ ೧೨೦೦/ ರೂಪಾಯಿಗೆ ಸಿಗುವ ಹೊಲವನ್ನು ಖರೀದಿ ಮಾಡುವಂತೆ ತಿಳಿಸಿದ್ದಾರೆ. ಈ ವರ್ಷ ಬರೆದ ಎರಡು ಮೂರು ಪತ್ರಗಳಲ್ಲೂ ಇದರ ಬಗೆಗೆ ಉಲ್ಲೇಖವಿತ್ತು. ಏಕೆಂದರೆ ಇಂಚಗೇರಿ ಮಠದಲ್ಲಿರುವ ಶ್ರೀ ಅಂಬುರಾವಬಾಬಾ ಅವರು ಕೇವಲ ಪರಮಾರ್ಥಕ್ಕಾಗಿ ಹಲವು ಬಗೆಯ ಅನಾನುಕೂಲ ತೊಂದರೆಗಳನ್ನು ಅನುಭವಿಸುತ್ತ ನಾಮಸ್ಮರಣೆಯನ್ನು ಮಾಡುತ್ತಿದ್ದರು. ಭಕ್ತಿಯ ಪ್ರಸಾರ ಹಾಗೂ ಶ್ರೀ ಮಹಾರಾಜರ ನಾಮನಿಷ್ಠೆ ಬೆಳೆಯಲಿ ಎಂಬ ಕಾರಣಕ್ಕಾಗಿ ಕಷ್ಟಕರ ಜೀವನವನ್ನು ಸಾಗಿಸುತ್ತಿರುವ ವಿಷಯ ರಾನಡೆಯವರಿಗೆ ಗೊತ್ತಿತ್ತು. ಹೀಗಾಗಿ ಪರಮಾರ್ಥಕ್ಕೆ ಆರ್ಥಿಕ ಅನುಕೂಲ ಒದಗಿಸಿಕೊಡಲು ಹೊಲ ಖರೀದಿಸುವಂತೆ ಒತ್ತಾಯ ಮಾಡಿದ್ದರು. ಇದರ ವಿರುದ್ಧ ರಾನಡೆಯವರ ಆರ್ಥಿಕ ಪರಿಸ್ಥಿತಿಯು ಅಷ್ಟೊಂದು ಸಮಾಧಾನಕಾರಕವಾಗಿಲ್ಲ ಎನ್ನುವುದು ಶ್ರೀ ಬಾಬಾರವರಿಗೆ ಗೊತ್ತಿರುವು ದರಿಂದ ಹೊಲ

ಖರೀದಿಗೆ ಒಪ್ಪಿಗೆ ಕೊಟ್ಟಿರಲಿಲ್ಲ. ಇಲ್ಲಿ ಉಭಯತರ ನಿಸ್ಪೃಹ, ನಿಸ್ವಾರ್ಥ ಪರಮಾರ್ಥ ಪ್ರೇಮವನ್ನು ಕಾಣಬಹುದಾಗಿದೆ. ಪರಮಾರ್ಥ ಬೆಳೆಯಬೇಕು, ಜನರಿಗೆ ಆತ್ಮಮಾರ್ಗದ ಮಾರ್ಗ ಲಭಿಸಿ ಅವರು ನಿಜವಾದ ಸುಖವನ್ನು ಪ್ರಾಪ್ತಿ ಮಾಡಿಕೊಳ್ಳ ಬೇಕೆನ್ನುವುದು ಗುರುದೇವ ರಾನಡೆಯವರ ಪ್ರಬಲ ಇಚ್ಛೆಯಾಗಿತ್ತು. ಉದಾರ ಮತ್ತು ಕರುಣಾಳು ಅಂತಃಕರಣವಿರುವುದರಿಂದ ಶ್ರೀ ಭಾವೂ ಸಾಹೇಬ ಮಹಾರಾಜರ ಬಳಿಕ ಸ್ವತಃ ರಾನಡೆಯವರೇ ೧೮ ವರ್ಷಗಳ ಕಾಲ ನಿಂಬಾಳ ಆಶ್ರಮದಲ್ಲಿ, ಸ್ವಂತ ಖರ್ಚಿನಿಂದ ಪರಮಾರ್ಥವನ್ನು ಮುನ್ನಡೆಸಿದರು. ಹಲವು ಬಡ ವಿದ್ಯಾರ್ಥಿಗಳಿಗೆ ಅನ್ನದಾನ ವಿದ್ಯಾದಾನವನ್ನು ಮಾಡಿದರು. ೧೯೨೦ರಲ್ಲಿಯೂ ಸಹ, ಇಂಥ ಹದಗೆಟ್ಟ ಪರಿಸ್ಥಿತಿ ಯಲ್ಲಿಯೂ ಸಹ ಅವರ ಪರಮಾರ್ಥದ ವಿಕಾಸದ ಬಗೆಗಿನ ಕಳಕಳಿ ಹಾಗೇ ಇತ್ತು. ಪುಣೆಯಲ್ಲಿ ನಿರ್ಮಿಸಿದ 'ಅಧ್ಯಾತ್ಮಭವನ'ದಲ್ಲಿ ದಾಸಬೋಧೆ, ಜ್ಞಾನೇಶ್ವರಿಯ ಸಪ್ತಾಹ, ಅನ್ನದಾನ ನಡೆದ ಬಗ್ಗೆಯೂ ಅವರು ಶ್ರೀ ಬಾಬಾಗೆ ಪತ್ರ ಬರೆದು ತಿಳಿಸಿದ್ದರು. ಆಗ ಅವರ ಆರೋಗ್ಯ ಹದಗೆಟ್ಟಿದ್ದರಿಂದ, ಸದ್ಗುರುವಿಗೆ ಶರಣು ಹೋಗದೆ ಗತಿಯಿಲ್ಲವೆಂದು ಕೊಂಡು ಅವರು ಇಂಚಗೇರಿಗೆ ಹೋಗಬೇಕೆಂದು ನಿರ್ಧರಿಸಿದರು. ೧೯ ಜುಲೈ ೧೯೨೦ರಂದು ತೀರ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಅವರು ಇಂಚಗೇರಿಗೆ ಹೋದರು. ತಾನು ಇನ್ನು ಬದುಕುವುದು ಸಾಧ್ಯವಿಲ್ಲೆಂಬ ಭಾವನೆಯು ರಾನಡೆಯವರಲ್ಲಿ ಕಾಣಿಸಿಕೊಂಡಿತು. ಶ್ರೀ ಬಾಬಾರವರು ರಾನಡೆಯವರನ್ನು ತಮ್ಮ ಜೊತೆಯಲ್ಲೇ ಇರಿಸಿಕೊಂಡರು. ಸುಮಾರು ಆರು ತಿಂಗಳ ಕಾಲ ರಾನಡೆಯವರು ಸಂಪೂರ್ಣ ಅನ್ನವನ್ನು ತ್ಯಜಿಸಿದ್ದರು. ಕೇವಲ ಹಾಲು ಮಾತ್ರ ಸೇವನೆ ಮಾಡುತ್ತಿದ್ದರು. ಇಂಚಗೇರಿಯಲ್ಲಿ ಅವರಿಗೊಂದು ಕನಸು ಬಿತ್ತು. ಕಣ್ಣೆದುರಿಗೆ ಕಾಣಿಸುವ ವಸ್ತುಗಳನ್ನು ಅವರು ದೇವರೆಂದು ಒಪ್ಪುವುದಿಲ್ಲವೆಂಬ ಕಾರಣದಿಂದಾಗಿ ಅವರು ಬೇಗ ಗುಣಮುಖರಾಗುತ್ತಿಲ್ಲ ಎಂದು ಕನಸಿನಲ್ಲಿ ಹೇಳಲಾಗಿತ್ತು. ಇದೇ ಮಾತನ್ನು ಬಹಳ ಹಿಂದೆ ಶ್ರೀ ಸದ್ಗುರು ಮಹಾರಾಜರು ಹೇಳಿದ್ದರು. 'ದೇವರು ಶ್ರೀಮಂತನಾಗಿದ್ದಾನೆ, ಸಮರ್ಥನಾಗಿದ್ದಾನೆ, ಸುಳ್ಳಾದರೆ ಪ್ರಾಣ ನೀಡುತ್ತೇನೆ' ಎಂದು ಹಿಂದೆ ಮಹಾರಾಜರು ಪತ್ರದ ಮೂಲಕ ತಿಳಿಸಿದ್ದರು. ದೇವರು ಶ್ರೀಮಂತನೆಂಬ ಅನುಭವವು ನಮಗೆ ಬಂದಲ್ಲಿ, ನಾವೂ ಶ್ರೀಮಂತರಾಗುತ್ತೇವೆ. ದೇವರು ಸಮರ್ಥನೆಂಬ ಅನುಭವ ನಮಗೆ ಬಂದಲ್ಲಿ, ನಾವೂ ಸಮರ್ಥರಾಗುತ್ತೇವೆ–ಎಂದು ಶ್ರೀ ಮಹಾರಾಜರು ಬೋಧಿಸಿದ್ದರು. ಕನಸಿನ ವಿಷಯವನ್ನು ಗುರುದೇವ ರಾನಡೆಯವರು ಶ್ರೀ ಬಾಬಾರವರಿಗೆ ಹೇಳಿದರು. ಆಗವರು 'ಏನು ಗೋಚರಿಸುವುದೋ ಅದೇ ದೇವರೆಂದು ಭಾವಿಸಬೇಕು' ಎಂದರು.

ರಾನಡೆಯವರು ಇಂಚಗೇರಿಗೆ ಬರುವ ಮುನ್ನ ತಾನಿನ್ನು ಬದುಕಿರಲಾರೆ ಎಂಬ ಭಾವನೆ ಮಾಡಿದ್ದರಿಂದ ಮೃತ್ಯುಪತ್ರವನ್ನು ಬರೆದಿಟ್ಟಿದ್ದರು. ಆ ಪತ್ರದ ಸಾಕ್ಷಿಗಾಗಿ ಶ್ರೀ ಬಾಬಾರವರಿಂದ ಹಸ್ತಾಕ್ಷರವನ್ನು (ರುಜು) ಬೇಡಿದರು. ಶ್ರೀ ಬಾಬಾ ನಿರಾಕರಿಸಿದರು. ಹಿಂದೊಮ್ಮೆ ಮಹಾರಾಜರು

೬೦ ವರ್ಷ ಆಯುಷ್ಯವಿದೆ ಎಂದು ಹೇಳಿದ್ದನ್ನು ರಾನಡೆಯವರು ದೃಢವಾಗಿ ನಂಬಿದ್ದರು. ಮಹಾರಾಜರ ಮಾತೆಂದರೆ ವಜ್ರಲೇಪ ಇದ್ದಂತೆ. ಹೀಗಾಗಿ ಶ್ರೀ ಬಾಬಾರವರು ರಾನಡೆಯವರಿಗೆ ಮೃತ್ಯುಪತ್ರವನ್ನು ಸಿದ್ಧಪಡಿಸಲು ಅವಕಾಶ ನೀಡಲಿಲ್ಲ.

ಇಂಚಗೇರಿಯ ವಾಸ್ತವ್ಯದಲ್ಲೊಮ್ಮೆ ಗುರುದೇವ ರಾನಡೆಯವರು ನೇಮಕ್ಕೆ ಕೂತಿದ್ದಾಗ 'ಆ ಹೂವು ತಗೋ' ಎಂಬ ವಾಕ್ಯ ಕೇಳಿಸಿತು. ನೇಮ ಮುಗಿಸಿ ಅವರು ಶ್ರೀ ನಿಂಬರಗಿ ಮಹಾರಾಜರ ಸಮಾಧಿಯ ಬಳಿಗೆ ಹೋದರು. ಅಲ್ಲಿ ಶಿವಲಿಂಗದ ಮೇಲೆ ಬಿಳಿ ಕಾಡು ಸಂಪಿಗೆಯ ಹೂವು ಕಾಣಿಸಿತು. 'ಪೂಜೆ ಮಾಡಿ ನೀವು ಹೂವು ದೇವರಿಗೆ ಏರಿಸಿದರೇನು?' ಎಂದವರು ಪೂಜಾರಿಗೆ ಕೇಳಿದರು. ಆಗ ಪುಂಡಪ್ಪ 'ಇನ್ನೂ ಪೂಜೆ ಆಗಲಿಲ್ಲ' ಎಂದ. ಆಗ ಈ ಹೂವು ಏರಿಸಿದವರು ಯಾರು ಎನ್ನುವ ರಹಸ್ಯ ಗೊತ್ತಾಗಲಿಲ್ಲ. ರಾನಡೆಯವರು ಆ ಹೂವನ್ನು ಶ್ರದ್ಧೆಯಿಂದ ತೆಗೆದುಕೊಂಡು ತಮ್ಮ ಬಳಿಯಿರಿಸಿಕೊಂಡರು. ಬಳಿಕ ಅದರ ಸೇವನೆಯಿಂದ ಅವರು ಚೇತರಿಸಿ ಕೊಂಡರು.

ಶ್ರೀ ಅಂಬುರಾವ ಅವರ ಸಾನಿಧ್ಯದಲ್ಲಿ, ತ್ರಿಕಾಲ ನಾಮಸ್ಮರಣೆಯಲ್ಲಿ ಗ್ರಂಥ ಪಾರಾಯಣ–ಭಜನೆಯಲ್ಲಿ ನಡೆಯುವ ಪಾರಮಾರ್ಥ ಶ್ರವಣದಲ್ಲಿ ರಾನಡೆಯವರು ಹಗಲು ರಾತ್ರಿ ಕಳೆಯಲಾರಂಭಿಸಿದರು. ಶ್ರೀ ಭಾವೂ ಸಾಹೇಬ ಮಹಾರಾಜರು ಬೋಧಿಸಿದ ತ್ರಿಸೂತ್ರವೇ ಅವರ ನಿತ್ಯಕ್ರಮವಾಯಿತು. ಅವರ ಅಂತರಂಗದಲ್ಲಿ ಸ್ವರೂಪ ಸಾಕ್ಷಾತ್ಕಾರದ ಚಡಪಡಿಕೆ ಉತ್ಕಟಗೊಂಡಿತು. ಅಂತಂಗದಲ್ಲಿ ವೈರಾಗ್ಯದ ಅಗ್ನಿ ಪ್ರಜ್ವಲಿತ ಗೊಂಡಿತು. ಉದರದೊಳಗೆ ಅಗ್ನಿ ಹೊತ್ತಿಕೊಂಡಂತಾಗಿ ಭಕ್ತಿ ಕೈಕೊಂಡರೆ ಅನುಭವ ಬರಲು ಸಮಯ ಹಿಡಿಯುವುದಿಲ್ಲ. ಹೀಗೆ ಜ್ವಲಂತ ತಳಮಳವು ಅವರ ಅಂತಃಕರಣದಲ್ಲಿ ನಿರ್ಮಾಣಗೊಂಡಿದ್ದರಿಂದ ಅವರಿಗೆ ಜ್ಞಾನಮಾರ್ಗವು ಮುಕ್ತವಾಯಿತು. ಅವರ ಬಂಧುಗಳ ವಿಯೋಗದಿಂದ ಮನದೊಳಗೆ ವೈರಾಗ್ಯ ಸಹಜವಾಗಿಯೇ ನೆಲೆಸಿತು. ತನ್ನ ಸುತ್ತಲಿನ ಪ್ರತಿಯೊಂದು ಸಂಗತಿಯು ನಿರುಪಯೋಗಿ, ವ್ಯರ್ಥವೆಂಬ ಭಾವನೆ ಉಂಟಾದರೆ ಅದೇ ವೈರಾಗ್ಯ. 'ನಾನು ಯಾರೂ ಅಲ್ಲ' ಎಂಬ ಭಾವನೆ ಸಹ ಅವರಲ್ಲಿ ಮೈಗೂಡಿತು. ಅದೇ ಅವರ ಸ್ವಭಾವ ಧರ್ಮವಾಗಲಾರಂಭಿಸಿತು. ಏಕನಾಥರ ಉಕ್ತಿಯಂತೆ, 'ಸ್ಮರಣೆಯೇ ನಿಜಮುಕ್ತಿ, ವಿಸ್ಮರಣೆಯೇ ಅಧೋಗತಿ' ಎಂದವರಿಗನಿಸ ಲಾರಂಭಿಸಿತು. ಆದುದರಿಂದ ಶ್ರೀ ಅಂಬುರಾವ ಮಹಾರಾಜರ ಸಾನಿಧ್ಯದಲ್ಲಿ, ಇಂಚಗೇರಿಯಲ್ಲಿ, ಗುರುದೇವ ರಾನಡೆಯವರು ಅಹೋರಾತ್ರಿ ನಾಮಸ್ಮರಣೆಯಲ್ಲಿ ಕಳೆದರು.

ಇದೇ ಸಮಯದಲ್ಲಿ ಅವರು ಉಪನಿಷತ್ತಿನ ಅಧ್ಯಯನ ಮತ್ತು ಮಹಾರಾಷ್ಟ್ರದ ಸಂತಸಾಹಿತ್ಯವನ್ನು ಪಾರಮಾರ್ಥಿಕ ದೃಷ್ಟಿಯಿಂದ ಪರಿಶೀಲಿಸಿದರು. ಇದರಿಂದಾಗಿ ಅವರ ಪಾರಮಾರ್ಥಿಕ ಜೀವನವು ಉತ್ತರೋತ್ತರವಾಗಿ ಬೆಳೆಯಲಾರಂಭಿಸಿತು. 'ನಯನದೊಳಗೆ ಬರೇ ನಯನವೇ ಉಳಿಯಿತು' ಎಂಬ ಜ್ಞಾನೇಶ್ವರ ಉಕ್ತಿಯಂತೆ ರಾನಡೆಯವರಿಗೆ ಎಲ್ಲೆಡೆ

ಕಣ್ಣಿನ ದರುಶನ ಆಯಿತು. ಅವರಿಗೆ ಬಂದ ಹಲವು ಅನುಭವ ಗಳಲ್ಲಿ ಇದು ಅತ್ಯಂತ ಮಹತ್ವದ ಅನುಭವವಾಗಿತ್ತು. ಈ ಬಗೆಯ ಅನುಭವವಾಗ ಲಾರಂಭಿಸಿದ್ದರಿಂದ ಗುರುದೇವ ರಾನಡೆಯವರು ಅಧಿಕ ಅಂತರ್ಮುಖಗೊಂಡರು. ಅವರ ಮನದೊಳಗೆ ಸಮಾಧಾನ, ಆನಂದ ನೆಲೆಸಿತು.

೧೯೨೦ರ ಕೊನೆಗೆ ರಾನಡೆಯವರು ಇಂಚಗೇರಿಯಲ್ಲಿದ್ದಾಗ ಅವರಿಗೆ ನಾಮದೊಳಗೆ ನಾಮ ಕೇಳಿಬರಲಾರಂಭಿಸಿತು. ಇದರ ಬಗೆಗೆ ಶ್ರೀ ಬಾಬಾರವರಿಗೆ ಕೇಳಿದಾಗ, ಅವರೆಂದರು– 'ಈ ನಾಮವು ಮಹಾರಾಜರು ನಿಮಗೆ ನೀಡಿದ ನಾದದಿಂದ ಉತ್ಪನ್ನವಾದುದು. ಆದ್ದರಿಂದ ಮಹಾರಾಜರು ನೀಡಿದ ಮೂಲ ಬೀಜನಾಮಕ್ಕೆ ಅಂಟಿ ಕೊಂಡಿರುವುದು ಯೋಗ್ಯ' ಎಂದರು. ಈ ರೀತಿ ರಾನಡೆಯವರಿಗೆ ಬಂದ ಶ್ರೇಷ್ಠ ದರ್ಜೆಯ ಅನುಭವವನ್ನು ಆಲಿಸಿದ ಬಳಿಕ ಶ್ರೀ ಬಾಬಾ ಅವರು ನಾಮವನ್ನು ನೀಡಲು ಹೇಳಿದರು. ಆಗ ರಾನಡೆಯವರು 'ಈ ಹಿಂದೆ ಶ್ರೀ ಭಾವೂ ಸಾಹೇಬ ಮಹಾರಾಜರು ನಾಮ ನೀಡಲು ಹೇಳಿದಾಗ ನೀವೇಕೆ ಹಾಗೆ ಮಾಡಲಿಲ್ಲ?' ಎಂದರು. ಈ ಮಾತಿಗೆ ಶ್ರೀ ಬಾಬಾ ಸುಮ್ಮನೆ ಇದ್ದರು. ಅನಂತರ ಗುರುದೇವ ರಾನಡೆಯವರು ಬಾಬಾರವರಿಗೆ ಹೇಳಿದ್ದೇನೆಂದರೆ– 'ಅವರು ಬದುಕಿರುವ ವರೆಗೆ ತಮಗೆ ನಾಮ ನೀಡುವ ಮನಸ್ಸಿಲ್ಲ. ನಾಮ ಕೊಡಲೇಬೇಕೆಂದು ಬಲವಂತ ಮಾಡಿದರೆ, ಯಾರಿಗೆ ಯಾವ ನಾಮ ನೀಡಬೇಕೆಂದು ಖಚಿತವಾಗಿ ಹೇಳಿದರೆ ನಿವೇದಕನ ಕೆಲಸವನ್ನು ತಾನು ಮಾಡಬಲ್ಲೆ'.

ಈ ರೀತಿ ಗುರುದೇವ ರಾನಡೆಯವರ ಪಾರಮಾರ್ಥಿಕ ಯೋಗ್ಯತೆಯು ಅಷ್ಟೊಂದು ಶ್ರೇಷ್ಠ ಮಟ್ಟಕ್ಕೆ ಹೋಗಿ ತಲುಪಿತ್ತು. ಅವರ ಕ್ಷೀಣ ಆರೋಗ್ಯದಿಂದಾಗಿ ಕಾಡುತ್ತಿರುವ ಚಿಂತೆಯು ಕ್ರಮೇಣ ಕಡಿಮೆಯಾಗಲಾರಂಭಿಸಿತು. ಈ ಕಾಲದಲ್ಲಿ ಅವರ ಚಿಗಪ್ಪನ ಮಗಳಾದ ಯಮುನಕ್ಕ ಅವರನ್ನು ಅತ್ಯಂತ ಶ್ರದ್ಧೆಯಿಂದ ಆರೈಕೆ ಮಾಡಿದ್ದಳು. ಈ ಸಂಗತಿಯನ್ನು ಅವರು ಕಾರಖಾನಾಸರಿಗೆ ಪತ್ರ ಬರೆದು ತಿಳಿಸಿದ್ದರು.

ಒಮ್ಮೆ ರಾನಡೆಯವರ ಕನಸಿನಲ್ಲಿ ಶ್ರೀ ಮಹಾರಾಜರು ಹಾಗೂ ಶ್ರೀ ಅಂಬುರಾವ ಅವರು ಮಾತಾಡುತ್ತಿರುವುದು ಕಾಣಿಸಿತು. ಶ್ರೀ ಮಹಾರಾಜರು ಬಾಬಾ ಅವರಿಗೆ ಹೇಳಿದರು– 'ನನಗೆ ಅವನ ಕಾಳಜಿ ಇಲ್ಲೇನು?' ಮರುದಿನ ಈ ವಿಷಯವನ್ನು ಶ್ರೀ ಬಾಬಾರವರಿಗೆ ಹೇಳಿದರು. ಆಗ ಬಾಬಾರವರು ಸನಿಹದಲ್ಲಿ ಇದ್ದ ಆಸಾಮಿಗೆ ಹೇಳಿದರು 'ಹೊಡಿ, ಇನ್ನ ಡಂಕಾ!' ಇದೇ ಸುಮಾರಿಗೆ ಮತ್ತೆರಡು ಸ್ವಪ್ನ ದೃಷ್ಟಾಂತವಾಯಿತು. ಆ ಕನಸಿನ ಸಂಕೇತದಂತೆ ಅವರ ಜೀವನದಲ್ಲಿ ಆ ಘಟನೆಗಳು ಜರುಗಿದವು. 'ಯಾವ ಕನಸಿನಲ್ಲಿ ಸದ್ಗುರು ಇಲ್ಲವೇ ಸಾಕ್ಷಾತ್ಕಾರಿ ವ್ಯಕ್ತಿಗಳು ಗೋಚರಿಸುತ್ತಾರೋ, ಅದು ಮಹತ್ವದ್ದು' ಎಂದರು ಗುರುದೇವರು. ಅದು ಹೀಗಿದೆ:

ಅವರು ಇಂಚಗೇರಿಯಲ್ಲಿದ್ದಾಗ, ಅವರಿಗೆ ಹಣದ ಅವಶ್ಯಕತೆಯಾಯಿತು. ಅದೇ ಸಮಯದಲ್ಲಿ ಶ್ರೀ ಮಹಾರಾಜರ ಮಗನಾದ ಕೃಷ್ಣಾಜಿ ಪಂತನೂ ವತನ ಭೂಮಿಯ ತಂಟೆಯಿಂದ

ಕೋರ್ಟಿಗೆ ಹೋಗಬೇಕಾಗಿ ಬಂದು ಸಾಕಷ್ಟು ತೊಂದರೆಯಾಯಿತು. ಇಂಥ ಪರಿಸ್ಥಿತಿಯಲ್ಲಿ ರಾನಡೆಯವರ ಕನಸಿನಲ್ಲಿ ಶ್ರೀ ಮಹಾರಾಜರು ಕಾಣಿಸಿಕೊಂಡು 'ನೀವು ಮುಂದಿನ ಊರಿಗೆ ನಡೆಯಿರಿ, ನಾನೂ ಬಂದೆ' ಎಂದು ಹೇಳಿದರು. ಕೃಷ್ಣಾಜಿ ಪಂತನೂ ತಮ್ಮೊಂದಿರುವುದು ರಾನಡೆಯವರಿಗೆ ಕನಸಿನಲ್ಲಿ ಕಾಣಿಸುತ್ತಿತ್ತು. ಮರುದಿನವೇ ರಾನಡೆಯವರು ಬೆಳಿಗ್ಗೆ ಎದ್ದು ಹೊರ್ತಿಯ ವರೆಗೆ ಹೋದರು. ಅಲ್ಲಿ ಅವರಿಗೆ ಯುನಿರ್ವಸಿಟಿಯಿಂದ ಬರಬೇಕಾಗಿದ್ದ ಹಣ ಇನ್ಸೂರೆನ್ಸ್ ಮೂಲಕ ಸಿಕ್ಕಿತು. ಹೀಗಾಗಿ ಕನಸಿನ ಅರ್ಧಭಾಗ ಸತ್ಯವಾಯಿತೆಂದು ಅವರಿಗನಿಸಿತು. ಅಂತರಂಗದಲ್ಲಿ ಕೃತಜ್ಞತೆ ತುಂಬಿ ಬಂದು, ಬಳಿಕ ಅವರು ಸಾಂಗಲಿಗೆ ಹೋದರು. ಅಲ್ಲಿಂದ ಮರಳಿ ಬರುವಾಗ ಶೇಡಬಾಳ ಸ್ಟೇಶನ್ನಿನಲ್ಲಿ, ಬೆಳಗಾವಿಯಿಂದ ಖಟ್ಲೆಯ ಕೆಲಸ ಮುಗಿಸಿ ಮರಳುತ್ತಿರುವ ಕೃಷ್ಣಾಜಿ ಪಂತರು ಭೇಟಿಯಾದರು. ಅವರ ಮುಖ ಚಿಂತೆಯಿಂದ ಕೂಡಿತ್ತು. 'ನೀವು ಕಾಳಜಿ ಮಾಡಬ್ಯಾಡ್ರಿ, ನಿಮ್ಮ ಕೆಲಸ ಖಾತ್ರಿಲೇ ಆಗತದ, ಮಹಾರಾಜರು ನಿಮ್ಮ ಬೆನ್ನಮ್ಯಾಲ್ ಇದಾರು' ಎಂದು ರಾನಡೆಯವರು ಹೇಳಿದರು. ಬಳಿಕ ಅವರಿಬ್ಬರೂ ಅಥಣಿಗೆ ಹೋದರು. ಅಲ್ಲಿಗೆ ಹೋಗುವಷ್ಟರಲ್ಲಿ ಕೃಷ್ಣಾಜಿ ಪಂತರ ಕೆಲಸ ಯಶಸ್ವಿಯಾಗಿದೆ ಎಂಬ ವಾರ್ತೆ ಬಂತು. ಇದರಿಂದ ಅವರ ಚಿಂತೆ ದೂರವಾಯಿತು. ಇದೆಲ್ಲ ಶ್ರೀ ಮಹಾರಾಜರ ಕೃಪೆಯಿಂದ ಆಯಿತೆಂದು ರಾನಡೆಯವರಿಗೆ ಸದ್ಗುರುವಿನ ಬಗೆಗೆ ಕೃತಜ್ಞತೆ ಮೂಡಿತು. ಅವರಿಬ್ಬರೂ ಶ್ರೀ ಮಹಾರಾಜರ ಅದೃಶ್ಯ ಮತ್ತು ಅತಾರ್ಕಿಕತೆಗೆ ಬೆರಗಾದರು.

ಮತ್ತೊಂದು ಕನಸಿನಲ್ಲಿ ಶ್ರೀ ಭಾವೂ ಸಾಹೇಬ ಮಹಾರಾಜರು ಬಂದು 'ಅಭಿಮಾನ ವೆಂದರೆ ಏನೆಂದು ಐದು ದಿವಸದೊಳಗೆ ತೋರಿಸುತ್ತೇನೆ' ಎಂದು ಹೇಳಿದಂತಾಯಿತು. ಈ ವಿಷಯವನ್ನು ರಾನಡೆಯವರು ಶ್ರೀ ಶಿವಲಿಂಗವ್ವರಿಗೆ ಹೇಳಿದರು. ಅವರಿಗೂ ಅಚ್ಚರಿಯೆನಿಸಿತು. ಐದು ದಿವಸಗಳ ಬಳಿಕ ಶಿವಲಿಂಗವ್ವ ಕಡಬನ್ನು ಸಿದ್ಧಪಡಿಸಿ, ದೇವರಿಗೆ ನೈವೇದ್ಯ ತೋರಿಸಿ, ಅದನ್ನು ತಿನ್ನಲೆಂದು ಶ್ರೀ ರಾಮಭಾವೂ ರಾನಡೆಯವರನ್ನು ಕರೆದರು. ರಾನಡೆಯವರು ಅದನ್ನು ತಿನ್ನಲು ನಿರಾಕರಿಸಿದರು. 'ನಾನು ತಯಾರಿಸಿದ ಕಡಬು ನೀವು ತಿನ್ನುವುದಿಲ್ಲವೆಂದರೆ ಏನಿದು? ಇದು ದೇವರ ಪ್ರಸಾದ' ಎಂದು ಶಿವಲಿಂಗವ್ವ ಅಭಿಮಾನದಿಂದ ಹೇಳಿದರು. 'ಅಕ್ಕಾ ನಾನು ಅನಾರೋಗ್ಯದಿಂದ ಬಳಲು ತ್ತಿರುವಾಗ ಇಂಥ ಪದಾರ್ಥವನ್ನು ಹೇಗೆ ತಿನ್ನಲಿ?' ಎಂದರು ರಾನಡೆ. ಇಬ್ಬರೂ ತಮ್ಮ ಹಠವನ್ನು ಬಿಡಲು ಸಿದ್ಧರಿರಲಿಲ್ಲ. ಪ್ರತಿಯೊಬ್ಬರ ಸುಪ್ತ ಅಭಿಮಾನ ಪ್ರಸಂಗ ಬಂದಾಗ ಹೇಗೆ ಹೊರಗೆ ಬರುತ್ತದೆ ಎಂಬ ಅನುಭವ ಅವರಿಗೆ ಬಂತು.

ಸೂಕ್ಷ್ಮ ಅಭಿಮಾನವನ್ನು ತೊರೆಯುವುದು ತೀರ ದುಸ್ತರ. ಎಲ್ಲಕ್ಕಿಂತ ಆಳವಾದ ಅಭಿಮಾನವೆಂದರೆ ಪಾರಮಾರ್ಥದ್ದು. ಇದನ್ನು ಹೋಗಲಾಡಿಸುವುದು ಕಠಿಣ. ರಾನಡೆಯವರ ಹೃದಯ ವೈಶಾಲ್ಯವನ್ನು ತೋರಿಸುವ ಮತ್ತೊಂದು ಘಟನೆ. ಇದು ಗಾಂಧೀಜಿಯವರು ವರ್ಧಾ ಆಶ್ರಮದಲ್ಲಿ ನಡೆದದ್ದು. ಭಾವೂ ಪಟವರ್ಧನರು ಗಾಂಧೀಜಿಯ ಆಶ್ರಮದಲ್ಲಿರುತ್ತಿದ್ದರು.

ಅವರೂ ಜಮಖಂಡಿಯವರೇ. ಗುರುದೇವರ ಪಾರಮಾರ್ಥಿಕ ಪ್ರಭಾವ ಅವರ ಮೇಲಾಗಿತ್ತು. ೧೯೨೧ರಲ್ಲಿ ಅವರು ಕೊನೆಗಳಿಗೆ ಯಲ್ಲಿದ್ದಾಗ ಅವರ ಬಳಿಯಲ್ಲಿ ಗಾಂಧೀಜಿ ಹಾಗೂ ಮಹಾದೇವಭಾಯಿ ಇದ್ದರು. ತಮಗೆ ಗುರುದೇವ ರಾನಡೆಯವರು ಕಾಣಿಸುತ್ತಿದ್ದಾರೆ, ಈ ವಿಷಯವನ್ನು ರಾನಡೆಯವರಿಗೆ ತಿಳಿಸಿ ಎಂದು ನುಡಿದರು. ಮಹಾದೇವ ಭಾಯಿಯವರು ರಾನಡೆಯವರಿಗೆ ಪತ್ರ ಬರೆದರು. ಅದರಲ್ಲಿಯ ಒಂದು ವಾಕ್ಯ ಹೀಗಿತ್ತು– 'There is Silver lining to the cloud' ಗುರುದೇವರನ್ನು ಕಂಡು ಪರಮಾರ್ಥವನ್ನು ಅರಿಯುವ ಇಚ್ಛೆಯ ಪಟವರ್ಧನರಿಗೆ ಇತ್ತು.

ಪುಣೆಯ ವಾತಾವರಣ ಗುರುದೇವ ರಾನಡೆಯವರಿಗೆ ಒಗ್ಗದೇ ಇರುವುದರಿಂದ ಡಿ.ಇ. ಸಂಸ್ಥೆಯವರು ಅವರಿಗೆ ಕೆಲದಿನ ರಜೆ ನೀಡಿ ಸಾಂಗಲಿಯ ವಿಲ್ಲಿಂಗ್ಡನ್ ಕಾಲೇಜಿಗೆ ವರ್ಗಾವಣೆ ಮಾಡಿದರು. ಇಂಚಗೇರಿಯಲ್ಲಿದ್ದು ಆಗಾಗ ಸಾಂಗ್ಲಿಗೆ ತೆರಳಿ ಅಧ್ಯಾಪನದ ಕಾರ್ಯವನ್ನು ಮಾಡುತ್ತಿದ್ದರು. ೧೯೨೧ರಲ್ಲಿ ಅವರು ಇಂಚಗೇರಿಯಲ್ಲಿದ್ದಾಗ ಒಮ್ಮೆ ನೇಮಕ್ಕೆ ಕೂತಿರಬೇಕಾದ ಕಾಲಕ್ಕೆ ಬೆಳಗಿನ ೮, ೮.೩೦ರ ಸುಮಾರಿಗೆ ಮಂಪರು ಬಂದು ಸಪ್ನ ದೃಷ್ಟಾಂತವಾಯಿತು. ಒಬ್ಬ ದಢೂತಿ ಮನುಷ್ಯ ರಾನಡೆಯವರಿಗೆ ಹೇಳಿದ– 'ನಿಂಬರಗಿ ಮಹಾರಾಜರು ನಿಂಬಾಳ ಸ್ಟೇಶನ್ನಿಗೆ ಹೋಗ್ಯಾರ. ಕಣ್ಣು–ಬಾಯಿ–ಕಿವಿ ಮುಚ್ಚಿ ನಾಮಸ್ಮರಣೆ ಮಾಡಿದರೆ ಎಲ್ಲ ತಿಳದ ಬರತದ' ಈ ಕನಸಿನ ದೃಷ್ಟಾಂತದಿಂದಾಗಿ ರಾನಡೆಯವರು ಇಂಚಗೇರಿಯಲ್ಲಿ ಕೋಣೆಯನ್ನು ಕಟ್ಟಿ ವಾಸಮಾಡುವುದನ್ನು ಬಿಟ್ಟರು. ಅವರ ಕಾಲೇಜು ಸಹಪಾಠಿಯಾದ ಶ್ರೀ ವಾಲಿಯವರು ಇಂಡಿಯಲ್ಲಿ ತಹಶೀಲ್ದಾರ ರಾಗಿದ್ದರು. ಈ ಪರಿಸರದಲ್ಲಿ ರಾನಡೆಯವರು ಜಾಗವನ್ನು ಹುಡುಕುತ್ತಿರುವ ವಿಷಯ ಅವರಿಗೆ ಗೊತ್ತಾಯಿತು. ಕನಸುಬಿದ್ದ ದಿನವೇ ಶ್ರೀ ವಾಲಿಯವರ ಒಂದು ಪತ್ರವು ರಾನಡೆಯವರಿಗೆ ಬಂತು. ನಿಂಬಾಳ ರೇಲ್ವೆ ನಿಲ್ದಾಣದ ಬಳಿ ಅವರಿಗಾಗಿ ಒಂದು ಜಾಗವನ್ನು ಹುಡುಕುತ್ತಿರುವುದಾಗಿ ತಿಳಿಸಿದ್ದರು. ಇದೊಂದು ದೈವೀ ಸಂಕಲ್ಪವೆಂದು ರಾನಡೆಯವರು ಕಾರಖಾನಿಸರಿಗೆ ಪತ್ರ ಬರೆದು ತಿಳಿಸಿದರು. ಅದರಲ್ಲಿ ಈ ಜಾಗವನ್ನು ಖರೀದಿಸುವ ಬಗೆಗೆ, ಉಪನಿಷತ್ತಿನ ಮೇಲೆ ಗ್ರಂಥ ಬರೆಯುವ ಬಗ್ಗೆ, ಭಾರತದ ಸಾಕ್ಷಾತ್ಕಾರಿ ಸಂತರ ಬಗೆಗೆ ಅಧ್ಯಯನ ನಡೆದಿದೆ ಎಂದು ಪತ್ರದಲ್ಲಿ ಬರೆದು ತಿಳಿಸಲಾಗಿತ್ತು.

೧೯೨೧ರ ಡಿಶೆಂಬರನಲ್ಲಿ ಅವರು ಪರೀಕ್ಷಕರ ಸಭೆಗಾಗಿ ಬೆಂಗಳೂರು–ಮೈಸೂರಿಗೆ ಹೋದರು. ಅವರ ಜೊತೆಗೆ ಯಮುನಕ್ಕ ಹಾಗು ಜಗನ್ನಾಥ ಪಂತರಿದ್ದರು. ಬೆಂಗಳೂರಿನವರಿಗೆ ಅವರು ಈ ಹಿಂದಿನ ಉಪನಿಷತ್ತಿನ ಬಗೆಗೆ ನೀಡಿದ ಉಪನ್ಯಾಸದಿಂದ ಪರಿಚಿತರಾಗಿದ್ದರು. ಬಳಿಕ ಮೈಸೂರಿಗೆ ಹೋದಾಗ ಯುನಿವರ್ಸಿಟಿಯ ರಜಿಸ್ಟ್ರಾರ್ ರಾದ ಶ್ರೀ ಸುಬ್ರಹ್ಮಣ್ಯ ಅಯ್ಯರ ಅವರ ಮನೆಯಲ್ಲಿ ತಂಗಿದರು. ಅವರ ಬೌದ್ಧಿಕ ಪ್ರತಿಭೆಯನ್ನು ಕಂಡು ಉಪಕುಲಪತಿಗಳಾದ ಬ್ರಜೇಂದ್ರನಾಥ ಸೀಲ್‌ರವರು ಅವರೊಂದಿಗೆ ಕಾರಿನಲ್ಲಿ ತಿರುಗಾಡಲು ತೀರ ಉತ್ಸಾಹ

ತೋರಿಸುತ್ತಿದ್ದರು. ಈ ಕಾರಣದಿಂದ ರಾನಡೆಯವರೊಂದಿಗೆ ಚರ್ಚಿಸಬಹುದು, ಮಾತುಕತೆ ನಡೆಸಬಹುದು ಎಂಬ ಭಾವನೆಯು ಅವರದ್ದಾಗಿತ್ತು. ಕೇವಲ ೩೬ನೇ ವಯಸ್ಸಿನಲ್ಲೇ ಗುರುದೇವ ರಾನಡೆಯವರು ಗೌರವದ ಸ್ಥಾನವನ್ನು ಪಡೆದಿದ್ದರು.

ಪರೀಕ್ಷೆಯ ಕಾರ್ಯವನ್ನು ಮುಗಿಸಿ ಮರಳಿದ ಬಳಿಕ ಜಾಗವನ್ನು ಖರೀದಿ ಸುವದರ ಬಗ್ಗೆ ಯೋಚಿಸಲಾರಂಭಿಸಿದರು. ನಿಂಬಾಳ ಸ್ಟೇಶನ್ನಿನ ಹತ್ತಿರದ ಆ ಜಾಗ ಎಲ್ಲ ಅನುಕೂಲತೆಯಿಂದ ಕೂಡಿ ಪ್ರಶಸ್ತವಾಗಿತ್ತು.

ಇದೇ ಸುಮಾರಿಗೆ ಸಾಂಗಲಿಯ ಶ್ರೇಷ್ಠ ಸಂತರಾದ ಹಣಮಂತರಾವ ಕೊಟ್ನಿಸ್‌ರ 'ಕೈವಲ್ಯ ವೈಭವ' ಈ ಗ್ರಂಥಕ್ಕೆ (ಇಂಚಗೇರಿಯಲ್ಲಿ ೨೬-೬-೧೯೨೧ರಂದು) ಪ್ರಸ್ತಾವನೆ ಬರೆಯುವ ನಿಮಿತ್ತದಲ್ಲಿ ವ್ಯಕ್ತಮಾಡಿದ ಸಾಕ್ಷಾತ್ಕಾರದ ಬಗೆಗಿನ ಅನುಪಮ ವಿಚಾರವನ್ನು ಅವರ ಮಾತಿನಲ್ಲೇ ಇಲ್ಲಿ ನೀಡಲಾಗಿದೆ. 'ಪರಮಾರ್ಥದ ದೃಷ್ಟಿಯಿಂದ ಭಗವದ್‌ಭಕ್ತಿಯ ಬೇರೆ ಬೇರೆ ಸಂಪ್ರದಾಯಗಳೇ ಇಲ್ಲ. ದೇವರನ್ನು ಅರಿಯುವ ಮಾರ್ಗ ಒಂದೇ. ದೇವರ ಸ್ಮರಣೆಯ ಹೊರತು ದೇವರನ್ನು ಸೇರುವ ಬೇರೆ ಮಾರ್ಗವಿಲ್ಲವೆಂದು ಎಲ್ಲ ಸಂತ-ಮಹಾಂತರು ಹೇಳಿದ್ದಾರೆ. ಪೌರ್ವಾತ್ಯ-ಪಾಶ್ಚಿಮಾತ್ಯ ತತ್ವಜ್ಞಾನವನ್ನು ತುಲನೆ ಮಾಡಿ, ಶಾಸ್ತ್ರೀಯ ಜ್ಞಾನದ ನಿಕಷದ ಮೂಲಕ ಸ್ವಾನುಭಾವದ ದೃಷ್ಟಿಯಿಂದ ಹೋಲಿಕೆ ಮಾಡಿ, ಚಿಕಿತ್ಸಕ ಬುದ್ಧಿಯಿಂದ ಈ ಮಾರ್ಗವನ್ನು ಅರಿಯಬೇಕಾಗುತ್ತದೆ. ದೇವರಿಚ್ಛೆಯಿದ್ದಲ್ಲಿ 'The Path way to God' ಎಂಬ ಗ್ರಂಥವನ್ನು ರಚಿಸಬೇಕೆಂಬ ಯೋಚನೆ ಈ ಲೇಖಕನದು. ಕೇವಲ ಬೌದ್ಧಿಕವಾದದಿಂದ ಪರಮಾರ್ಥ ಪ್ರಾಪ್ತಿಯಲ್ಲಿ ಸಾಗುವ ಜನರಿಗೆ ಈ ಗ್ರಂಥ ಉಪಯೋಗವಾಗಲಿದೆ.'

ಈ ರೀತಿಯಲ್ಲಿ ಸಾಕ್ಷಾತ್ಕಾರ ಸಾಧನೆಗೆ ಅನುರೂಪವಾಗುವಂತಹ ಜಾಗವನ್ನು ನಿಂಬಾಳ ಸ್ಟೇಶನ್ ಹತ್ತಿರ ಖರೀದಿಸಬೇಕೆಂದು ರಾನಡೆಯವರು ನಿರ್ಧರಿಸಿದರು. ಈ ಜಾಗದ ಅರ್ಧ ಮಾಲೀಕತ್ವ ಹೊಂದಿದ ಉಮವ್ವಾ ಪಾಟೀಲರು ಸ್ವಯಂ ಸ್ಫೂರ್ತಿ ಅವರು ಬಯಸಿದಷ್ಟು ಜಾಗವನ್ನು ನೀಡಲು ಮುಂದಾದರು. ಇದೊಂದು ದೈವೀ ಯೋಜನಯೇ ಇರಬಹುದು ಎಂದುಕೊಂಡರು. ತಹಶೀಲದಾರರ ಸಹಾಯದಿಂದ ನಿಂಬಾಳದ ನಾಡಗೌಡರ ೨೪ ಎಕರೆ ಜಾಗವನ್ನು ಕೇವಲ ೨೦೦ ರೂಪಾಯಿಗೆ ಖರೀದಿಸಲು ಮುಂದಾದರು. ಹಾಗೆಯೇ ಉಮವ್ವ ಪಾಟೀಲರ ೨೪ ಎಕರೆ ಜಾಗವನ್ನು ಅಷ್ಟೇ ಬೆಲೆಗೆ ಖರೀದಿಸುವ ನಿರ್ಧಾರ ಮಾಡಿ, ೧೯೨೨ರಲ್ಲಿ ೪೦೦ ರೂಪಾಯಿಗೆ ೪೮ ಎಕರೆ ಜಾಗವನ್ನು ಗುರುದೇವ ರಾನಡೆಯವರು ಖರೀದಿಸಿದರು. ಮನೆ ನಿರ್ಮಿಸುವ ದೃಷ್ಟಿಯಿಂದ ಇಂಚಗೇರಿಯಿಂದ ನಿಂಬಾಳಕ್ಕೆ ಬಂದು ನಾಡಗೌಡರ ವಾಡೆಯಲ್ಲಿ ವಾಸ್ತವ್ಯ ಮಾಡಿದರು.

ಅನಂತರ ದೈವಗತಿಯಂತೆ ಗುರುದೇವ ರಾನಡೆಯವರ ಎರಡನೇ ವಿವಾಹವು ೧ ಜೂನ ೧೯೨೨ರಂದು ಇಸ್ಲಾಂಪುರದಲ್ಲಿ ಜರುಗಿತು. ಬಳಿಕ ಗುರುದೇವರು ಶ್ರೀ ಸಮರ್ಥರ

ದರ್ಶನಕ್ಕಾಗಿ ಇಂಚಗೇರಿಗೆ ಹೋದರು. ಪತ್ನಿಯೊಂದಿಗೆ ಶ್ರೀ ಸದ್ಗುರುವಿನ ಸಮಾಧಿಯ ದರ್ಶನವನ್ನು ಪಡೆದರು. ರಾನಡೆಯವರ ಎರಡನೇ ಮದುವೆಗಿಂತ ಮೊದಲು ಅವರಿಗೆ ಆ ಬಗೆಗೆ ದೃಷ್ಟಾಂತವಾಗಿತ್ತು. ಜೂನ ೧೦ ರಂದು ಶ್ರೀ ಸದ್ಗುರುವಿನ ಸಮಾಧಿಯ ಹತ್ತಿರ ದೃಷ್ಟಾಂತ ಪರಿಪೂರ್ತಿಗೊಂಡಿತು. ರಾನಡೆಯವರ ಪ್ರಾಪಂಚಿಕ ಜೀವನ ಶುರುವಾಯಿತು. ಇದು ಪಾರಮಾರ್ಥದಿಂದ ಕೂಡಿದ ಪ್ರಾಪಂಚಿಕ ಜೀವನವಾಗಿತ್ತು. ಆ ಕಾಲದಲ್ಲಿ ಅವರು ನಿಂಬಾಳದಲ್ಲೇ ವಾಸ್ತವ್ಯ ಮಾಡಿ, ಆಗಾಗ ಸಾಂಗಲಿಗೆ ಹೋಗಿ ಬರುತ್ತಿದ್ದರು. ವಿಲಿಂಗಡನ್ ಕಾಲೇಜಿಗೆ ಹೋಗಿ ಬೋಧಿಸುತ್ತಿದ್ದರು.

೧೯೨೨–೨೩ರಲ್ಲಿ ನಾಡಗೌಡರ ವಾಡೆಯಲ್ಲಿ ವಾಸವಾಗಿದ್ದಾಗ, ಒಂದು ದಿನ ನೇಮಕ್ಕೆ ಕೂತಿದ್ದರು. ಆಗ ಎಂಥದೋ ಬಂಡೆಗಲ್ಲು ಉರುಳಿದ ಸದ್ದಾಯಿತು. ಅವರು ತನ್ನ ಬಳಿಯ ಜನರಿಗೆ ಹೊರಗೆ ಹೋಗಿ ನೋಡಿ ಬರುವಂತೆ ಹೇಳಿದರು. ಆದರೆ ಆ ಸದ್ದು ಆಧ್ಯಾತ್ಮಿಕ ಅನುಭವದಲ್ಲಿಯ ಒಂದು ಪ್ರಕಾರವಾಗಿದ್ದು ಅನಂತರ ಅರಿವಿಗೆ ಬಂತು. ಅದಾದ ಬಳಿಕ ಅವರಿಗೊಂದು ಸ್ವಪ್ನ ದೃಷ್ಟಾಂತವೂ ಆಯಿತು. ಇನ್ನು ಮುಂದೆ ಅವರು ಅಲ್ಲಿ ಬಹಳ ದಿನವಿರಬಾರದೆಂದೂ ಮುಂಬೈ ಪುಣೆಯಂಥ ಪರ ಊರಿಗೆ  ಹೋದರೂ ಊರ ಹೊರಗೇ ವಾಸಿಸಬೇಕೆಂಬ ಸೂಚನೆ ನೀಡಲಾಗಿತ್ತು. ಮುಂದೆ ವಾಡೆಯಲ್ಲೇ ವಾಸವಾಗಿದ್ದಾಗ ೧೯೨೩ರಲ್ಲಿ ಅನಿರೀಕ್ಷಿತವಾಗಿ ಕಳ್ಳತನವಾಯಿತು. ಗುರುದೇವರ ಮನೆಯಲ್ಲಿದ್ದ ಬಟ್ಟೆ, ಪಾತ್ರೆ, ಜೋಳದ ಚೀಲಗಳು ಕಳ್ಳತನವಾದವು. ಅವುಗಳ ಜೊತೆಗೆ ಮಹತ್ವದ್ದಾದ ಶ್ರೀ ಸದ್ಗುರುವಿನ ಚಿತಾಭಸ್ಮದ ಡಬ್ಬಿಯೂ ಕಳ್ಳತನ ವಾಗಿತ್ತು. ಇದರಿಂದ ರಾನಡೆಯವರು ತೀರ ಸಂಕಟಕ್ಕೊಳಗಾದರು. ರಾನಡೆಯವರು ಸದ್ಗುರುವಿನ ಪ್ರತಿಯೊಂದು ವಸ್ತುವನ್ನು ಪ್ರೀತಿಯಿಂದ ಸಂರಕ್ಷಿಸುತ್ತಿದ್ದರು. ಆ ವಸ್ತುವಿನಲ್ಲಿ ಅವರು ದೇವರ ಸ್ವರೂಪವನ್ನು ಕಾಣುತ್ತಿದ್ದರು.

ಕೆಲವು ದಿನಗಳ ಬಳಿಕ ಊರಲ್ಲಿ ಕಾಲರಾರೋಗ ಹರಡಿದ್ದರಿಂದ ಅವರು ನಿಂಬಾಳ ಸ್ಟೇಶನ್ನಿನ ಧರ್ಮಶಾಲೆಗೆ ಹೋಗಿ ತಂಗಿದರು. ಕಾಲಾಂತರದಲ್ಲಿ ಆ ಸ್ಥಳವನ್ನು ಸಹ ಅವರು ಲೀಲಾವಿನಲ್ಲಿ ೬೨ ರೂಪಾಯಿಗೆ ಖರೀದಿಸಿದರು. ೩೦ ಜನೇವರಿ ೧೯೨೫ ರಾನಡೆಯವರಿಗೆ ಹೆಣ್ಣುಮಗು ಜನಿಸಿತು. ೧೯೨೫ರಲ್ಲೇ ಸ್ಟೇಶನ್ನಿನ ಹತ್ತಿರ ಸ್ವಂತ ಮನೆ ಕಟ್ಟಿ ಮುಗಿದಿದ್ದರಿಂದ, ಅಲ್ಲಿಗೆ ಹೋಗಿ ವಾಸ್ತವ್ಯ ಮಾಡುವ ನಿರ್ಧಾರ ಮಾಡಿದರು. ಈ ನಿಮಿತ್ತದಲ್ಲಿ ಹೊಸಮನೆಯ ವಾಸ್ತುಶಾಂತಿಗಾಗಿ, ಆ ಕಾಲದ ಎಲ್ಲ ಸಂತರು, ಗುರುಬಂಧುಗಳು ಮತ್ತು ನಾಮಧಾರಿಗಳಿಗೆಲ್ಲ ಆಮಂತ್ರಣವನ್ನು ನೀಡಿ ನಾಮ ಸಪ್ತಾಹದ ಉತ್ಸವವನ್ನು ಏರ್ಪಡಿಸಿದರು. ಅದಾದ ಬಳಿಕ ಪ್ರತಿವರ್ಷ ಮೇ ಜೂನ ಸುಮಾರಿಗೆ ಶ್ರೀ ಅಂಬುರಾವ ಮಹಾರಾಜರು ನಿಂಬಾಳಕ್ಕೆ ಹೋಗಿ ನಾಮಸಪ್ತಾಹ ವನ್ನು ಆಚರಿಸುತ್ತಿದ್ದರು. ಈ ಕ್ರಮವು ೧೯೩೨ ವರೆಗೂ ಮುನ್ನಡೆಯಿತು. ಈ ನಾಮ ಸಪ್ತಾಹಕ್ಕಾಗಿ ಇಂಚಗೇರಿಯಿಂದ ಶ್ರೀ ಅಂಬುರಾವ, ಶ್ರೀಗಿರಿಮಲ್ಲಪ್ಪ ಮಹಾರಾಜರು, ಶ್ರೀ ಸದ್ಗುರುವಿನ ಅಂಗರಕ್ಷಕ ಪುಂಡಪ್ಪ, ಕುದುರೆ ಸವಾರ ಶೆಟ್ಟಪ್ಪಾ ಮುಂತಾದ ಶಿಷ್ಯರು;

ಜತ್ತದಿಂದ ಶ್ರೀ ಶಿವಲಿಂಗವ್ವ, ಉಮದಿಯಿಂದ ಮಹಾರಾಜರ ಮಗ, ಭೀಮರಾವ, ಕುನ್ನೂರಸ್ವಾಮಿ, ವಿಜಯಪುರದಿಂದ ಶ್ರೀ ನರಸಪ್ಪ ಮತ್ತು ಉಳಿದ ಊರುಗಳಿಂದ ಹಲವಾರು ಭಕ್ತರ ಸಮೂಹ ಆಗಮಿಸಿತ್ತು. ಹೊಸ ಮನೆಯಲ್ಲಿ ಸದ್ಗುರುವಿನ ಪುಣ್ಯಸ್ಮೃತಿ ಗಾಗಿ ಸ್ಥಾಪಿಸಲು, ಶ್ರೀ ಸದ್ಗುರುವಿನ ಚಿತಾಭಸ್ಮವನ್ನು ಶೆಟ್ಟಪ್ಪಾ ತಂದುಕೊಟ್ಟ. ರಾನಡೆಯವರು ಈ ಚಿತಾಭಸ್ಮವನ್ನು ದಿವಾನಖಾನೆಯ ಮಧ್ಯಭಾಗದಲ್ಲಿ ಸ್ಥಾಪಿಸಿ, ಅಲ್ಲಿ ಸದ್ಗುರುವಿನ ಪಾದುಕೆ ಮತ್ತು ಫೋಟೋ ಇರಿಸಿದರು. ವಾಸ್ತುಶಾಂತಿಯ ರಾತ್ರಿ ಹೊಡೆದ ಕಸವನ್ನು ಸಂತರ ಪಾದಧೂಳಿಯೆಂದು ರಾನಡೆಯವರು ಅದರ ಪುಡಿಕಟ್ಟಿ ಇರಿಸಿದರು. ಮನೆಯ ಮೂಲೆಗಲ್ಲಿನ ಮೇಲೆ 'ದೇವರ ಪಾದಪರಾಗ ಸೇವೆಯ ಹೊರತು ತಾತ್ವಿಕ ಜಿಜ್ಞಾಸೆಯ ಪ್ರಶ್ನೆ ಬಿಡಿಸುವುದು ಅಸಾಧ್ಯ' ಎಂದು ಬರೆದಿತ್ತು.

■■

# ಜೀವನದ ಸ್ಥಿತ್ಯಂತರ ಮತ್ತು ಗ್ರಂಥ ಲೇಖನ

ತೇವಾಂಶದಿಂದ  ಕೂಡಿದ ಪುಣೆಯ ವಾತಾವರಣವು ರಾನಡೆಯವರಿಗೆ ಒಗ್ಗದೆ ಹೋಗಿದ್ದರಿಂದ ಸಾಂಗಲಿ ವಿಲಿಂಗ್‌ಡನ್ ಕಾಲೇಜಿಗೆ ವರ್ಗಾವಣೆ ಮಾಡಲಾಗಿತ್ತು. ಆದರೂ ಅವರು ನಿಂಬಾಳದಲ್ಲಿ ಮನೆ ಮಾಡಿಕೊಂಡಿದ್ದು ಸಾಂಗಲಿಗೆ ಹೋಗಿ ಬೋಧನೆಯ ಕಾರ್ಯವನ್ನು ಮುಗಿಸಿ ಮರಳುತ್ತಿದ್ದರು. ಆದರೆ ಡಿ.ಇ. ಸಂಸ್ಥೆಯ ಕೆಲ ಸದಸ್ಯರಿಗೆ ಅಧ್ಯಾಪನದಲ್ಲಿ ಕಂಡು ಬರುವ ಅನಿಯಮಿತತನವು ಒಪ್ಪಿಗೆಯಾಗದೇ ಇರುವುದರಿಂದ ಅಸಮಾಧಾನ ತಲೆದೋರಿತು. ಕೊನೆಗೆ ೨೦ ಜೂನ ೧೯೨೪ರಲ್ಲಿ ರಾನಡೆಯವರು ಡಿ.ಇ. ಸೊಸೈಟಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು. ಅದರ ಸಾರಾಂಶ ಇಲ್ಲಿ ನೀಡಲಾಗಿದೆ– 'ಹತ್ತು ವರ್ಷಗಳ ಹಿಂದೆ ನಾನು ಡೆಕ್ಕನ ಕಾಲೇಜಿನ ನೌಕರಿಯನ್ನು ತೊರೆದು ಫರ್ಗ್ಯೂಸನ ಸೇರಲು ಕಾರಣವೇನೆಂಬುದು ನಿಮ್ಮಲ್ಲಿ ಕೆಲವರಿಗಾದರೂ ಗೊತ್ತಿರಬಹುದು. ಅನಂತರ ಎಷ್ಟೋ ಕಾರಣಗಳಿಂದ ನನ್ನ ಧ್ಯೇಯ ಪರಿಪೂರ್ಣಗೊಳ್ಳಲಿಲ್ಲ. ನಾನು ಸಂಸ್ಥೆಗೆ ಮಾತುಕೊಟ್ಟಂತೆ ನಡೆದುಕೊಂಡಿದ್ದೇನೆ. ಬನಾರಸ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಬಂದ ತತ್ವಜ್ಞಾನದ ಪ್ರಾಧ್ಯಾಪಕ ಹುದ್ದೆಯನ್ನು ನಾನು ಎರಡು ಸಲ ನಿರಾಕರಿಸಿದ್ದೇನೆ. ಎರಡು ವರ್ಷಗಳ ಹಿಂದೆ, ನಾನು ಅನಾರೋಗ್ಯದಿಂದ ಚೇತರಿಸಿಕೊಂಡ ಬಳಿಕ, ವಿಲಿಂಗಡನ್ ಕಾಲೇಜಿನಲ್ಲಿ ನನ್ನ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದೇನೆ. ಸಂಸ್ಥೆಗೆ ನೀಡಿದ ವಚನವನ್ನು ಆರೋಗ್ಯ ಹದಗೆಟ್ಟಿದ್ದರೂ ಪ್ರಾಮಾಣಿಕವಾಗಿ ನೆರವೇರಿಸಿದ್ದೇನೆ.

ಏಳು ವರ್ಷಗಳ ಹಿಂದೆ ೧೯೧೭ರಲ್ಲಿ ಜೂನ ೨೦ ರಂದು ಫರ್ಗ್ಯೂಸನ್ ಕಾಲೇ ವಿದ್ಯಾರ್ಥಿಗಳ ಎದುರಿಗೆ ಉದ್ಘಾಟನೆ ಭಾಷಣ ಮಾಡುವ ಅವಕಾಶ ನನಗೆ ಲಭಿಸಿತು. ನಾನಾಗ ಸರ್ವಾಂಗೀಣ ಶಿಕ್ಷಣಕ್ಕೆ ಮಹತ್ವ ನೀಡಬೇಕೆಂದು ಪ್ರತಿಪಾದಿಸಿದ್ದೆ. ಇದು ಉಳಿದ ಶೈಕ್ಷಣಿಕ ಸಂಸ್ಥೆಯವರಿಗೂ ಮಾದರಿಯಾಗಬಹುದು. ಸನಾತನ ಕಾಲ ಉಳಿಸಲೆಂದು ಮಾಡಿದ ಕಾರ್ಯವೇ ಸತ್ಯವಾದುದು. ವರ್ತಮಾನವನ್ನು ಎದುರಿಗಿಟ್ಟು ಮಾಡಿದ ಕಾರ್ಯ ಅಲ್ಪಾವಧಿಯಲ್ಲೇ ನಾಶ ಹೊಂದುತ್ತದೆ–ಎಂದೂ ಹೇಳಿದ್ದೆ.

ಈ ಜ್ಞಾನಮಂದಿರದಲ್ಲಿ ಉಪಾಸಕನಾಗಿ ನಾನು ಮಾಡಿದ ಸೇವೆ ಉಪಯುಕ್ತವೇ ಅಲ್ಲವೇ ಎಂಬುದನ್ನು ನೀವೆ ನಿರ್ಧರಿಸಬೇಕು. ತೇವಾಂಶ ನನ್ನ ದೇಹಕ್ಕೆ ಒಗ್ಗುವುದಿಲ್ಲ.... ಸಂಶೋಧನೆಯ ಬೆನ್ನು ಹತ್ತಿ ನಾನು ನನ್ನ ಬೋಧನೆಯ ಕಾರ್ಯವನ್ನು ನಿರ್ಲಕ್ಷಿಸಿದ್ದೇನೆ ಎಂಬ ತಪ್ಪು ಗ್ರಹಿಕೆ ಮಾಡಿಕೊಂಡ ಹಾಗಿದೆ. ನಾನು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿದ್ದೇನೆ ಎಂದು ನಿಮಗೆ ಅನಿಸಿದರೆ, ನನ್ನ ಕೆಲಸವನ್ನು ಸಂತೋಷದಿಂದ ಮುಂದುವರೆಸಲು ಸಿದ್ಧ. ಒಂದು ವೇಳೆ

ನಾನು ನಿಮಗೆ ಬೇಡವಾಗಿದ್ದರೆ, ನಾನು ಈ ಸಂಸ್ಥೆಯಿಂದ ಹೊರಬೀಳಲು ಸಿದ್ಧನಾಗಿದ್ದೇನೆ. ಇದರಿಂದ ನನ್ನ ಅಂತರಂಗದ ಇಚ್ಛೆ ಯಂತೆ ನನ್ನ ಕೆಲಸ ಮಾಡಲು ನಾನು ಮುಕ್ತನಾಗುತ್ತೇನೆ. ಯಾವುದು ಯೋಗ್ಯವೆನ್ನುವುದನ್ನು ದೇವರೆ ನಿರ್ಧರಿಸಲಿ.'

ಈ ರೀತಿ ರಾಜೀನಾಮೆಯನ್ನು ನೀಡಿದ ಬಳಿಕ ಸಂಸ್ಥೆಯು ಟೈಮ್ಸ್ ಆಫ್ ಇಂಡಿಯಾದಲ್ಲಿ ನೀಡಿದ ಸ್ಪಷ್ಟೀಕರಣಕ್ಕೆ ನೀಡಿದ ಉತ್ತರ ಚರಿತ್ರ ನಾಯಕನ ಜೀವನದ ಮೇಲೆ ಬೆಳಕು ಚೆಲ್ಲಬಹುದು. 'ನನ್ನ ಕೈಕೆಳಗೆ ಕಳೆದ ೧೦–೧೨ ವರ್ಷಗಳಲ್ಲಿ ಕಲಿತ ವಿದ್ಯಾರ್ಥಿಗಳೇ ನಾನು ಮಾಡಿದ ಪಾಠ–ಪ್ರವಚನದ ಉಪಯೋಗವಾಗಿದೆಯೇ ಇಲ್ಲವೇ ಎಂದು ಹೇಳಬಲ್ಲರು. ಜಗದ ತುಂಬ ಪಸರಿಸಿದ ಅವರೇ ನನ್ನ ಕಾಲೇಜಿನ ಕೆಲಸದ ನಿಜವಾದ ಮೌಲ್ಯಮಾಪಕರು.'

ಈ ರೀತಿ ಅವರು ಡಿ.ಇ. ಸೊಸೈಟಿಯ ಕೆಲಸಕ್ಕೆ ರಾಜೀನಾಮೆ ನೀಡಿದ ಬಳಿಕ, ಅವರ ಮನದಲ್ಲಿರುವ ಪರಮಾರ್ಥ ಪ್ರಚಾರಕ್ಕೆ ಸಂಬಂಧದ ಕಲ್ಪನೆಯು ಮೂರ್ತ ಸ್ವರೂಪವನ್ನು ಪಡೆಯಲಾರಂಭಿಸಿತು. ೧ ಆಗಸ್ಟ್ ೧೯೨೪ರಂದು ಅವರು 'ಅಧ್ಯಾತ್ಮ ವಿದ್ಯಾಪೀಠ' (Academy of Philosophy and Religion) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ದೇವರ ರಹಸ್ಯವನ್ನು ಅರಿಯಲು ತತ್ವಜ್ಞಾನದ ಸಂಶೋಧನೆಯನ್ನು ಮಾಡಲು ಬಯಸುವ ಎಲ್ಲರನ್ನು ಒಗ್ಗೂಡಿಸುವುದೇ ಈ ವಿದ್ಯಾಪೀಠದ ಧ್ಯೇಯವಾಗಿದೆ'

ರಾನಡೆಯವರು ಗುಂಡೋಪಂತ ಗದಗಕರ ಅವರಿಗೆ ಬರೆದ ಪತ್ರ–

ನಿಂಬಾಳ, ೧೪–೮–೧೯೨೪

...ನನ್ನ ಜೀವನದಲ್ಲಿ ಪಾರಮಾರ್ಥಿಕ ಜೀವನವೇ ಹೆಚ್ಚು ಮಹತ್ವದ್ದು. ನನ್ನ ಶೈಕ್ಷಣಿಕ, ತತ್ವಜ್ಞಾನಾತ್ಮಕ ಹಾಗೂ ಪ್ರಚಾರಾತ್ಮಕ ಕಾರ್ಯವು ಆ ಪಾರಮಾರ್ಥಿಕ ಜೀವನದ ಅಸ್ಪಷ್ಟ ಆವಿಷ್ಕಾರ. ಇದು ನಿಮಗೂ ಗೊತ್ತಿದೆ.... ನಾನು ಪಾರಮಾರ್ಥಿಕ ದಡ ಸೇರಲು ಬೌದ್ಧಿಕ ಜೀವನದಿಂದಲೇ ಮಾರ್ಗ ಹುಡುಕಬೇಕಾಗಿದೆ. ಬೇರೆ ಯಾವ ಮಾರ್ಗವೂ ಕಾಣುತ್ತಿಲ್ಲ. ಕಾಲೇಜಿನ ಜೀವನದಲ್ಲಿ ನನ್ನ ಧ್ಯೇಯ ಪೂರ್ಣವಾಗದಿದ್ದರೂ ತತ್ವಜ್ಞಾನದ ವ್ಯಾಸಂಗಕ್ಕೆ ಬೇಕಾಗುವ ಹೊಸ ಕಾರ್ಯಕ್ಷೇತ್ರ ನನಗೆ ಲಭಿಸಿದೆ....ಅಂಥಲ್ಲಿ ಎಲ್ಲ ಧರ್ಮದವರು, ತತ್ವಜ್ಞಾನದ ಪ್ರತಿನಿಧಿಗಳು ಒಂದೆಡೆ ಸೇರಬಹುದು. ದೇವರ ಶ್ರೇಷ್ಠತ್ವ ವೈಭವದ ಸತ್ಯವನ್ನು ಮನವರಿಕೆ ಮಾಡಿಕೊಡಲು ವಿಚಾರಗಳ ಕೊಡು ಕೊಳ್ಳುವಿಕೆ ಸಾಧ್ಯವಾಗಬಹುದು. ಇಂಥ ಸಂಸ್ಥೆಯ ಆರ್ಥಿಕ ಸಹಾಯಕ್ಕಾಗಿ ಪರರನ್ನು ಅವಲಂಬಿಸದೇ ಇರುವ ದಿನ ಎಂದು ಉದಯಿಸುವುದೋ ಅದೇ ಸುದಿನ...ಇದು ಜ್ಞಾತ–ಅಜ್ಞಾತ ರೀತಿಯಿಂದ ದೇವರ ಕಡೆಗೆ ಹೆಜ್ಜೆಯಿಡುವ ಅಖಿಲ ಮಾನವ ಜಾತಿಯ ಧ್ಯೇಯವೂ ಹೌದು. ಕಾರ್ಯ ಮಾಡುತ್ತ ಹಾದಿಕಾಯುವುದಷ್ಟೇ ನಮ್ಮ ಕೆಲಸ, ಉಳಿದದ್ದೆಲ್ಲ ದೇವರಿಗೆ ಬಿಟ್ಟಿದ್ದು.'

ಆಧ್ಯಾತ್ಮ ವಿದ್ಯಾಪೀಠವನ್ನು ಸ್ಥಾಪಿಸಿದ ಗುರುದೇವ ರಾನಡೆಯವರು ತನ್ನ ಪಾರಮಾರ್ಥಿಕ ಜೀವನಕ್ಕೆ ಪೋಷಕವಾಗುವಂತಹ ಬೌದ್ಧಿಕ ಕಾರ್ಯಕ್ಷೇತ್ರವನ್ನು ನಿರ್ಮಾಣ ಮಾಡಿದರು. ಭಾರತದಲ್ಲಿಯ ಶ್ರೇಷ್ಠ ವಿದ್ವಾಂಸರೊಂದಿಗೆ ಪತ್ರವ್ಯವಹಾರ ಮಾಡಿ, ವಿಚಾರ ವಿನಿಮಯ ನಡೆಸಿ, ಅನನುಭವಿ ತತ್ವಜ್ಞಾನಿಗಳ ಸಲಹೆಯನ್ನು ಪಡೆದು 'ಭಾರತೀಯ ತತ್ವಜ್ಞಾನದ ಸಮಗ್ರ ಇತಿಹಾಸ'ವನ್ನು ೧೬ ಸಂಪುಟಗಳಲ್ಲಿ ಪ್ರಕಟಿಸಬೇಕೆಂದು ನಿರ್ಧರಿಸಿ, ವಿವಿಧ ತತ್ವಜ್ಞಾನಿ ಪ್ರಾಧ್ಯಾಪಕರಿಗೆ ಲೇಖನಗಳನ್ನು ಬರೆಯುವ ಜವಾಬ್ದಾರಿಯನ್ನು ವಹಿಸಿದರು. ಈ ಯೋಜನೆಗೆ ಡಾ. ಭಾಂಡಾರಕರರು ನೀಡಿದ ಪ್ರೋತ್ಸಾಹ ಹೀಗಿದೆ–

'ಭಾರತೀಯ ತಾತ್ವಿಕ ವಿಚಾರ ಸಂಪದವನ್ನು ವಿಶದ ಮಾಡಿ ಹೇಳಿದ್ದಾದರೆ ಅದು ಜಗತ್ತಿನ ತತ್ವಜ್ಞಾನ ಹಾಗೂ ಧಾರ್ಮಿಕ ಕ್ಷೇತ್ರದ ಮೇಲೆ ಪರಿಣಾಮ ಬೀರದೆ ಇರಲಾರದು. ಈ ಕಾರ್ಯ ತುಂಬ ಜಟಿಲವಾದುದು. ಇದನ್ನು ವ್ಯಾಪಕ ಹಾಗು ಚಿಕಿತ್ಸಕ ದೃಷ್ಟಿಯ ಸಹಾಯದಿಂದ, ಕೌಶಲ್ಯದಿಂದ ಮಾಡಬೇಕಾಗುತ್ತದೆ. ಈ ವಿದ್ವಾಂಸ ಕೈಗೆತ್ತಿಗೊಂಡ ಕಾರ್ಯ ತೀರ ಮಹತ್ವದ್ದು. ಮಾನವತೆಯು ತನ್ನ ಅಸ್ತಿತ್ವ ಮತ್ತು ಧ್ಯೇಯಕ್ಕಾಗಿ ಏನು ಯೋಚಿಸುತ್ತಿದೆ ಎಂಬುದನ್ನು ಅರಿಯಲು ಬಯಸುವವರು ಈ ಸಮಗ್ರ ಚರಿತ್ರೆಯತ್ತ ಗಮನ ಹರಿಸಿ ಸಹಾಯ ಮಾಡುವುದು ಶ್ರೇಯಸ್ಕರ'

ಸಂಗಮಾಶ್ರಮ, ಪುಣೆ **ಆರ್. ಜಿ. ಭಾಂಡಾರಕರ್**

೫–೧೨–೧೯೧೮

೧೯೨೬ರಲ್ಲಿ ರಾನಡೆಯವರು 'A constructive Survey of Upanishadic Philosophy' 'ಔಪನಿಷಧಿಕ ತತ್ವಜ್ಞಾನದ ವಿಧಾಯಕ ಸಮಾಲೋಚನೆ' ಎಂಬ ಗ್ರಂಥವನ್ನು ಪ್ರಕಟಿಸಿದರು. ಪಾಶ್ಚಿಮಾತ್ಯ ವಿಚಾರಸರಣಿಯ ಪದ್ಧತಿಯಿಂದ ಉಪನಿಷತ್ತಿನಲ್ಲಿಯ ತತ್ವಗಳನ್ನು ಮಂಡಿಸಿ, ಪಾಶ್ಚಿಮಾತ್ಯ ತತ್ವಜ್ಞಾನಿಗಳು ಉಪನಿಷತ್ತಿನ ಬಗೆಗೆ ಎತ್ತಿದ ಹಲವು ಆಕ್ಷೇಪಗಳಿಗೆ ನೇರ ಹಾಗೂ ಸಾಧಾರ ಉತ್ತರವನ್ನು ನೀಡಿದ್ದಾರೆ. ಇದನ್ನು ಶಾಸ್ತ್ರಿಯ ಪದ್ಧತಿಯಿಂದ ಇಂಗ್ಲಿಷ್‌ನಲ್ಲಿ ಬರೆದಿರುವುದರಿಂದ ಹಲವು ವಿದ್ವಾಂಸರು ಇವರ ಗುಣಗಾನ ವನ್ನು ಮಾಡಿದ್ದಾರೆ. ಇದರಿಂದ ಗುರುದೇವ ರಾನಡೆಯವರ ಕೀರ್ತಿ ಅದೆಷ್ಟು ದೂರದ ವರೆಗೆ ಹರಡಿತು ಎನ್ನುವುದು ಅರಿವಿಗೆ ಬರುತ್ತದೆ. ಎಚ್.ಜಿ. ಕೋಟಿ, ಎಂ. ವಿಂಟರ್‌ನಿಜ್, ಎ. ಹಿಲ್ಲರ್‌ಬ್ರಾಂಡೆಟ್, ಜೆ.ಎಚ್.ಮ್ಯುರಹೆಡ್, ರಾಬಿನ್‌ಸನ್, ಆರ್ ಝಿಮ್ಮರ್‌ಮನ್ ಇವರೇ ಆ ಪ್ರಮುಖರು.

ಇಂಥ 'ಉಪನಿಷದ್ ರಹಸ್ಯ' ಎಂಬ ಗ್ರಂಥವನ್ನು ರಚಿಸಿ ಸಾಕ್ಷಾತ್ಕಾರ ಶಾಸ್ತ್ರಕ್ಕೆ ತತ್ವಜ್ಞಾನದ ಭದ್ರ ಬುನಾದಿಯನ್ನು ಹಾಕುವ ಮೂಲಕ ಕಾರ್ಯವನ್ನು ರಾನಡೆಯವರು ಮಾಡಿದರು.

'ಅನುಭೂತಿ ಶಾಸ್ತ್ರವನ್ನು ತಾತ್ವಿಕ ಪದ್ಧತಿಯಿಂದ ಹೇಗೆ ಪ್ರತಿಪಾದಿಸಬಹುದು ಎನ್ನುವುದೇ ಭಾವೀ ತತ್ವಜ್ಞಾನಿಗಳ ಎದುರಿಗಿರುವ ಅತೀ ದೊಡ್ಡ ಪ್ರಶ್ನೆಯಾಗಿದೆ. 'ತರ್ಕಾಧಿಷ್ಠಿತ ಅನುಭೂತಿ

ಶಾಸ್ತ್ರ' ಎಂಬ ಪದವನ್ನು ಇಂದಿನ ವರೆಗೆ ವಿರೋಧಾತ್ಮಕವೆಂದು ಒಪ್ಪಿಕೊಂಡಿದ್ದರೂ ಈಗ ಸತ್ಯವೆಂದು ಒಪ್ಪಬೇಕಾಗಿದೆ' ಎಂದವರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಸಾಕ್ಷಾತ್ಕಾರವನ್ನು ಅವರು ತತ್ವಜ್ಞಾನದ ಪದ್ಧತಿಯಿಂದ ವಿವೇಚಿಸಿದ್ದಾರೆ. 'ಎಲ್ಲ ದೈಹಿಕ ಪ್ರಕ್ಷೋಭೆ ನಿಲ್ಲುವುದು, ಎಲ್ಲ ಸಂಶಯ ನಿವಾರಣೆಯಾಗುವುದು, ಅಸಾಮಾನ್ಯ ಸಾಮರ್ಥ್ಯ ಪ್ರಾಪ್ತವಾಗುವುದು, ಅಸೀಮ ಆನಂದವನ್ನು ಅನುಭವಿಸುವುದು, ಎಲ್ಲ ಬಗೆಯ ಭೀತಿ ನಿವಾರಣೆಯಾಗುವುದು ಮತ್ತು ಅಂತರಂಗದಲ್ಲಿ ಮಾಡಿದ ಪ್ರತಿಯೊಂದು ಸಂಕಲ್ಪ ಪರಿಪೂರ್ಣವಾಗುವುದು. ಈ ಬಗೆಯ ಪರಿಮಾಣವು ದೇವರ ಸಾಕ್ಷಾತ್ಕಾರ ದಿಂದಾಗಿ ಸಾಕ್ಷಾತ್ಕಾರಿ ಪುರುಷನ ಮೇಲಾಗುತ್ತದೆ.'

ಈ ಬಗೆಯಲ್ಲಿ 'ಉಪನಿಷದ್ ರಹಸ್ಯ' ಎಂಬ ಗ್ರಂಥದಿಂದಾಗಿ ಗುರುದೇವ ರಾನಡೆಯವರ ವಿಶಾಲ, ಮೂಲಗ್ರಾಹಿ ಮತ್ತು ಚಿಕಿತ್ಸಕ ಬುದ್ಧಿಯ ಮಾಹಿತಿಯು ಭಾರತ ಮತ್ತು ಉಳಿದೆಡೆಗಳಲ್ಲೂ ಆಯಿತು. ಅಲಹಬಾದ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಸರ್ ಗಂಗಾನಾಥ ಝಾ ಅವರು ತಮ್ಮ ವಿವಿ ತತ್ವಜ್ಞಾನ ವಿಭಾಗದ ಮುಖ್ಯಸ್ಥರಾಗುವಂತೆ ಕೋರಿ ನೇರವಾಗಿ ಆಮಂತ್ರಣವನ್ನೇ ನೀಡಿದರು. ರಾನಡೆಯವರು ಇದನ್ನು ಒಪ್ಪಿ ೧೯೨೭ರಲ್ಲಿ ನೌಕರಿಗೆ ಸೇರಿಕೊಂಡರು. ೧೯೨೮ರ ಬೇಸಿಗೆಯ ರಜೆಯಲ್ಲಿ ಮತ್ತೆ ನಿಂಬಾಳಕ್ಕೆ ಮರಳಿದರು. ಅನಂತರ ಆಗಸ್ಟ್ ೧೯೨೮ರಲ್ಲಿ ಹೋಗುವಾಗ ತಮ್ಮ ಜೊತೆಯಲ್ಲಿ ರಂಗರಾವ ದೇಶಪಾಂಡೆಯವರನ್ನು ಕರೆದೊಯ್ದರು. ಮತ್ತೆ ಅನಾರೋಗ್ಯ ಕಾಡಿದ್ದರಿಂದ ಸೆಪ್ಟಂಬರ್‌ನಲ್ಲಿ ರಜೆ ಹಾಕಿ ಮರಳಿದರು. ನಿಂಬಾಳಕ್ಕೆ ಮರಳುವಾಗ ಆಯೋಧ್ಯೆ, ಚಿತ್ರಕೂಟ, ಮಥುರಾ, ಬೃಂದಾವನ–ಮುಂತಾದ ಧಾರ್ಮಿಕ ತಾಣಗಳಿಗೆ ಭೇಟಿ ನೀಡಿದರು. ಚಿತ್ರಕೂಟವನ್ನು ನೋಡಿ ತುಳಸಿದಾಸರ ದೋಹೆ (ದ್ವಿಪದಿ)ಗಳಿಗೆ ಹೊಸ ಅರ್ಥವನ್ನು ನೀಡಿದರು. ಇದಕ್ಕೆ ಅವರ ಸ್ವಂತ ಅನುಭವವೇ ಕಾರಣ. ಹಾಗೆಯೇ ಮಥುರೆ ಬೃಂದಾವನದಲ್ಲೂ ಪಾರಮಾರ್ಥಿಕ ಅನುಭವವನ್ನು ಪಡೆದರು.

'ಉಪನಿಷದ್ ರಹಸ್ಯ' ಎಂಬ ಗ್ರಂಥ ರಚನೆಯ ಬಳಿಕ ಬಹಳ ವರ್ಷಗಳಿಂದ ಮಹಾರಾಷ್ಟ್ರದ ಸಂತಸಾಹಿತ್ಯವನ್ನು ಅಧ್ಯಯನ ಮಾಡಿದ್ದರಿಂದ ಐದು ಗ್ರಂಥಗಳನ್ನು ಪ್ರಕಟಿಸಿದರು. 'ಜ್ಞಾನೇಶ್ವರ ವಚನಾಮೃತ', 'ಸಂತ ವಚನಾಮೃತ', 'ತುಕಾರಾಮ ವಚನಾಮೃತ', 'ರಾಮದಾಸ ವಚನಾಮೃತ' ಮತ್ತು ಇತ್ತೀಚೆಗೆ ಪ್ರಕಟಗೊಂಡ 'ಏಕನಾಥ ವಚನಾಮೃತ' ಮೊದಲಿನ ನಾಲ್ಕು ಗ್ರಂಥಗಳು ೧೯೨೭ರಲ್ಲಿ, ಐದನೆಯದು ೧೯೫೫ರಲ್ಲಿ ಪ್ರಕಟಗೊಂಡಿತು. ಒಂದರ್ಥದಲ್ಲಿ ಈ ಗ್ರಂಥಗಳು ಮಹಾರಾಷ್ಟ್ರದ ಧಾರ್ಮಿಕ ಸಾಹಿತ್ಯದ ಸಂಪೂರ್ಣ ನಿಷ್ಕರ್ಷೆ ಎನ್ನಲಡ್ಡಿಯಿಲ್ಲ.

ಮೊದಲನೆಯ ಗ್ರಂಥದಲ್ಲಿ ಜ್ಞಾನೇಶ್ವರನ ಸರ್ವಾಂಗೀಣ ಪಾರಮಾರ್ಥಿಕ ಬೋಧನೆ ಹೇಗಿತ್ತು ಎನ್ನುವುದಿದೆ. ಎರಡನೆಯದರಲ್ಲಿ ಮೂರು ಭಾಗ ಮಾಡಲಾಗಿದೆ. ನಿವೃತ್ತಿ, ಜ್ಞಾನದೇವ, ಸೋಪಾನ, ಮುಕ್ತಾಬಾಯಿ ಮತ್ತು ಚಾಂಗದೇವರ ಅಭಂಗಗಳ ಸಾರಾಂಶವಿದೆ; ಎರಡರಲ್ಲಿ

ನಾಮದೇವ ಹಾಗೂ ತತ್ಕಾಲದ ಸಂತ ಕವಿಗಳ ಆಯ್ದು ಅಭಂಗಗಳ ಪಾರಮಾರ್ಥ ರಹಸ್ಯ ಹಾಗೂ ಸಂತರ ವ್ಯವಸಾಯಗಳ ವಿವರಣೆಯಿದೆ, ಮೂರನೆಯದರಲ್ಲಿ ಭಾನುದಾಸ, ಜನಾರ್ಧನಸ್ವಾಮಿ, ಏಕನಾಥರ ಅಭಂಗಗಳ ಪರಮಾರ್ಥ ರಹಸ್ಯವನ್ನು ಹೇಳಲಾಗಿದೆ. ಆಧ್ಯಾತ್ಮ ಗ್ರಂಥಮಾಲೆಯ ಮೂರನೇ ಗ್ರಂಥದಲ್ಲಿ ತುಕಾರಾಮ ಚರಿತ್ರೆ, ಆಧ್ಯಾತ್ಮ ಉಪದೇಶವಿದೆ. ಕೊನೆಯ ನಾಲ್ಕನೆ ಗ್ರಂಥದಲ್ಲಿ ರಾಮದಾಸರ ದಾಸಬೋಧೆ ಹಾಗೂ ಇತರ ಸಂಕೀರ್ಣ ಗ್ರಂಥಗಳ ಸಹಾಯದಿಂದ ಅವರ ಪಾರಮಾರ್ಥಿಕ ವ್ಯವಹಾರಿಕ ಬೋಧನೆಯ ವಿವರವಿದೆ. 'ಏಕನಾಥ ವಚನಾಮೃತ' ಅವರ ಪ್ರಮುಖ ಗ್ರಂಥಗಳ ಪಾರಮಾರ್ಥಿಕ ವಿವರಣೆಯಿದೆ.

೧೯೨೭ರಲ್ಲೇ ಗುರುದೇವ ರಾನಡೆ ಹಾಗೂ ಡಾ. ಬೆಲವಲ್ಕರ್ ಇಬ್ಬರೂ ಸೇರಿ 'ದಿ ಕ್ರಿಯೆಟಿವ್ ಪಿರಿಯಡ್' ಉತ್ಪಾದಕ ಕಾಲಘಟ್ಟ ಎಂಬ ಗ್ರಂಥವನ್ನು ರಚಿಸಿದರು. ವೇದ ಹಾಗು ಉಪನಿಷತ್ತಿನ ಬಗೆಗೆ ಬೇರೆ-ಬೇರೆ ಆಚಾರ್ಯರ ಭಾಷ್ಯ ಗ್ರಂಥ ಹಾಗೂ ಪಾಶ್ಚಾತ್ಯ ವಿದ್ವಾಂಸರ ಟೀಕಾತ್ಮಕ ಬರವಣಿಗೆಯ ಪರಿಶೀಲನೆಯನ್ನು ಮಾಡಲಾಗಿದೆ. ಇದು ಅವರ ಯೋಜನೆಯ ಎರಡನೆಯ ಕುಸುಮ. ಈ ರೀತಿ ಈ ಗ್ರಂಥದಲ್ಲಿ ವೇದ-ಬ್ರಾಹ್ಮಣ-ಉಪನಿಷತ್ ಕಾಲದ ವಿಚಾರ ಮತ್ತು ಕಲ್ಪನೆ ಹಾಗೂ ಉಪನಿಷತ್ತಿನ ಸಾಮಾನ್ಯ ಮೌಲ್ಯಮಾಪನವನ್ನು ಬೇಲವಲ್ಕರ್‌ರು ಬರೆದರೆ; ರಾನಡೆಯವರು ಉಪನಿಷತ್ತಿನ ವಿವೇಚನೆಯನ್ನು ಕೈಕೊಂಡಿದ್ದಾರೆ. ಇದರಲ್ಲಿ ಕಾಲಗಣನೆ ಮತ್ತು ತರ್ಕಶಾಸ್ತ್ರದ ಸಮಾವೇಶವಿದೆ.

ಮುಂದೆ ಪ್ರತಿವರ್ಷ ಜುಲೈ ಆರಂಭಕ್ಕೆ ಅಲಹಾಬಾದಕ್ಕೆ ಹೋಗುತ್ತಿದ್ದರು. ರಜೆ ಆರಂಭವಾದ ಬಳಿಕ ನಿಂಬಾಳಕ್ಕೆ ಮರಳುತ್ತಿದ್ದರು. ಹೀಗೆ ಆ ಕ್ರಮ ೧೮ ವರ್ಷಗಳ ಕಾಲ ಮುಂದುವರೆಯಿತು. ಅಧ್ಯಾಪನದ ಆರಂಭಕ್ಕೆ ಅವರು ತತ್ವಜ್ಞಾನದ ಬೇರೆ ಬೇರೆ ಶಾಖೆಗಳನ್ನು ಬೋಧಿಸುತ್ತಿದ್ದರು. ನೀತಿಶಾಸ್ತ್ರ, ಮಾನಶ್ಶಾಸ್ತ್ರ, ಧರ್ಮಶಾಸ್ತ್ರ, ಪರತತ್ವಶಾಸ್ತ್ರ ಈ ಶಾಖೆಗಳ ಆಳವಾದ ಅಧ್ಯಯನವನ್ನು ಅವರು ಕೈಕೊಂಡರು. ಇದರಿಂದಾಗಿ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆಯಿತು.

೧೯೨೮ರಲ್ಲಿ ನಾಗಪುರ ಯುನಿವರ್ಸಿಟಿಯವರು ಭಗವದ್ಗೀತೆಯ ಮೇಲೆ ಉಪನ್ಯಾಸ ನೀಡಲು ಆಮಂತ್ರಿಸಿದರು. ಅಲ್ಲಿ ಪರ-ತತ್ವಜ್ಞಾನದಲ್ಲಿಯ ವಿರೋಧಾಭಾಸ, ನಿಯತಕರ್ತವ್ಯವಾದ, ಆತ್ಮ ಸಾಕ್ಷಾತ್ಕಾರದಲ್ಲಿಯ ಭವ್ಯತೆ ಎಂಬ ಮೂರು ಉಪನ್ಯಾಸಗಳನ್ನು ನೀಡಿದರು. ಇದನ್ನು ನಾಗಪುರ ವಿವಿಯವರು 'Gita as science of God Realization' ಎಂದು ಪ್ರಕಟಿಸಿತು. ಮುಂದೆ ಒಂದೆರಡು ವರ್ಷಗಳಲ್ಲೇ 'Vedanta as the culmination of Indian thought' ಎಂಬ ವಿಷಯದ ಮೇಲೆ ಕಲ್ಕತ್ತೆ ವಿವಿ ಯಲ್ಲಿ ಉಪನ್ಯಾಸ ನೀಡಿದರು. ವೇದಾಂತವು ದೇವರ ಸಾಕ್ಷಾತ್ಕರವನ್ನು ಪ್ರತಿಪಾದಿಸಿದಿದ್ದರೆ ಭವಿಷ್ಯ ಕಾಲದಲ್ಲಿ ಅದಕ್ಕೆ ಯಾವ ಸ್ಥಾನವೂ ಇರಲಾರದು

ಎಂಬ ವಿಷಯವನ್ನು ಬರೆದು ಮುಗಿಸಿದರು. ಇತ್ತೀಚೆಗೆ ಈ ಗ್ರಂಥವನ್ನು ಭಾರತೀಯ ವಿದ್ಯಾಭವನವು ಪ್ರಕಟಿಸಿದೆ.

೧೯೫೦ರಲ್ಲಿ ಸಾವಂತವಾಡಿ ಸಂಸ್ಥಾನದ ಶಿವಡಾಂವ ಕ್ಷೇತ್ರವು ಪ್ರಕಟಿಸಿದ ಗ್ರಂಥಕ್ಕೆ ರಾನಡೆಯವರ ಪ್ರಸ್ತಾವನೆಯಿದೆ. ೧೯೫೫ರಲ್ಲಿ 'ಮಹಾರಾಷ್ಟ್ರ ಸಂತರ ಆತ್ಮಸಾಕ್ಷಾತ್ಕಾರ' ಎಂಬ ಬೃಹತ್ ಗ್ರಂಥವನ್ನು ರೂಪಿಸಿದರು. ೧೯೦೮ರಿಂದಲೇ ಇದರ ಮಾರ್ಗ ಸಿದ್ಧತೆಯನ್ನು ನಡೆಸಿದ್ದರು. ಈ ಹಿಂದೆ ಮೂಲ ಇಂಗ್ಲಿಷನಲ್ಲಿ ಬರೆದ ನಾಲ್ಕೂ ಗ್ರಂಥಗಳ ಮರಾಠಿ ರೂಪವಿದು. ಇದರ ಪ್ರಸ್ತಾವನೆಯಲ್ಲಿ ರಾನಡೆಯವರು 'ಮನದ ಸಪ್ತಶಕ್ತಿಯು ಜಾಗೃತಗೊಂಡಾಗ, ಆ ಕಾಲಕ್ಕಾಗುವ ದೇವರ ಜ್ಞಾನವನ್ನು ಗ್ರಹಿಸುವ ಉಚ್ಚ ಮನೋವೃತ್ತಿಯ ಶಾಸ್ತ್ರವೇ ಸಾಕ್ಷಾತ್ಕಾರ ಶಾಸ್ತ್ರ' ಎಂದಿದ್ದಾರೆ. ಈ ಸ್ಥಿತಿಯಲ್ಲಿದ್ದಾಗ ಭಕ್ತನು ದೇವರ ಚಿಂತನೆಯಲ್ಲಿ ಮುಳುಗಿರುತ್ತಾನೆ. ಎಲ್ಲ ದೇಶದ, ಎಲ್ಲ ಕಾಲದ ಸಾಕ್ಷಾತ್ಕಾರಿ ಪುರುಷರು ಶಾಶ್ವತ ದಿವ್ಯಸಮಾಜದ ಘಟಕಗಳಾಗಿದ್ದಾರೆ. ಇವರಲ್ಲಿ ಯಾವುದೇ ದೇಶ, ಜಾತಿ, ಭೇದ–ಭಾವವಿಲ್ಲ. ಅವರ ಶಾಶ್ವತ, ಅನಂತವಾದ ಪಾರಮಾರ್ಥಿಕ ಅನುಭವವನ್ನು ಸ್ಥಳಕಾಲದಲ್ಲಿ ಬಂಧಿಸಿಡುವುದು ಸಾಧ್ಯವಿಲ್ಲ ಎಂದೂ ಅವರು ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅಂಥ ಸಾಕ್ಷಾತ್ಕಾರಿ ಪುರುಷರ ಹೆಸರನ್ನು ನೀಡಲಾಗಿದೆ. ಜ್ಞಾನೇಶ್ವರ–ಪ್ಲಾಟಿನಸ್, ಆಗಸ್ಟಾಯಿನ್; ಮುಕ್ತಾಬಾಯಿ–ಜನಾಬಾಯಿ–ಕಾನ್ಹೋಪಾತ್ರದಲ್ಲಿ ಜ್ಯೂಲಿಯಸ್, ಕೆಥೆರಾಯಿನ್, ಸಂತ ತೆರೆಸಾರ ಹೋಲಿಕೆಯಿದೆ. ಸಂತ ಚೋಖಾಮೇಳಾ–ಸಂತ ಜೋಹಮೆ, ತುಕಾರಾಮ–ಸುಸೋ, ಸಂತ ಬನಿಯನ್, ಸಂತ ಡಾಯೋನಿಸಿಯಂ; ರಾಮದಾಸ–ಪಾಯಥಾಗೋರಸ್, ಇಗ್ನೇಶಿಯಸ್, ರೂಯಿಸೆಸೆಬ್ರೆಕ್ ಇವರನ್ನು ಹೋಲಿಕೆ ಮಾಡಿ, ಅವರಲ್ಲಿರುವ ಸಾಮ್ಯವನ್ನು ತೋರಿಸಿದ್ದಾರೆ.

ಈ ಸಂತರ ಹೋಲಿಕೆಯಿಂದಾಗಿ ಗುರುದೇವ ರಾನಡೆಯವರ ಅಧ್ಯಯನ ಅದೆಷ್ಟು ವ್ಯಾಪಕವಾಗಿತ್ತು ಎನ್ನುವುದು ಅರಿವಿಗೆ ಬರುತ್ತದೆ. ದೈವೀಜ್ಞಾನವು ಇಂದ್ರಿಯ ಮನಸ್ಸು ಮತ್ತು ಬುದ್ಧಿಗೆ ಆಗಲಾರದು. ಅದೇ ಕೇವಲ ಪ್ರತಿಭಾಶಕ್ತಿಯಿಂದಲೇ ಆಗುವುದು ಸಾಧ್ಯ ಎಂಬ ಮಹತ್ವದ ಮಾತೂ ಹೇಳಿದ್ದಾರೆ. ಇಂಥ ಪ್ರತಿಭಾಶಕ್ತಿಯ ಅನುಭವಕ್ಕೆ ಬರುವ ಅತೀಂದ್ರಿಯ ಜ್ಞಾನವೆಂದರೇ ಸಾಕ್ಷಾತ್ಕಾರ. ಸಾಕ್ಷಾತ್ಕಾರಿ ಸದ್ಗುರುವಿನಿಂದ ಲಭಿಸಿದ ಸಬೀಜನಾಮವು ಅಖಂಡ ಸ್ಮರಣೆಯಿಂದಾಗಿ ದೇಹದಲ್ಲಿ ತಲೆದೋರುವ ದೇವರ ಶಕ್ತಿಯ ದಿವ್ಯಲಹರಿಯು ಮಿದುಳಿನಲ್ಲಿಯ ವಿವಿಧ ಜ್ಞಾನಕೇಂದ್ರಗಳಿಗೆ ತಲುಪಿದ್ದರಿಂದ ದೀಪ, ನಾದ, ಬಣ್ಣ, ಗಂಧ ಮತ್ತು ರಸ ಮುಂತಾದ ವಿವಿಧ ಪ್ರಕಾರದ ಅನುಭವವಾಗುತ್ತದೆ. ಇಂಥ ಸ್ವಾನುಭಾವದಿಂದ ಕೂಡಿದ ಸಿದ್ಧಾಂತವನ್ನು ಗುರುದೇವ ರಾನಡೆಯವರು ಮಂಡಿಸಿದ್ದಾರೆ. ಪಾರಮಾರ್ಥಿಕ ಅನುಭವ ಸತ್ಯವು ಅತೀಂದ್ರಿಯ, ಅಂತಃಸ್ಫೂರ್ತಿ, ಏಕರೂಪತೆ, ಸಾತತ್ಯ, ಆನಂದವನ್ನು ಅವಲಂಬಿಸಿರುತ್ತದೆ.

■■

# ಪರಮಾರ್ಥ ಪ್ರಸಾರ

ಪಾರಮಾರ್ಥಿಕ ದೃಷ್ಟಿಯಿಂದ ಶ್ರೀ ಭಾವೂ ಸಾಹೇಬ ಮಹಾರಾಜರ ಎಲ್ಲ ಭಕ್ತರಲ್ಲಿ ಶ್ರೇಷ್ಠರೆನಿಸಿದ ಶ್ರೀ ಅಂಬುರಾವ ಮಹಾರಾಜರು ಡಿಸೆಂಬರ ೧೯೩೩ರಲ್ಲಿ 'ಪೌಷ್ಯಶುಕ್ಲ' ೬ ರಂದು ದೈವಾಧಿನರಾದರು. ಗುರುದೇವ ರಾನಡೆಯವರು ೨೭ ಡಿಶೆಂಬರ್ ೧೯೩೩ರಲ್ಲಿ ಶ್ರೀ ಕಾಕಾ ಕಾರಖಾನಿಸರಿಗೆ ಬರೆದ ಪತ್ರದ ಸಾರಾಂಶ–

೧೯೧೪ರಲ್ಲಿ ಶ್ರೀ ಭಾವೂಸಾಹೇಬ ಉಮದಿಕರರು ನಿರ್ಯಾಣ ಹೊಂದಿದ ಬಳಿಕ ಶ್ರೀ ಬಾಬಾರವರೇ ಎಲ್ಲರಿಗೂ ಆಧಾರವಾಗಿದ್ದರು. ಸುಮಾರು ೨೦ ವರ್ಷಗಳ ಕಾಲ ಶಿಷ್ಯಂದಿರಿಗೆ ಅವರು ಮಾರ್ಗದರ್ಶನ ಮಾಡಿದರು. ಹೊಸಬರಿಗೆ ನಾಮೋಪದೇಶ ಮಾಡಿದರು. ಪಾರಮಾರ್ಥಿಕ ಉಪಕಾರ ಮಾಡಿದರು. ಶಿಷ್ಯರಲ್ಲಿ ಸುಶಿಕ್ಷಿತರ ಸಂಖ್ಯೆಯೂ ಸಾಕಷ್ಟಿದೆ. ಅವರಿಬ್ಬರೂ ಮಹಾತ್ಮರು ಒಂದೇ ರೂಪ ಹೊಂದಿರುವುದರಿಂದ ಸ್ವತಃ ಸದ್ಗುರುಗಳೇ ಮಾರ್ಗದರ್ಶನ ಮಾಡಿದಂತಾಗುತ್ತಿತ್ತು. ಸದ್ಗುರುವಿನಂತೆಯೇ ಶ್ರೀ ಬಾಬಾರವರು 'ತ್ರಿಕಾಲ ಸಾಧನೆ'ಯ ಉಪದೇಶವನ್ನು ಮಾಡಿದರು. ಪರಮಾರ್ಥ ಸಾಧಕನ ಜೀವನವು ನಾಮಸ್ಮರಣೆ ಮತ್ತು ನೀತಿ ಈ ಎರಡೇ ಧ್ರುವಬಿಂದುವಿನಲ್ಲೇ ಕೇಂದ್ರಿತಗೊಂಡಿರಬೇಕು ಎಂದು ಶ್ರೀ ಬಾಬಾ ಹೇಳಿದರು. ಕೊನೆಯ ಕ್ಷಣದ ವರೆಗೂ ಶ್ರೀ ಬಾಬಾ ಇದನ್ನೇ ಮಾಡಿದ್ದು ಅವರ ವೈಶಿಷ್ಟ್ಯವಾಗಿತ್ತು.

ಶ್ರೀ ಸದ್ಗುರು ಹಾಗೂ ಶ್ರೀ ಬಾಬಾ ಇವರಿಬ್ಬರ ಜೀವನ ಮತ್ತು ಮೃತ್ಯುವು ದೇವರೊಂದಿಗೆ ಏಕರೂಪ ಹೊಂದಿದ ಭವ್ಯ ಉದಾಹರಣೆಯಾಗಿದೆ. ಶ್ರೀ ಮಹಾರಾಜರ ದಹನಭೂಮಿಯ ಹತ್ತಿರವೇ ಶ್ರೀ ಬಾಬಾರವರ ದಹನ ಕ್ರಿಯೆ ನಡೆದದ್ದು ಯಥಾಯೋಗ್ಯವಾಗಿದೆ– ಈ ಪತ್ರದ ಮೇಲಿಂದ ಗುರುದೇವ ರಾನಡೆಯವರಿಗೂ ಶ್ರೀ ಬಾಬಾರವರ ಮೇಲೆ ಅದೆಷ್ಟು ಗೌರವವಿತ್ತು ಎನ್ನುವುದು ತಿಳಿದುಯ ಬರುತ್ತದೆ. ೧೯೨೦ರಲ್ಲಿ ನಾಮವನ್ನು ನೀಡುವಂತೆ ಶ್ರೀ ಬಾಬಾರವರು ರಾನಡೆಯವರಿಗೆ ಹೇಳಿದ್ದರು. ಆದರೆ ಅವರು ೧೯೩೪ರ ವರೆಗೆ ನೀಡಲಿಲ್ಲ. ಶ್ರೀ ಬಾಬಾರವರ ನಿರ್ಯಾಣದ ಬಳಿಕ ಮಾತ್ರ ಅನಿವಾರ್ಯವಾಗಿ ಕೆಲವೇ ಮುಮುಕ್ಷು (ಭಕ್ತ)ಗಳಿಗೆ 'ನಾಮ' ನೀಡಲು ಶುರು ಮಾಡಿದರು. ಹೀಗೆ ಶ್ರೀ ನಿಂಬರಗಿ ಮಹಾರಾಜರಿಂದ ಬೆಳಕು ನೀಡುತ್ತ ಬಂದ ಸಬೀಜನಾಮದ ಅಲೌಕಿಕ ಜ್ಯೋತಿಯನ್ನು ಗುರುದೇವ ರಾನಡೆಯವರು ಆಮರಣಾಂತ ಉರಿಸುತ್ತಲಿದ್ದರು. ಅನಂತರ ಇದನ್ನು ಮುಂದುವರಿಸುವವರು ಯಾರೂ ಇಲ್ಲೆಂದು ಖೇದವೆನಿಸುತ್ತದೆ.

ಗುರುದೇವ ರಾನಡೆಯವರ ಇಂಥ ಅಧಿಕಾರಯುತ ಗ್ರಂಥ ಲೇಖನದಿಂದ ಹಾಗೂ ಅಲಹಾಬಾದ ವಿವಿಯಲ್ಲಿ ನೀಡಿದ ಪರಿಣಾಮಕಾರಿಯಾದ ಬೋಧನೆಯಿಂದ ಭಾರತೀಯ

ತತ್ವಜ್ಞಾನದ ಕ್ಷೇತ್ರದಲ್ಲಿ ಗುರುದೇವರಿಗೆ ಉನ್ನತ ಸ್ಥಾನ ಪ್ರಾಪ್ತವಾಯಿತು. ಹೀಗಾಗಿ ೧೯೩೦ರಲ್ಲಿ ಜರುಗಿದ ಅಖಿಲ ಭಾರತೀಯ ತತ್ವಜ್ಞಾನ ಸಮ್ಮೇಳನದ ೧೩ನೇ ಅಧಿವೇಶನಕ್ಕೆ ಅವರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಅವರಲ್ಲಿ 'ಆತ್ಮತತ್ವದ ತತ್ವಜ್ಞಾನ' ಎಂಬ ವಿಷಯದ ಬಗೆಗೆ ಮಾತಾಡಿದರು. ಪದಾರ್ಥ ವಿಜ್ಞಾನಶಾಸ್ತ್ರ, ಜೀವನ ಶಾಸ್ತ್ರ ಮತ್ತು ಮಜ್ಜಾತಂತು ಶಾಸ್ತ್ರ ಈ ಮೂರೂ ಶಾಸ್ತ್ರಗಳ ದೃಷ್ಟಿಕೋನದಿಂದ ಪಾರಮಾರ್ಥಿಕ ಅನುಭವದ ತತ್ವಜ್ಞಾನದ ಸಮರ್ಥನೆಯನ್ನು ಮಾಡಿ, ತಮ್ಮ ಪಾರಮಾರ್ಥಿಕ ವಿಚಾರಗಳನ್ನು ಶಾಸ್ತ್ರಶುದ್ಧ ರೀತಿಯಲ್ಲಿ ಮಂಡಿಸಿ ತತ್ವಜ್ಞಾನದೊಳಗಿನ ಆತ್ಮಜ್ಞಾನದ ತ್ರಿಕಾಲಾಬಾಧಿತ ಮಹತ್ವವನ್ನು ಹೇಳಿದರು.

ಪ್ರತಿವರ್ಷ ಬೇಸಗೆಯ ರಜೆಯ ಕಾಲಕ್ಕೆ ರಾನಡೆಯವರು ನಿಂಬಾಳಕ್ಕೆ ಬಂದಾಗ ಅವರ ಸಹವಾಸದಲ್ಲಿ ಭಕ್ತಿಯಲ್ಲಿ ಕಾಲಕಳೆಯಲು ಸಾಧಕರು ಮುಂದಾಗುತ್ತಿದ್ದರು. ಆಗಾಗ ರಾನಡೆಯವರು ಪರಮಾರ್ಥದ ಬಗೆಗಿನ ಸದ್ಗುರುವಿನ ಪತ್ರಗಳನ್ನು ಓದುತ್ತಿದ್ದರು. ಆಗ ಅವರಿಗೇನಾದರೂ ಹೊಸ ವಿಚಾರ ಅರಿವಿಗೆ ಬಂದರೆ ಹೇಳುತ್ತಿದ್ದರು. ನಾನು ಮೊಟ್ಟಮೊದಲು ನಿಂಬಾಳಕ್ಕೆ ಹೋದಾಗ ನಡೆದ ಘಟನೆ ಹೀಗಿದೆ:

೧ ಜೂನ ೧೯೩೪ರಂದು ಮನೋಹರ ದೇಶಪಾಂಡೆಯವರ ಜೊತೆಗೆ ನಾನು ನಿಂಬಾಳಕ್ಕೆ ಹೋದೆ. ಗುರುದೇವರ ದರ್ಶನಕ್ಕಾಗಿ ಹೋದೆ. ಸ್ಟೇಶನ್ನಿನಲ್ಲಿ ಇಳಿದು ಗುರುದೇವರ ನಿವಾಸಸ್ಥಾನಕ್ಕೆ ಹೊರಟಾಗ ದಾರಿಯಲ್ಲಿ 'ನಾರಾಯಣ ನಾರಾಯಣ' ಎಂಬ ಘೋಷ ಕೇಳಿಬಂತು. ಜನರ ಜಯಘೋಷವನ್ನು ಕೇಳಿ ಕೋಣೆಯಲ್ಲಿದ್ದ ಗುರುದೇವರು ಹೊರಗೆ ಬಂದರು. ಅವರು ವೇದಮಂತ್ರವನ್ನು ಹೇಳುತ್ತ ಜನರಿಗೆ ಅತ್ತರು ಲೇಪಿಸುತ್ತ ನನ್ನ ಬಳಿಗೂ ಬಂದರು. ನನಗೆ ನಿಯಮಿತವಾಗಿ ನಾಮಸಾಧನೆ ಮಾಡುವಂತೆ ಸಲಹೆಯನ್ನು ನೀಡಿದರು.

೧೯೩೫ರಲ್ಲಿ ಗುರುದೇವರು ನೇಮಕ್ಕೆ ಕೂತಾಗ ಮಹಾರಾಜರು ಅವರ ಕೈಗೆ ಚಿನ್ನದ ಕಡಗ ಹಾಕಿದಂತೆ ದೃಷ್ಟಾಂತವಾಯಿತು. ಅದರ ಮೇಲೆ ದೇವರ ಆರು ಹೆಸರು ರಾನಡೆಯವರಿಗೆ ಕಾಣಿಸಿತು. ಇದು ಸದ್ಗುರುವಿನ ಆಜ್ಞೆಯೆಂದು ಭಾವಿಸಿ ರಾನಡೆಯವರು ಆರು ಸಾಧಕರಿಗೆ ನಾಮ ನೀಡಿದರು. ೧೯೨೨ರಲ್ಲಿ ಇಬ್ಬರಿಗೂ ನೀಡಿದ್ದರು. ಅನಂತರ ಮಾತ್ರ ೧೯೩೫ರ ವರೆಗೆ ಯಾರಿಗೂ ನಾಮ ನೀಡಲಿಲ್ಲ. ಅನಂತರ ಬರೇ ಇಬ್ಬರಿಗೆ ಮಾತ್ರ ನೀಡಿದರು. ತುಳಪುಲೆ ಮತ್ತು ಕಾರಖಾನಿಸರನ್ನು ನಾಮದ ಪೋಸ್ಟ್‌ಮನ್ ಎಂದು ನೇಮಿಸಿದರು. ೧೯೩೬, ೧೭ ಜೂನರಂದು ನನಗೂ ನನ್ನ ಧರ್ಮಪತ್ನಿಗೂ ನಾಮ ನೀಡಿದರು. ಪತ್ನಿಯಾದವಳು ಪತಿಯನ್ನು ಗುರುವೆಂದು ಭಾವಿಸಬೇಕು ಎಂದರು. 'ನಾಮ'ವು ಸದ್ಗುರು ನೀಡಿದ 'ಬುತ್ತಿಗಂಟು' ಎಂದು ಭಾವಿಸಬೇಕು. ಪುಣ್ಯದಿಂದ ಲಭಿಸಿದ ಸದ್ಗುರು ನೀಡಿದ ನಾಮವನ್ನು ಭದ್ರವಾಗಿ ಹಿಡಿದುಕೊಂಡು ಸಂರಕ್ಷಿಸಬೇಕು.

ಕೆಲವು ಸಾಧಕರು ಗುರುದೇವ ರಾನಡೆಯವರು ಹೇಳಿದ ಮಾತನ್ನು ಟಿಪ್ಪಣಿ ಮಾಡಿಕೊಂಡು, ಗೈರು ಹಾಜರಿದ್ದ ಸಾಧಕರಿಗೆ ಅನಂತರ ಹೇಳುತ್ತಿದ್ದರು. ಆಗಾಗ ತುಳಪುಳೆಯವರು ನಾಮಸಪ್ತಾಹದ ಉದ್ಬೋಧಕ ವಿಚಾರವನ್ನು ನನಗೆ ಪತ್ರದ ಮೂಲಕ ತಿಳಿಸುತ್ತಿದ್ದರು.

ಅನಂತರ ಜೂನ ೧೯೪೦ರಲ್ಲಿ ನಿಂಬಾಳದಲ್ಲಿ ಏರ್ಪಡಿಸಲಾದ ಶ್ರೀಗುರುದೇವರ ಸಾನಿಧ್ಯದಲ್ಲಿ ನಡೆದ ನಾಮಸಪ್ತಾಹದ ವೃತ್ತಾಂತವನ್ನು ನಿವೇದಿಸುವ ಪತ್ರದ ಕೆಲವು ಮಹತ್ವದ ಸಾಲುಗಳು–

'.....ಈ ಸಲ ಸಪ್ತಾಹದ ಹೊಸ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆ ೮–೩೦ರಿಂದ ೧೧–೩೦ರವರೆಗೆ ಧಾರ್ಮಿಕ ವಾಚನ–ಹಾಡುಗಳನ್ನು ಹೇಳಲಾಗುತ್ತಿತ್ತು. ಉಳಿದವರು ಯಥಾವಕಾಶ ಸಾಧನೆ ಮಾಡುತ್ತಿದ್ದರು. ಬಳಿಕ ಎಂದಿನಂತೆ ಭಜನೆ. ಗುರುದೇವ ರಾಮಭಾವೂ ಉತ್ಸಾಹದಲ್ಲಿದ್ದರು... ನಿಮ್ಮ ನೆನಪಾಯಿತು. ರಾಮರಾವ ಒಂದು ಅಭಂಗವನ್ನು ಹಾಡಿದರು. ಅದರರ್ಥ ಹೀಗಿದೆ– ನನ್ನ ನೆನಪಿನಲ್ಲಿರುವ ಶ್ರಾವಣ–ಮಾಘ ದಲ್ಲಿ ಇಂಚಗೇರಿಗೆ ಬನ್ನಿ, ಭಕ್ತರು ಎಂದು ಭೇಟಿಬಯಸುತ್ತಾರೋ ಎಂಬ ಚಡಪಡಿಕೆ ನನಗಿರುತ್ತದೆ. ಅವರು ಹೊರಟು ಹೋದ ಬಳಿಕ ಹಳಹಳಿಕೆಯಾಗುತ್ತದೆ. ಶ್ರೀ ಬಾಬಾ ಅವರಿಗೆ ಇದೆಲ್ಲ ನೆನಪಾಗಿ ಕಂಬನಿ ತುಂಬಿಬಂತು....ಸಂತರ ಕೃಪೆ ಎಲ್ಲಿ ವರೆಗೆ ಬಣ್ಣಿಸಲಿ. ರಾಮಭಾವೂ ಅವರು ಹೇಳಿದ ಮಹತ್ವ ಕೆಲವು ಸಂಗತಿಗಳು ಹೀಗಿವೆ– 'ಸಂಶಯ ರಹಿತ ನಾಮಸ್ಮರಣೆಯನ್ನು ಮಾಡಿ' ಸಂತರ ಭಕ್ತಿ ಮಾಡಿ. ಅವರ ಸಾಮರ್ಥ್ಯ ಕರಗತ ಮಾಡಿಕೊಳ್ಳಿ, ಸದ್ಗುರುವಿನ ಕೃಪೆಯಿಂದಲೇ ಅನುಭವವಾಗುತ್ತದೆ. ಸದ್ಗುಣಕ್ಕೆ ಪಾರಮಾರ್ಥ ಬೇಕೇ ಬೇಕು.

**ಕಾಕಾ ತುಳಪುಳೆ'**

೧೯೪೨ರಲ್ಲಿ ನಿಂಬಾಳದಲ್ಲಿ ಗುರುದೇವರು ವಾಸಿಸುತ್ತಿದ್ದ ಹಳೆಯ ಮನೆಯಲ್ಲಿ ನಾಮ ಸಪ್ತಾಹ ಜರುಗಿತು. ಬೆಳಗಿನ ನೇಮ ಎದುರಿನ ಚೌಕದಲ್ಲಿ ಜರುಗುತ್ತಿತ್ತು. ನೇಮಕ್ಕೆ ಮೊದಲು ಚಹಾ, ಬಳಿಕ ಭಜನೆ, ಅನಂತರ ಊಟ. ಸಾಯಂಕಾಲ ಗುರುದೇವರು ಸತ್ಸಂಗಕ್ಕಾಗಿ ಬಂದ ಭಕ್ತರನ್ನು ಕರೆಸಿಕೊಳ್ಳುತ್ತಿದ್ದರು. ಮಹಾರಾಜರ ಪತ್ರ ಅಥವಾ ಪರಮಾರ್ಥದ ಬಗೆಗೆ ಇತರ ವಾಚನ. ಗುರುದೇವರು ಆಗಾಗ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದರು. ದೇವರು ಮಹಾರಾಜರ ಕೈಯಲ್ಲಿರುವುದರಿಂದ ಎಲ್ಲವೂ ನಿಯಮಿತವಾಗಿ ನಡೆಯುತ್ತಿತ್ತು. ನಾನು ದೇವರ ಆಧೀನ. ಹೀಗಾಗಿ ಎಲ್ಲವೂ ಅವನ ಇಚ್ಛೆಯಂತೆ ನಡೆಯುತ್ತಿದೆ. ನಿಕಟವರ್ತಿಗಳಿಗೆ, ನಿಷ್ಠಾವಂತರಿಗೆ ಮಾತ್ರ ರಾನಡೆಯವರ ಜೀವನ ವಿಧಾನದ ಸತ್ಯ ಅರಿವಾಗುತ್ತಿತ್ತು.

ಇಂಥ ಪತ್ರಗಳ ಸಹಾಯದಿಂದ ನಿಂಬಾಳದಲ್ಲಿ ಜರುಗುವ ಪರಮಾರ್ಥಕ್ಕೆ ಪೋಷಕವಾದ ವಾತಾವರಣದ ಮತ್ತು ಪವಿತ್ರ ವಿಚಾರ ಪರಂಪರೆಯ ಸಹಜ ಕಲ್ಪನೆ ಬರಬಹುದಾಗಿದೆ.

ಗುರುದೇವ ರಾನಡೆಯವರು ಅಲಹಾಬಾದನಲ್ಲಿ ೧೯೪೦ರ ವರೆಗೆ ೨ನೇ ಬೆಲಿರೋಡ್ ನಲ್ಲಿರುವ ಬಂಗಲೆಯಲ್ಲಿ ವಾಸವಾಗಿದ್ದರು. ಸದ್ಗುರು ನೀಡಿದ ನಾಮ ಸ್ಮರಣೆಯನ್ನು ಮಾಡುವುದು ಅವರ ನಿತ್ಯಕರ್ಮಗಳಲ್ಲಿ ಒಂದಾಗಿತ್ತು. ಮನೆಯಲ್ಲಿರಲಿ, ಹೊರಗಿರಲಿ ಸತತ ನೇಮವನ್ನು ಕೈಕೊಳ್ಳುತ್ತಿದ್ದರು. ಹಲವು ವರ್ಷ ರಾನಡೆಯವರ ಜೊತೆಯಲ್ಲಿದ್ದುದರಿಂದ ಅವರ ಹಲವು ನೇಮಗಳಲ್ಲಿ ಭಾಗಿಯಾಗುವ ಅವಕಾಶ ಸಿಕ್ಕಿತ್ತು. ಅವರ ಒಬ್ಬ ಪ್ರಾಧ್ಯಾಪಕ ಗೆಳೆಯನು ಅವರು ಮನೆಯೆದುರು ಕಾರಿನಲ್ಲಿ ಬಹಳ ಹೊತ್ತು ಕೂತಿರುವುದು ಕಂಡು, ಕೋಣೆಯಲ್ಲಿ ಧ್ಯಾನ ಮಾಡುವುದು ಬಿಟ್ಟು ಕಾರಿನಲ್ಲಿ ಕೂತು ಏಕೆ ನೇಮ ಮಾಡುತ್ತೀರಿ? ಎಂದು ಪ್ರಶ್ನಿಸಿದನು. ಗುರುದೇವ ರಾನಡೆಯವರು ನೀಡಿದ ಉತ್ತರ ಮಾರ್ಮಿಕವಾಗಿತ್ತು. 'It is metamarphosed cave moving any where I like' ಇದು ನನ್ನನ್ನು ಬೇಕಾದಲ್ಲಿದೆ ಕರೆದೊಯ್ಯುವ ಒಂದು ರೂಪಾಂತರಿತ ಗುಹೆಯಾಗಿದೆ. ಈ ರೀತಿ ಅವರು ಅಲಹಾಬಾದ್‌ದಲ್ಲಿ ಬೇರೆ ಬೇರೆ ಪ್ರಶಾಂತ ತಾಣಗಳಲ್ಲಿ ಇಂಥ ರೂಪಾಂತರಿತ ಗುಹೆಯಲ್ಲಿ ಸುಮಾರು ೧೦-೧೨ ವರ್ಷಗಳ ಕಾಲ ಸಾಧನೆ ಯನ್ನು  ಮಾಡಿದರು. ಅವರು ನಾಮಸಾಧನೆ ಮಾಡಿದ ಇಂಥದೇ ಒಂದು ಪಾವನ ಸ್ಥಳದಲ್ಲಿ ಒಂದು ಹರಿಜನರ ಒಂದು ಭವ್ಯ ವಸತಿ ನಿಲಯ ಮತ್ತು ಶಾಲೆ ಎತ್ತಿರುವು ದನ್ನು ಕಾಣಬಹುದಾಗಿದೆ. ಗಂಗೆಯ ದಡದಲ್ಲಿರುವ ದ್ರೌಪದಿ ಘಾಟದ ಸಾನಿಧ್ಯದಲ್ಲಿ ಹಲವು ವರ್ಷ ಸಾಧನೆ ಮಾಡಿ ಶ್ರೇಷ್ಠ ದರ್ಜೆಯ ಪಾರಮಾರ್ಥಿಕ ಅನುಭವವನ್ನು ಪಡೆದ ಇಂಥದೇ ಒಂದು ಸ್ಥಳವನ್ನು ಅವರು ೧೯೩೮-೩೯ರಲ್ಲಿ ಖರೀದಿಸಿದರು. ಅಂಥ ಪುನೀತ ಜಾಗದಲ್ಲಿ ಅವರು ೧೯೪೦ರಲ್ಲಿ ಒಂದು ಬಂಗಲೆಯನ್ನು ಕಟ್ಟಿ ಅನಂತರ ಅಲ್ಲೇ ವಾಸ್ತವ್ಯ ಮಾಡಲು ಹೋದರು. ೩೧ ಡಿಸೆಂಬರ್ ೧೯೪೦ರಲ್ಲಿ ಗುರುದೇವ ರಾನಡೆಯವರಿಗೊಬ್ಬ ಮಗ ಜನಿಸಿದ. ತನ್ನ ಮಗನಿಗೆ ಶ್ರೀ ಭಾವೂ ಸಾಹೇಬ ಮಹಾರಾಜರು ಊಟ ತಿನ್ನಿಸುವ ದೃಶ್ಯ ಅವರಿಗೆ ಕನಸಿನಲ್ಲಿ ಕಾಣಿಸಿತು. ಹೀಗಾಗಿ ಯಾರೋ ಮಹಾಪುರುಷ ತನ್ನ ಮಗನ ರೂಪದಲ್ಲಿ ಜನ್ಮ ತಾಳಿದ್ದಾನೆ ಎಂದವರು ಭಾವಿಸಿದರು. ಶ್ರೀ ಅಂಬುರಾವ ಬಾಬಾರವರ ಪೌಷ್ಯಸಪ್ತಾಹ, ಶ್ರೀ ಭಾವೂ ಸಾಹೇಬ ಮಹಾರಾಜರ ಮಾಘ ಸಪ್ತಾಹ ಮತ್ತು ಶ್ರೀ ನಿಂಬರಗಿ ಮಹಾರಾಜರ ಚೈತ್ರ ಸಪ್ತಾಹ-ಹೀಗೆ ಮೂರು 'ನಾಮಸಪ್ತಾಹ' ಪೂರ್ಣಗೊಳ್ಳುವವರೆಗೆ ನಾಲ್ಕು ತಿಂಗಳು ಆನಂದದಲ್ಲಿ ಬೆಳೆಯುತ್ತಿದ್ದ ಗುರುದೇವ ರಾನಡೆಯವರ ಏಕೈಕ ಮಗ ದುರ್ದೈವದಿಂದ ೧೯೪೧ರ ಚೈತ್ರವದ್ಯ ಪ್ರತಿಪದೆಯ ದಿನ ದೈವಾಧೀನನಾದ. ಮಾತಾಪಿತರನ್ನು ದುಃಖದ ಕಡಲಲ್ಲಿ ನೂಕಿ ಆ ಆರ್ಭಕನ ತೇಜಸ್ವಿ ಜೀವನ ಜ್ಯೋತಿಯು ಅಲ್ಪಾವಧಿಯಲ್ಲೇ ಶಾಂತವಾಯಿತು.

ದಿ. ೫ ನವ್ಹೆಂಬರ ೧೯೩೨ರಲ್ಲಿ ಶ್ರೀ ಅಂಬುರಾವ ಬಾಬಾರವರು ನನಗೆ ನೇಮ ನೀಡಿ ಆಸರೆ ಕೊಟ್ಟು ಬಳಿಕ ೧೭ ಜೂನ ೧೯೩೬ರಂದು ನನ್ನ ಧರ್ಮಪತ್ನಿಗೆ ಗುರುದೇವ

ರಾನಡೆಯವರು ನೇಮ ನೀಡಿದರು. ೧೭ ಡಿಶೆಂಬರ್ ೧೯೩೭ರಲ್ಲಿ ಅಲಹಾಬಾದದಿಂದ ನನಗೊಂದು ಪತ್ರ ಬರೆದರು. 'ಕೇವಲ ದೇವರ ಭಕ್ತಿಯೊಂದೇ ಫಲಪ್ರದವಾಗುತ್ತದೆ. ನೀವಿಬ್ಬರೂ ಪಾರಮಾರ್ಥಿಕ ದೃಷ್ಟಿಯಿಂದ ಕುಶಲವಾಗಿದ್ದೀರಿ ಎಂದುಕೊಂಡಿದ್ದೇನೆ. ದೇವರ ಧ್ಯಾನ ಮತ್ತು ನಾಮಸ್ಮರಣೆಯು ನಿಮಗೆ ಖಚಿತವಾಗಿಯೂ ಫಲ ನೀಡುತ್ತದೆ ಎಂಬ ನಂಬಿಕೆ ನನಗಿದೆ. ಶುಭ ಆಶೀರ್ವಾದ– ರಾ.ದ. ರಾನಡೆ'.

ಮುಂದೆ ೧೯೩೮ರಲ್ಲಿ ನನ್ನನ್ನು ಜಳಗಾಂವದಲ್ಲಿ ಅಸಿ. ಕಾಟನ್ ಬ್ರಿಡರ್ ಎಂಬ ಸಂಶೋಧಕನ ಹುದ್ದೆಗೆ ನೇಮಿಸಲಾಯಿತು. ಗುರುದೇವರು ಅಲಹಾಬಾದಗೆ ಹೊರಟಾಗಲೆಲ್ಲ ಜಳಗಾಂವ ಸ್ಟೇಶನ್ನಿನಲ್ಲಿ ಭೇಟಿಯಾಗುತ್ತಿದ್ದರು. ಅಲ್ಲಿಂದ ಭೂಸಾವಳ ವರೆಗೆ ಸತ್ಸಂಗದ ಸಹವಾಸ ಲಭಿಸುತ್ತಿತ್ತು. ೧೯೩೮ ಸಪ್ಟಂಬರ್ ತಿಂಗಳಲ್ಲಿ ನಾವು ಪತಿ ಪತ್ನಿಯರು ಅಲಹಾಬಾದಗೆ ಹೋಗಿ ರಾನಡೆಯವರ ಮನೆಯಲ್ಲಿ ಕೆಲವು ದಿನ ಕಳೆದವು. ಈ ಕುರಿತು ಕಾಕಾ ತುಳಪುಳೆಯವರು ೩–೧೦–೩೮ರಲ್ಲಿ ಬರೆದ ಪತ್ರ ಮಾರ್ಮಿಕವಾಗಿದೆ. ಅದರ ಸಾರಾಂಶ ಹೀಗಿದೆ: 'ಸದ್ಗುರು ಸಂತರ ಮೇಲಿನ ಭಕ್ತಿಯೆಂದರೇನೆ ದೇವರ ಭಕ್ತಿ. ಸದ್ಗುಣವನ್ನು ಭಕ್ತಿಗಾಗಿ ಸಾಧನೆಗಾಗಿ ಉಪಯೋಗ ಮಾಡಿದಿರಿ ಎಂದರೆ–ಅದು ಸುರಕ್ಷಿತವಾಗಿ ಬೆಳೆಯುತ್ತದೆ.

ಅನಂತರ ನವೆಂಬರ ೧೯೪೧ರಲ್ಲಿ ಧಾರವಾಡ ಸಿವ್ಹಿಲ್ ಆಸ್ಪತ್ರೆಯಲ್ಲಿ ಸರ್ಜನ್ ಮೋನೆಯವರು ನನ್ನ ಫಿಸ್ಚೂಲಾ ಆಪರೇಶನ್ ಮಾಡಿದರು. ೪–೧೧–೪೧ರಲ್ಲಿ ರಾನಡೆಯವರಿಗೊಂದು ಪತ್ರ ಬರೆದೆ. ಅದಕ್ಕೆ ಗುರುದೇವರು ಅಲಹಾಬಾದದಿಂದ ಉತ್ತರ ಕಳಿಸಿದರು. 'ದೇಹದ ಭೋಗ ಯಾರಿಗೂ ತಪ್ಪಿದ್ದಲ್ಲ... ಪ್ರಾರಬ್ಧಕ್ಕೆ ತಕ್ಕಂತೆ ಅನುಭವಿಸುವ ಮೊದಲು ವ್ಯಾಧಿಯ ತೀವ್ರತೆಯನ್ನು ಕಡಿಮೆ ಮಾಡುವ ಏಕೈಕ ಮಾರ್ಗವೆಂದರೆ ನಾಮಸ್ಮರಣೆ...ಸಂಸಾರದಲ್ಲಿ ಸುಖ ದುಃಖವಿರುವುದರಿಂದ ಸದಾಕಾಲ ನಾಮದ ಆಸರೆಯನ್ನು ಪಡೆಯುವುದು ಶ್ರೇಯಸ್ಕರ.'

ಅದಾದ ಬಳಿಕ ನಾನು ಮರಳಿ ಜಳಗಾಂವಿಗೆ ಹೋಗಿ ನೌಕರಿಗೆ ಹಾಜರಾದೆ. ಆದರೆ ಒಂದೇ ವರ್ಷದೊಳಗೆ ಉಷ್ಮಾಘಾತ(Sun stroke)ಗೆ ಒಳಗಾಗಿ ಮೆಡಿಕಲ್ ರಜೆ ಹಾಕಿ ಬೆಳಗಾವಿಯ ಮನೆಗೆ ಬಂದೆ. ನಾನು ರಿಕ್ವೆಸ್ಟ್ ಟ್ರಾನ್ಸಫರ್ ಬೇಡಿದಾಗ ನನ್ನನ್ನು ಧಾರವಾಡಕ್ಕೆ ವರ್ಗ ಮಾಡಿದರು. ಆದರೆ ನನ್ನ ಭವಿತವ್ಯವು ನನ್ನನ್ನು ಶ್ರೀ ಗುರುದೇವರ ಸಾನಿಧ್ಯ ಸೆಳೆಯುತ್ತಿರುವುದು ಮುಂದಿನ ಘಟನೆಯಿಂದ ವಿದಿತವಾಗುತ್ತದೆ.

ಜೂನ ೧೯೪೨ರಂದು ನಾನು ಧಾರವಾಡಕ್ಕೆ ಕೆಲಸಕ್ಕೆ ಹಾಜರಾಗಲು ಹೋದ ದಿನವೇ ಜಾತಿಯ ಕಾರಣದಿಂದಾಗಿ, ಅಲ್ಲಿಯ ಮುಖ್ಯ ಅಧಿಕಾರಿಯು ನನ್ನನ್ನು ಅಪಮಾನಗೊಳಿಸಿದ್ದರಿಂದ ನಾನು ಡೈರೆಕ್ಟರ್ ಆಫ್ ಎಗ್ರಿಕಲ್ಚರ್ ಪುಣೆಗೆ ತಂತಿ ಸಂದೇಶದ ಮೂಲಕ ರಾಜೀನಾಮೆ ಸಲ್ಲಿಸಿದೆ. ಅನಂತರ ನಾನು ಗುರುದೇವರ ಬಳಿ ನಿಂಬಾಳಕ್ಕೆ ಹೋದೆ.

ಗುರುದೇವರು ಹಳೆಯ ಮನೆಯಲ್ಲಿ ಅಂದರೆ ಈಗ ಸಮಾಧಿಯಿರುವ ಜಾಗದಲ್ಲಿ ಧ್ಯಾನಮಗ್ನರಾಗಿ ಕೂತಿದ್ದು, ಉಳಿದ ಸಾಧಕರೆಲ್ಲ ಹೊಸ ಮನೆಯಲ್ಲಿ ಮತ್ತು ಬೇರೆಡೆ ಇದ್ದರು. ನಾನು ಗುರುದೇವರ ಧ್ಯಾನದ ಕೋಣೆಯ ಹೊರಗೆ ಉದ್ವಿಗ್ನ ಸಂತಪ್ತ ಆದರೆ ಏಕಾಗ್ರ ಮನಸ್ಥಿತಿಯಲ್ಲಿ ಗುರುದೇವರ ಹಾದಿ ಕಾಯಲಾರಂಭಿಸಿದೆ. ಕೇವಲ ಐದೇ ನಿಮಿಷದೊಳಗೆ ವಿದೇಹಿ ಅವಸ್ತೆಯಲ್ಲಿ ಗುರುದೇವರು ನನ್ನ ಬಳಿಯಲ್ಲಿ ಬಂದು ಕೂತರು. 'ನೀನೇಕೆ ಬಂದೆ ಎಂದು ನನಗೆ ಗೊತ್ತು. ಇನ್ನು ಮುಂದೆ ಮನುಷ್ಯನ ನೌಕರಿ ಮಾಡಬೇಡ. ದೇವರ ನೌಕರಿ ಮಾಡು' ಎಂದು ಹೇಳಿ ತಮ್ಮ ಪಾದಕ್ಕೆರಗುವಂತೆ ಹೇಳಿ, ಬಳಿಕ ಸರ್ರನೆ ಕೋಣೆಯೊಳಗೆ ಹೋದರು.

ಜುಲೈ ೧೯೪೨ರಲ್ಲಿ ನಾನು ಅವರೊಂದಿಗೆ ರೈಲಿನಲ್ಲಿ ಫರ್ಸ್ಟ್‌ಕ್ಲಾಸ್ ಬೋಗಿಯಲ್ಲಿ ಕೂತು ಅಲಹಾಬಾದಿಗೆ ಹೋದೆ. ಹೊಸ ಮನೆಯ ಮಹಡಿ ಮೇಲಿನ ಎಡಗಡೆಯ ಕೋಣೆಯಲ್ಲಿದ್ದ ಶ್ರೀ ಭಾವೂ ಸಾಹೇಬ ಮಹಾರಾಜರ ಪತ್ರಗಳನ್ನು ಓದಿ ನಾಮಸ್ಮರಣೆ ಯನ್ನು ಮಾಡುವಂತೆ ಗುರುದೇವರು ಹೇಳಿದರು. ಅವರು ಸ್ವತಃ ಬಲಬದಿಯ ಕೋಣೆ ಯಲ್ಲಿ ಧ್ಯಾನಕ್ಕೆ ಕೂತಿರುತ್ತಿದ್ದರು. ಕೆಲದಿನಗಳ ಬಳಿಕ ಒಂದು ದಿನ ಬೇಗ ಎದ್ದು ಡ್ರೈವರನನ್ನು ಕರೆಸಿ, ವೈಸ್ ಛಾನ್ಸಲರ್ ಡಾ. ಅಮರನಾಥ ಝಾ ಅವರ ಬಂಗಲೆಗೆ ಹೋದರು. ನನಗೆ ಎಂ.ಎ. ತತ್ವಜ್ಞಾನ ವಿಷಯದಲ್ಲಿ ಅಧ್ಯಯನ ಮಾಡಲು ಅನುಮತಿ ಬೇಡಿದರು. ಯುನಿವರ್ಸಿಟಿಯಲ್ಲಿ ವಿಶೇಷ ನಿಯಮವನ್ನು ಒಮ್ಮತದಿಂದ ಮಂಜೂರು ಮಾಡಿಸಿಕೊಂಡರು. ನಾನು ೧೯೪೪ರಿಂದ ೧೯೪೭ರಲ್ಲಿ ಎಂ.ಎ. ಮುಗಿಸಿದೆ. ತತ್ವಜ್ಞಾನ ದಲ್ಲಿ ಎಲ್ಲರಿಗಿಂತ ಹೆಚ್ಚು ಅಂಕವನ್ನು ಗಳಿಸಿದೆ. ಡಿ.ಫಿಲ್ ಸ್ಕಾಲರ್‌ಶಿಫ್ ಸಿಕ್ಕಿದ್ದರಿಂದ ಗುರುದೇವ ರಾನಡೆಯವರ ಮಾರ್ಗದರ್ಶನದಡಿಯಲ್ಲಿ ಸಂಶೋಧನಾ ಅಧ್ಯಯನ ಕೈಕೊಂಡೆ. ನಿಜಕ್ಕೂ ಧನ್ಯ ಗುರುದೇವ ರಾನಡೆಯವರು.

ಹೊಸ ಬಂಗಲೆಯಲ್ಲಿ ವಾಸಿಸಲು ಆರಂಭಿಸಿದ ಬಳಿಕ ಉಚ್ಚ ಪಾತಳಿಯ ಧ್ಯಾನವು ಅಧಿಕ ಸಮಯ, ಅಧಿಕ ವೇಗದಿಂದ ಶುರುವಾಯಿತೆಂದು ರಾನಡೆಯವರು ಹೇಳುತ್ತಿದ್ದರು. ವಿಶ್ವವಿದ್ಯಾಲಯದ ತತ್ವಜ್ಞಾನ ಶಾಖೆಯ ಪ್ರಮುಖ ಪ್ರಾಧ್ಯಾಪಕ ಮತ್ತು 'ಡೀನ್ ಫೆಕಲ್ಟಿ ಆಫ್ ಆರ್ಟ್ಸ್'ನ ಹೊಣೆಗಾರಿಕೆಯ ಹುದ್ದೆಯ ಕೆಲಸ ಕಾರ್ಯವನ್ನೆಲ್ಲ ಮಾಡಿ ಮುಗಿಸಿ, ಉಳಿದ ಸಮಯವನ್ನು ಪಾರಮಾರ್ಥಿಕ ಓದಿನಲ್ಲಿ, ಮುಖ್ಯವಾಗಿ ನಾಮಸ್ಮರಣೆಯಲ್ಲಿ ಕಳೆಯುತ್ತಿದ್ದರು. ಅವರು ಅಲಹಾಬಾದಿಗೆ ಹೋದ ಬಳಿಕ ಹಿಂದಿ ಸಂತ ಸಾಹಿತ್ಯದ ಅಧ್ಯಯನವನ್ನು ಶುರುಮಾಡಿದರು. 'ಹಿಂದಿ ಸಂತರ ಪರಮಾರ್ಥ ಮಾರ್ಗ' ಗ್ರಂಥವನ್ನು ರಚಿಸುವ ಸಿದ್ಧತೆಯನ್ನು ನಡೆಸಿದ್ದರು. ಈ ಕೆಲಸದಲ್ಲಿ ಅವರಿಗೆ ಶ್ರದ್ಧೆಯಿಂದ ಪಂ. ದೇವಿಪ್ರಸಾದ ಶುಕ್ಲರು ಸಹಾಯವನ್ನು ಮಾಡಿದರು.

ರಾನಡೆಯವರು ೧೯೪೫ರಲ್ಲಿ ಉಪಕುಲಪತಿಗಳಾದರು. ಕಾಕಾಕಾರಖಾನಿಸರು ೩–೪–೪೫ರಲ್ಲಿ ನನಗೆ ಬರೆದ ಪತ್ರ ಹೀಗಿದೆ–

'....ಪೂಜ್ಯಶ್ರೀ ಗುರುವರ್ಯರು ಅಲಹಾಬಾದ ವಿಶ್ವವಿದ್ಯಾಲಯದ ಉಪಕುಲ ಪತಿಗಳಾದ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿ ಸಂತೋಷವಾಯಿತು. ಹೀಗೆಯೇ ಪ್ರಿ. ಬೆನ್‌ರಿಗೂ ಮುಂಬೈ ವಿವಿಯು ಡಾಕ್ಟರೇಟ್ ಪದವಿ ನೀಡಿದ್ದರೆ, ವಿವಿಯ ಯೋಗ್ಯತೆಯು ಬೆಳೆಯುತ್ತಿತ್ತು. ಆದರೆ ಹಾಗಾಗಲಿಲ್ಲ...ಪ್ರಾಯಃ ಡಾ. ಅಮರನಾಥ ಝಾ ಅವರೇ ಬಲವಂತ ಮಾಡಿದ್ದರಿಂದ ಅನಿವಾರ್ಯವಾಗಿ ಗುರುವರ್ಯರು ಈ ಉಪಾಧಿಯನ್ನು ಸ್ವೀಕರಿಸಿರಬೇಕು. ಇಲ್ಲದಿದ್ದರೆ ಇಂಥ ಸಂಗತಿಗಳಿಗೆಲ್ಲ ಅವರು ಮಹತ್ವ ನೀಡುವ ವ್ಯಕ್ತಿ ಅವರಲ್ಲ...

'ಗುರುವರ್ಯರ ಐಹಿಕ ವೈಭವವೆಂದರೆ ಪರಮಾರ್ಥಕ್ಕೆ ಪೋಷಕವಾಗಿರು ವಂತಹದು. ಇದೆಲ್ಲ ನಮ್ಮಂಥ ಮಂದಮತಿಗಳಿಗೆ ಹೇಗೆ ಗೊತ್ತಾಗಬೇಕು?... ನಿಜವಾಗಿ ಹೇಳಬೇಕೆಂದರೆ ಶ್ರೀ ಸದ್ಗುರು ಮಹಾರಾಜರು ಆಧ್ಯಾತ್ಮಿಕ ವಿವಿಯ ಛಾನ್ಸಲರ್‌ರಾದರೆ ಪೂಜ್ಯ ಗುರುವರ್ಯರು ಅದರ ವೈಸ್ ಚಾನ್ಸಲರ್. ಕಾಲದ ಲೀಲೆ ಅಗಮ್ಯವಾದುದು. ಈ ಆಧ್ಯಾತ್ಮಿಕ ಮಹಾವಿದ್ಯಾಲಯದಲ್ಲಿ ಜನರಂತೂ ಬರುತ್ತಾರೆ. ಹಾಗೆ ದೇಶವೂ ಬರುತ್ತದೆ. ೧೯೨೦ರಿಂದ ಕೇಳುತ್ತ ಬಂದ ಈ ಭವಿಷ್ಯ ಪೂರ್ಣವಾಗಲೆಂದು ಹಾರೈಕೆ. ಗುರುವರ್ಯರ ಸೇವೆ ಮಾಡುವ ಅವಕಾಶ ಸಿಗಲಿ. ನನ್ನ ಪರವಾಗಿ ಪೂಜ್ಯ ಗುರುವರ್ಯರ ಪಾದಮುಟ್ಟಿ ನಮಸ್ಕರಿಸಿ...'

ವಿಶ್ವವಿದ್ಯಾಲಯದ ತತ್ವಜ್ಞಾನ ವಿಭಾಗದ ಮುಖ್ಯಸ್ಥರಾಗಿ, ಡೀನ್ ಫೆಕಲ್ಟಿ ಆಫ್ ಆರ್ಟ್ಸ್ ಮತ್ತು ಉಪಕುಲಪತಿಗಳಾಗಿ ಯಶಸ್ವಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಿ ಅಕ್ಟೋಬರ್ ೧೯೪೬ರಲ್ಲಿ ಗುರುದೇವ ರಾನಡೆಯವರು ಸೇವಾನಿವೃತ್ತರಾದರು. ಅದಾದ ಬಳಿಕ ವಿಶ್ವವಿದ್ಯಾಲಯದ ಕಾರ್ಯಕಾರಿ ಮಂಡಳಿಯು ಗುರುದೇವರಂತಹ ಅಲೌಕಿಕ ವಿದ್ವಾಂಸ ಪ್ರಾಧ್ಯಾಪಕರ ಸಂಪರ್ಕವು ವಿಶ್ವವಿದ್ಯಾಲಯಕ್ಕೆ ಇರಲೆಂದು 'ಎಮರಿಟಸ್ ಪ್ರೊಫೆಸರ್ ಆಫ್ ಫಿಲಾಸಫಿ' ಎಂಬ ಗೌರವಾನ್ವಿತ ಸ್ಥಾನವನ್ನು ಅವರಿಗಾಗಿ ನಿರ್ಮಿಸಿದರು. ೧೯೪೭ರಲ್ಲಿ ಅಲಹಾಬಾದ ವಿವಿಯು ಭಾರತದ ಶ್ರೇಷ್ಠ ವ್ಯಕ್ತಿಗಳ ಸನ್ಮಾನ ಮಾಡುವ ಉದ್ದೇಶದಿಂದ ಒಂದು ಸ್ವತಂತ್ರ ಪದವಿ ಪ್ರದಾನ ಸಮಾರಂಭವನ್ನು ಏರ್ಪಡಿಸಿತು. ೨೮ ವರ್ಷಗಳ ಮೌಲಿಕ ಸೇವೆಯ ಬಗೆಗೆ, ಅವರ ಅಪೂರ್ವ ಬೌದ್ಧಿಕ ಕೌಶಲ್ಯದ ಬಗೆಗೆ ಗೌರವವನ್ನು ವ್ಯಕ್ತ ಮಾಡಲು ಗುರುದೇವ ರಾನಡೆಯವರಿಗೆ ಡಿ.ಲಿಟ್ ಪದವಿಯನ್ನು ನೀಡಿತು. ಈ ರೀತಿ ಗುರುದೇವರು ತತ್ವಜ್ಞಾನದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನನಗೂ ಅವರ ಕೈಕೆಳಗೆ ಡಿ.ಲಿಟ್ ಸಂಶೋಧನೆಗಾಗಿ ಅಧ್ಯಯನ ಮಾಡುವ ಅವಕಾಶ ಲಭಿಸಿತು. ಅದರಿಂದ ಗುರುದೇವರ ಪ್ರೀತಿ–ವಾತ್ಸಲ್ಯ ಹಾಗೂ ಬೌದ್ಧಿಕತೆಯ ಪರಿಚಯ ನೀಡುವ ನಿಕಟ ಸಹವಾಸ ಲಭಿಸಿತು.

ಸುಡು ಸುಡು ಬಿಸಿ ನೀರಿನಿಂದ ಸ್ನಾನ ಮಾಡುವುದು ಗುರುದೇವ ರಾನಡೆಯವರ ಪದ್ಧತಿ. ಸ್ನಾನದ ಬಳಿಕ ಪರೆಕಳಚಿದ ನಾಗನಂತೆ ಫಳಫಳ ಹೊಳೆಯುತ್ತಿದ್ದರು. ಸ್ನಾನದ ಕಾಲಕ್ಕೆ ಹಾಗೂ ಸ್ನಾನದ ಬಳಿಕ ನಾರಾಯಣ ನಾರಾಯಣ ಎಂಬ ದೈವೀ ಗರ್ಜನೆಯಿಂದ ಸುತ್ತಲಿನ

ಪರಿಸರ ಮಾರ್ದನಿಗೊಳ್ಳುತ್ತಿತ್ತು. ಇದಾದ ಬಳಿಕ ನಾಮಸ್ಮರಣೆ ಮಾಡುತ್ತ ಧ್ಯಾನ ಮಗ್ನರಾಗಿ ಎಷ್ಟು ಕಾಲ ಕೂತಿರುತ್ತಿದ್ದರೋ ಹೇಳುವದು ಸಾಧ್ಯವಿಲ್ಲ. ಅನಂತರ ಶ್ರೀ ನಿಂಬರಗಿ ಮಹಾರಾಜರ ಚರಿತ್ರೆ, ಶ್ರೀ ರಘುನಾಥಾಚಾರ್ಯರು ರಚಿಸಿದ್ದು, ಓದುತ್ತಿದ್ದರು. ಬಳಿಕ ತಾವೇ ಚಹಾ ಮಾಡಿಕೊಂಡು ಸೇವನೆ ಮಾಡುತ್ತಿದ್ದರು.

ತಮ್ಮ ಭೋಜನದ ಬಗೆಗೆ ಗುರುದೇವರು ಡಾ. ಭಾವೆಗೆ ಹೇಳಿದ್ದು ಹೀಗೆ– 'ದೇವರು ಈ ದೇಹವನ್ನು ಪೋಷಿಸುವ ಶಕ್ತಿಯನ್ನು ಗುಪ್ತವಾಗಿರಿಸಿದ್ದಾನೆ. ಆ ಶಕ್ತಿಯನ್ನು ನಾಮಸ್ಮರಣೆಯಿಂದ ಜಾಗೃತಗೊಳಿಸಿದರೆ ಅಮೃತರಸದ ಅನುಭವವಾಗುತ್ತದೆ. ಅಮೃತರಸ ಹೆಚ್ಚಿದಂತೆಲ್ಲ ಅನ್ನ ಪದಾರ್ಥದ ಅಗತ್ಯ ಬೀಳುವುದಿಲ್ಲ'.

■■

## ‘ನಾನೂ ಅಮೃತರಸ ಸೇವಿಸಿ ಉಳಿದವರಿಗೂ ಹಂಚುತ್ತೇನೆ’

೧೯೪೭ರಲ್ಲಿ ಸಾಂಗಲಿಯ ಪರಮಾರ್ಥ ಪ್ರೇಮಿ, ಉದಾರ ಅಂತಃಕರಣವಿರುವ ಶ್ರೀಮಂತ ರಾಜೇ ಸಾಹೇಬರು ನಾಮ ಸಪ್ತಾಹದ ನಿಮಿತ್ತದಲ್ಲಿ ಗುರುದೇವ ರಾನಡೆ ಹಾಗೂ ಉಳಿದ ಭಕ್ತಾದಿಗಳನ್ನು ರಾಜವಾಡೆಗೆ ಆಮಂತ್ರಿಸಿ, ಭಕ್ತಿಯ ಉತ್ಸವವನ್ನು ಆಚರಿಸಿದರು. ಆಗ ಅವರು ಪಾರಮಾರ್ಥದ ಕುರಿತು ರಾನಡೆಯವರನ್ನು ಕೇಳಿದರು. ನಿಮ್ಮ ಅಂತಃಕರಣದಲ್ಲಿ ಸ್ಫುರಿಸಿದ ಯಾವುದೇ ಉದಾತ್ತ ಭವ್ಯ-ದಿವ್ಯ ಕಾರ್ಯವನ್ನು ಮಾಡಲು ನೀವು ಸಮರ್ಥರು. ನೀವೆ ಮಾಡುವ ಮಾಡಿಸುವ ಕಾರ್ಯ ವಿಧಾತರು. ನಾವು ನಿಮ್ಮ ವಿನಮ್ರ ಕಿಂಕರರು ಎಂದರು. ಈ ವಿಚಾರದಿಂದಾಗಿ ಗುರುಗಳ ಮಾರ್ಗದರ್ಶನದಲ್ಲಿ ಶ್ರೀ ಗಣಪತಿಯ ಕೃಪೆಯಿಂದ ೨೬ ಅಕ್ಟೋಬರ್ ೧೯೪೭ರಂದು ‘ಅಧ್ಯಾತ್ಮ ವಿದ್ಯಾ ಮಂದಿರ’ ಸ್ಥಾಪನೆಯಾಯಿತು.

ಗುರುದೇವ ರಾನಡೆಯವರ ಗ್ರಂಥಗಳನ್ನು ಪ್ರಕಟಿಸಲು ಶ್ರೀ ಗಣಪತಿ ಸಂಸ್ಥಾನ ಪ್ರೆಸ್‌ನ್ನು ಗುರುದೇವರಿಂದಲೇ ೭-೯-೧೯೪೮ರಲ್ಲಿ ಉದ್ಘಾಟಿಸಿ, ನನ್ನನ್ನು ವ್ಯವಸ್ಥಾಪಕ ನೆಂದು ನೇಮಿಸಿದರು.

ಅಂತರಂಗದಲ್ಲಿ ಪರಮಾರ್ಥ ಹಾಗೂ ಔದಾರ್ಯ ನೆಲೆಸಿದ ಶ್ರೀಮಂತ ರಾಜೇಸಾಹೇಬರಿಗೆ ಗುರುದೇವ ರಾನಡೆಯಂತಹ ಸಾಕ್ಷಾತ್ಕಾರಿ ಮತ್ತು ಜ್ಞಾನ ಸಂಪನ್ನ ತತ್ವಜ್ಞಾನಿ ಸಂತರ ಮಾರ್ಗದರ್ಶನ ಸಿಕ್ಕಿದ್ದರಿಂದ ‘ಅಧ್ಯಾತ್ಮ ವಿದ್ಯಾಮಂದಿರ’ದಂಥ ಸಂಸ್ಥೆಯು ಅಸ್ತಿತ್ವಕ್ಕೆ ಬಂತು. ರಾಜೇಸಾಹೇಬರ ಪೂರ್ವಜರ ಧಾರ್ಮಿಕ ಕಾರ್ಯ ಹಾಗೂ ಭಾರತದ ತತ್ವಜ್ಞಾನದ ಪ್ರಸಾರಕ್ಕಾಗಿ ಈ ಸಂಸ್ಥೆಯು ಎಷ್ಟೋ ವರ್ಷಗಳಿಂದ ಕಾರ್ಯ ಮಾಡುತ್ತಿತ್ತು. ಅವರ ಪೂರ್ವಜರು ಭಗವದ್ಗೀತೆಯ ೧೦೧ ಪ್ರತಿಯನ್ನು ಪ್ರಕಟಿಸಿ ದಾನ ಮಾಡಿದ್ದರು. ಅಲ್ಲಿ ಆರಂಭದಿಂದ ಪರಮಾರ್ಥ ಪ್ರಸಾದ ಕಾರ್ಯ ನಡೆಯುತ್ತಿತ್ತು. ಈಗ ಪರಮಾರ್ಥದ ಪ್ರವಚನ ಹಾಗೂ ಗ್ರಂಥ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು. ಈ ಮಹತ್ವದ ಕಾರ್ಯಕ್ಕಾಗಿ ರಾಜೇಸಾಹೇಬರು ಶ್ರೀ ಗಣಪತಿ ಪಂಚಾಯತನ ಸಂಸ್ಥೆಯಿಂದ ಪ್ರತಿವರ್ಷ ೧೮೦೦೦ ರೂಪಾಯಿಯಂತೆ ಐದು ವರ್ಷಗಳ ಕಾಲ ಈ ಅಧ್ಯಾತ್ಮ ಮಂದಿರಕ್ಕೆ ದಾನ ಮಾಡಿದರು. ಸಾಂಗಲಿ ಸಂಸ್ಥಾನದ ಛಾಪಖಾನೆಯನ್ನು ಖರೀದಿಸಿದರು. ಅವರ ಉದಾರ ದೇಣಿಗೆಯಿಂದಾಗಿ ಗುರುದೇವ ರಾನಡೆಯವರ ‘ಪರಮಾರ್ಥ ಸೋಪಾನ’ ಮತ್ತು ‘Pathway to God in Hindi Literature’ ಎಂಬೆರಡು ಗ್ರಂಥಗಳು ಪ್ರಕಟಗೊಂಡವು. ಈ ಅಧ್ಯಾತ್ಮ ವಿದ್ಯಾಮಂದಿರದ ಮುಖ್ಯ ಶಾಖೆಯು ಸಾಂಗಲಿ, ನಿಂಬಾಳ ಮತ್ತು ಅಲಹಾಬಾದದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು.

ಧಾರವಾಡ ಹುಬ್ಬಳ್ಳಿ, ವಿಜಯಪುರಕ್ಕೆ ಹೋಗಿ ರಾನಡೆಯವರು ಆಗಾಗ ಪ್ರವಚನ ನೀಡಿದ್ದರಿಂದ, ಅಲ್ಲಿ ಅವರ ಭಕ್ತರು ಇರುವುದರಿಂದ ಅಲ್ಲೂ ಅಧ್ಯಾತ್ಮ ವಿದ್ಯಾಮಂದಿರದ ಕಾರ್ಯ ನಡೆಯುತ್ತಿತ್ತು. ಗುರುದೇವರ ಮಾರ್ಗದರ್ಶನದಡಿಯಲ್ಲಿ ನಿಂಬಾಳ ಮತ್ತು ಅಲಹಾಬಾದದಲ್ಲಿ ಶ್ರೀಮದ್ ಭಾಗವತ ಹಾಗೂ ತತ್ವಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆ ಕೈಕೊಳ್ಳುವ ಕೆಲ ವಿದ್ಯಾರ್ಥಿಗಳಿಗೆ ಅಧ್ಯಾತ್ಮ ವಿದ್ಯಾಮಂದಿರದ ದೇಣಿಗೆಯಿಂದಲೇ ಶಿಷ್ಯ ವೃತ್ತಿಯನ್ನು ನೀಡಲಾಯಿತು. ಈ ರೀತಿ 'ಅಧ್ಯಾತ್ಮ ವಿದ್ಯಾಮಂದಿರ'ವನ್ನು ಸ್ಥಾಪಿಸಿದ್ದರಿಂದ ಆಧ್ಯಾತ್ಮಿಕ ಕಾಯಕಕ್ಕೂ ಹಾಗೂ ಗುರುದೇವರ ಅಪ್ರಕಟಿತ ಹಿಂದಿ-ಕನ್ನಡ ಸಂತ ಸಾಹಿತ್ಯ, ಭಗವದ್ಗೀತೆ ಅದ್ವೈತ ವೇದಾಂತದ ಬಗೆಗಿನ ಮೌಲಿಕ ಬರವಣಿಗೆಗೆ ತುಂಬ ಸಹಾಯವಾಯಿತು. ಅವರು ೨೧-೪-೧೯೫೩ರಲ್ಲಿ ಶ್ರೀಮಂತ ರಾಜೇಸಾಹೇಬರಿಗೆ ಬರೆದ ಪತ್ರದಿಂದ ಈ ವಿಷಯ ವಿದಿತವಾಗುತ್ತದೆ.

ಇಂದಿಗೂ ಸಾಂಗಲಿಯ ಆಧ್ಯಾತ್ಮ ವಿದ್ಯಾಮಂದಿರದ ಕಾರ್ಯ ಮುನ್ನಡೆದಿದೆ. ಅಲ್ಲಿ ಪ್ರತಿ ಬುಧವಾರ ಪರಮಾರ್ಥದ ಬಗೆಗೆ ಪ್ರವಚನ ನಡೆಯುತ್ತದೆ. ಪರಮಾರ್ಥದ ಬಗೆಗೆ ಅಧಿಕಾರಯುತವಾಗಿ ಮಾತಾಡಬಲ್ಲವರಿಂದ ಗ್ರಂಥವನ್ನು ಬರೆದು ಪ್ರಕಟಿಸಲಾ ಗುತ್ತದೆ. ಈ ಗ್ರಂಥವೂ ಸಹ ಅದೇ 'ಅಧ್ಯಾತ್ಮ ವಿದ್ಯಾಮಂದಿರ'ದ ಒಂದು ಪ್ರಕಟಣೆಯೇ ಆಗಿದೆ. ಗುರುದೇವ ರಾನಡೆಯವರು ಆರಂಭಿಸಿದ ಈ ಅಧ್ಯಾತ್ಮ ವಿದ್ಯಾಮಂದಿರದ ಕಾರ್ಯವಂತೂ ಸಾಂಗಲಿಯ ಮಟ್ಟಿಗಾದರೂ ಅವರ ನಿರ್ಯಾಣದ ನಂತರವೂ ಸಹ ಮುಂದುವರಿದಿದೆ. ಇದಕ್ಕೆ ಶ್ರೀ ರಾಜೇಸಾಹೇಬರಲ್ಲಿದ್ದ ಭಗವದ್ ಭಕ್ತಿ ಹಾಗೂ ಗುರುಭಕ್ತಿಯೇ ಕಾರಣ.

ಗುರುದೇವರು ೨೧-೪-೧೯೫೩ರಂದು ರಾಜೇಸಾಹೇಬರಿಗೆ ಅಲಹಾಬಾದ ನಿಂದ ಒಂದು ಪತ್ರ ಬರೆದು, ಈ ಕಾರ್ಯದ ಮುಂದಿನ ಯೋಜನೆಯ ಬಗೆಗೆ ವಿವರಿಸಿದ್ದಾರೆ.

'....ನೀವು ಆಧ್ಯಾತ್ಮ ವಿದ್ಯಾಮಂದಿರವನ್ನು ಆರಂಭಿಸದೇ ಇದ್ದಿದ್ದರೆ Pathway to God in Hindi Literature ಈ ಗ್ರಂಥ ಪ್ರಕಟವಾಗತ್ತಿರಲಿಲ್ಲವೇನೋ ಅದಕ್ಕಾಗಿ ತಮಗೆ ಕೃತಜ್ಞತೆ.

ನಾನು ಅಲಹಾಬಾದದಲ್ಲಿದ್ದಾಗ ೧೯೪೦ರಿಂದ ಹಲವು ಭಕ್ತರ ಬಾಯಿಂದ ಹಿಂದಿ ಸಂತರ ಸಾಹಿತ್ಯಕ್ಕೆ ಸಂಬಂಧಿಸಿದ ಹಾಡು, ಪದ್ಯಗಳಿಂದ ಕೇಳಿ ಸಂಗ್ರಹಿಸುವ ಕಾರ್ಯ ಮಾಡಿದೆ. ಈ ಸಂಕಲನ ಕಾರ್ಯ ೧೯೪೬ ವರೆಗೆ ಮುಂದುವರೆಯಿತು. ಸ್ವತಃ ದಾದಾಸಾಹೇಬರೆ ಇಲ್ಲಿಗೆ ಬಂದು ಮುದ್ರಣದ ಕಾಗದ, ಕರಾರು ಪತ್ರದ ಬಗೆಗೆ ಮಾತುಕತೆ ನಡೆಸಿ, ಈ ಕಾರ್ಯವನ್ನು ಲೀಡರ್ ಪ್ರೆಸ್‌ಗೆ ವಹಿಸಿಕೊಟ್ಟಿದ್ದಾರೆ. ಈ ಗ್ರಂಥವನ್ನು ಮುಂಬೈ ಇಲ್ಲವೇ ಸಾಂಗಲಿಯಲ್ಲಿ ತ್ವರಿತಗತಿಯಿಂದ ಮುದ್ರಿಸುವ ಕಾರ್ಯವನ್ನು ಕೈಕೊಳ್ಳಲಾಗುವುದು.

'Pathway to God' ಇದು ಮಾಲಿಕೆಯ ಹೆಸರು. ಈ ಮಾಲಿಕೆಯಲ್ಲಿ ಐದು ಗ್ರಂಥಗಳು ಪ್ರಕಟಿಸಬಹುದಾದಷ್ಟು ಸಾಮಗ್ರಿಯಿದೆ. ಈ ಹಿಂದಿ ಸಂತ ಸಾಹಿತ್ಯದ ಪುಸ್ತಕವು 'ಅಧ್ಯಾತ್ಮ

ವಿದ್ಯಾಮಂದಿರ'ದ ವತಿಯಿಂದ ಪ್ರಕಟವಾಗುತ್ತಿದೆ. ಈ ಪುಸ್ತಕದ ಬಳಿಕ ಕರ್ನಾಟಕ ಸಂತ ಸಾಹಿತ್ಯವು ಬರಲಿದೆ. ಏಕೆಂದರೆ ಈ ಕನ್ನಡ ಸಾಹಿತ್ಯದ ಸಂತರ ಪದ್ಯಗಳನ್ನು ೧೫-೧೬ ವರ್ಷಗಳ ಹಿಂದೆಯೇ ಸಂಗ್ರಹಿಸುವ ಕಾರ್ಯ ನಡೆದಿತ್ತು. 'Pathway to God in Kannada Literature' ಯೋಜನೆ ಸಹ ಧಾರವಾಡ, ಬೆಳಗಾವಿಯಲ್ಲಿ ಉಪನ್ಯಾಸ ನೀಡಿ ರೂಪಿಸಲಾಗಿದೆ. ಅದಾದ ಬಳಿಕ ಕಲ್ಕತ್ತೆಯಲ್ಲಿ ನೀಡಿದ ವೇದಾಂತಪರ ಉಪನ್ಯಾಸವನ್ನು ಕಲ್ಕತ್ತಾ ವಿವಿ ಪ್ರಕಟಿಸಲಿದೆ. ಅದೇ ರೀತಿ ಭಗವದ್ಗೀತೆಯ ಬಗೆಗಿನ ಭಾಷಣವನ್ನು ನಾಗಪುರ ವಿವಿ ಪ್ರಕಟಿಸಲಿದೆ. ಅದಾದ ಬಳಿಕ ದೇವರ ಕೃಪೆ ಇದ್ದರೆ ಈ ಸಾಮಗ್ರಿಗಳನ್ನೆಲ್ಲ ಬಳಸಿ 'Pathway to God in world's Philosophy and Religion' ಎಂಬ ಹೆಸರಿನಲ್ಲಿ ಐದನೇ ಗ್ರಂಥ ರೂಪಗೊಳ್ಳಲಿದೆ. ಅದರ ನಿರ್ಮಿತಿಗಾಗಿ ಈ ಎಲ್ಲ ಗ್ರಂಥಗಳು ಸಾಧನಗಳಾಗಲಿವೆ. ಮುಂಬೈ ವಿವಿಯು 'ಮಹಾರಾಷ್ಟ್ರ ಮಿಸ್ಟಿಸಿಜಂ'ವನ್ನು ಪ್ರಕಟಿಸಿದೆ. ಈ ಕೆಲಸ ಕಾರ್ಯಗಳಿಗೆ ಯೋಗ್ಯ ಸ್ಟಾಫ್, ಸ್ಟೇನೊ ಟೈಪಿಸ್ಟ್, ಮುದ್ರಣದ ಇತರ ಸಾಮಗ್ರಿಗಳೆಲ್ಲ ದೇವರ ಕೃಪೆಯಿಂದ ಹೊಂದಾಣಿಕೆಯಾದರೆ ಈ ಕಾರ್ಯ ಸುಗಮವಾಗಿ ಪೂರ್ಣಗೊಳ್ಳಬಹುದು. ಸಂಪೂರ್ಣ ಜಗತ್ತಿನಲ್ಲಿ ಒಂದೇ ಧರ್ಮ 'ವಿಶ್ವಧರ್ಮ'ವೆಂದು ಹೇಗೆ ರೂಪಗೊಳ್ಳಬಹುದು ಎನ್ನುವುದೇ ಈ ಮಾಲಿಕೆಯ ಉದ್ದೇಶ.

ಅಲಹಾಬಾದ ತಮ್ಮ

೨೧-೪-೫೩ **ರಾ.ದ. ರಾನಡೆ'**

ಮೇಲಿನ ಪತ್ರದಲ್ಲಿ ಹೇಳಿದಂತೆ, ಸಾಂಗಲಿಯ ಶ್ರೀ ಗಣಪತಿ ಸಂಸ್ಥಾನ ಮುದ್ರಣಾಲಯದಲ್ಲಿ ಡಿಸೆಂಬರ ೧೯೫೩ರಲ್ಲಿ 'ಪಾರಮಾರ್ಥ ಸೋಪಾನ', ಮಾರ್ಚ ೧೯೫೪ರಲ್ಲಿ 'ಹಿಂದಿ ಸಂತ ಸಾಹಿತ್ಯದಲ್ಲಿ ಪಾರಮಾರ್ಥದ ಮಾರ್ಗ' ಎಂಬೆರಡು ಗ್ರಂಥಗಳು ಮುದ್ರಣಗೊಂಡವು. ೯-೧-೧೯೫೪ರಂದು 'ಪರಮಾರ್ಥ ಸೋಪಾನ' ವನ್ನು ಉಪರಾಷ್ಟ್ರಪತಿಗಳಾದ ಡಾ. ರಾಧಾಕೃಷ್ಣನ್‌ರವರು ಸಾಂಗಲಿಯಲ್ಲಿ ಮತ್ತು ೧೬-೪-೫೪ರಂದು 'ಹಿಂದಿ ಸಂತ ಸಾಹಿತ್ಯದಲ್ಲಿಯ ಪಾರಮಾರ್ಥ ಮಾರ್ಗ'ವನ್ನು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ರಾಷ್ಟ್ರಪತಿ ಭವನ ದಿಲ್ಲಿಯಲ್ಲಿ ಬಿಡುಗಡೆ ಮಾಡಿದರು.

ಅನಂತರ ಅಗಸ್ಟ್ ೧೯೪೭ರಲ್ಲಿ ಅಹಮದಾಬಾದದಲ್ಲಿ ಗುಜರಾತ ವಿದ್ಯಾಸಭೆ ಯವರು ವಿಶೇಷ ಉಪನ್ಯಾಸ ನೀಡಲು ಗುರುದೇವ ರಾನಡೆಯವರನ್ನು ಆಮಂತ್ರಿಸಿದರು. ಅಲ್ಲಿ ಅವರು 'ನೂತನ ಭಾರತದ ಎದುರಿಗಿರುವ ಆಧ್ಯಾತ್ಮಿಕ ಕಾರ್ಯ' ಮತ್ತು 'ಮಾನವೀಯತೆ ಹೇಗೆ ಒಂದಾಗಬಲ್ಲದು' ಎಂಬ ವಿಷಯದ ಬಗೆಗೆ ಮಾತಾಡಿದರು. ಜಗತ್ತಿನಲ್ಲಿಯ ಹಲವು ವಿರೋಧಗಳನ್ನು ಸಮನ್ವಯಗೊಳಿಸುವ ಕಾರ್ಯವನ್ನು ಭಾರತೀಯ ತತ್ವಜ್ಞಾನಿಗಳು ಮಾಡಿರುವುದಾಗಿ ಹೇಳಿದರು. ಈ ಎರಡೂ ಭಾಷಣಗಳು 'The conception of spiritual

Life in Mahatma Gandhi and Hindi Saint' ಎಂದು ಗ್ರಂಥರೂಪದಲ್ಲಿ ಪ್ರಕಟಗೊಂಡವು. ಗುಜರಾತ ವಿದ್ಯಾಸಭೆಯು ಈ ಗ್ರಂಥವನ್ನು ೧೯೫೬ ಗಾಂಧೀ ಜಯಂತಿಯಂದು ಬಿಡುಗಡೆ ಮಾಡಿದರು.

ಗುರುದೇವ ರಾನಡೆಯವರ ಪಾರಮಾರ್ಥಿಕ ಶ್ರೇಷ್ಠತ್ವ ಹಾಗೂ ತತ್ವಜ್ಞಾನದ ಅಧಿಕಾರಯುತ ವ್ಯಕ್ತಿತ್ವದ ಮಾಹಿತಿಯು ಕರ್ನಾಟಕದಲ್ಲಿಯ ಅವರ ಭಕ್ತರಿಗೂ ಗೊತ್ತಾಗಲೆಂಬ ಕಾರಣಕ್ಕಾಗಿ ೧೯೫೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಭಾಷಣದ ಮಾಲಿಕೆಯನ್ನು ಏರ್ಪಡಿಸಿತು. ವಿಷಯ 'ಕನ್ನಡ ಸಂತರ ಸಾಕ್ಷಾತ್ಕಾರ ಮಾರ್ಗ'. ಈ ಭಾಷಣವು ಧಾರವಾಡದಲ್ಲಿ ನಡೆಯಿತು. ಗುರುದೇವರ ಪೂರ್ವ ಸುಕೃತದಿಂದ ಲಭಿಸಿದ ಗುರುಪರಂಪರೆಯು ಕರ್ನಾಟಕದ್ದೇ ಆಗಿದ್ದರಿಂದ, ಭಾಷಣದ ವಿಷಯವು ಅವರಿಗೆ ಪ್ರಿಯವೂ ಆಗಿತ್ತು. ಅವರ ಮಾತೃಭಾಷೆ ಮರಾಠಿ, ಶಿಕ್ಷಣ ಪಡೆದದ್ದೂ ಮರಾಠಿ ಭಾಷೆಯಲ್ಲೇ ಆಗಿದ್ದರೂ ಸಹ ಅವರ ಸದ್ಗುರುವಿನ ಕಾಲದಿಂದಲೂ, ಆ ಪರಮಾರ್ಥ ಸಂಪ್ರದಾಯದಲ್ಲಿ ಪ್ರಚಲಿತವಾಗಿದ್ದ ಅನುಭವಪರ ಕನ್ನಡ ಪದ್ಯಗಳ ಮತ್ತು ಅದೇ ರೀತಿ ಶ್ರೀ ನಿಂಬರಗಿ ಮಹಾರಾಜರ ಕನ್ನಡ ಭಾಷೆಯ ಪಾರಮಾರ್ಥಿಕ ಉಪದೇಶದ ವಾಚನ ಮನನವನ್ನು ಅವರು ನಿಯಮಿತವಾಗಿ ಮಾಡುತ್ತ ಬಂದಿದ್ದರು. ಹೀಗಾಗಿ ರಾನಡೆಯವರು ಕನ್ನಡ ಸಂತರ ಸಾಹಿತ್ಯವನ್ನು ಆಸಕ್ತಿಯಿಂದ ಅಧ್ಯಯನ ಮಾಡಿದರು.

೧೯೪೮ರಲ್ಲಿ ಶ್ರೀ ನಿಂಬರಗಿಕರ ಮಹಾರಾಜರ ಬೋಧಪರ ವಚನಗಳ ಆಧುನಿಕ ಮನಶ್ಶಾಸ್ತ್ರ, ನೀತಿಶಾಸ್ತ್ರ ಮತ್ತು ತತ್ವಶಾಸ್ತ್ರ ದೃಷ್ಟಿಯಿಂದ ವರ್ಗೀಕರಣ ಮಾಡಿ 'ಬೋಧಸುಧೆ' ಎಂಬ ಹೆಸರಿನ ಒಂದು ಅಲೌಕಿಕ ಗ್ರಂಥವನ್ನು ಗುರುದೇವ ರಾನಡೆಯವರು ಬರೆದರು. ಮೊದಲ ಪ್ರತಿಯ ಮೇಲೆ ಶ್ರೀ ಮಹಾರಾಜರ ರುಜುವನ್ನು ಪಡೆದರು. ಈ ರೀತಿ ಹಲವು ವರ್ಷಗಳ ಅಧ್ಯಯನದಿಂದ ಕನ್ನಡ ಸಂತರ ಸಾಹಿತ್ಯದಲ್ಲಿಯ ಸಾಕ್ಷಾತ್ಕಾರ ಮಾರ್ಗವನ್ನು ಅತ್ಯಂತ ಹೃದಯಂಗಮವಾದ ಪದ್ಧತಿಯಲ್ಲಿ ವಿವೇಚನೆ ಮಾಡುವ ೧೪ ಪ್ರವಚನಗಳನ್ನು ಗುರುದೇವ ರಾನಡೆಯವರು ಧಾರವಾಡ, ಬೆಳಗಾವಿ, ವಿಜಯಪುರ ಮುಂತಾದ ಕೇಂದ್ರಗಳಲ್ಲಿ ಕರ್ನಾಟಕದ ವಿಶ್ವವಿದ್ಯಾಲಯದ ಪರವಾಗಿ ಉಪನ್ಯಾಸಗಳನ್ನು ನೀಡಿದರು. ಅವರು ಸಿದ್ಧಪಡಿಸಿದ ೨೦ ಉಪನ್ಯಾಸಗಳಲ್ಲಿ ಆರು ಉಪನ್ಯಾಸ ನೀಡುವುದು ಸಾಧ್ಯವಾಗದೇ ಹಾಗೆ ಉಳಿಯಿತು. ಕರ್ನಾಟಕ ವಿಶ್ವವಿದ್ಯಾಲಯ ಶ್ರೀ ರಂಗನಾಥ ದಿವಾಕರ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ, ಅದನ್ನು ಗ್ರಂಥ ರೂಪದಲ್ಲಿ ತರುವ ಪ್ರಯತ್ನ ನಡೆದಿದೆ.

ದಿನಾಂಕ ೨೬-೮-೧೯೫೦ರಂದು ಧಾರವಾಡದ ಕವಿವಿಯಲ್ಲಿ ಉಪಕುಲಪತಿ ಗಳಾದ ನ್ಯಾ. ಜಾಗೀರದಾರರ ಅಧ್ಯಕ್ಷತೆಯಲ್ಲಿ ಗುರುದೇವ ರಾನಡೆಯವರ ಮೊದಲ ಪ್ರವಚನ ನಡೆಯಿತು. ತತ್ವಜ್ಞಾನದ ದೃಷ್ಟಿಯಿಂದ ಪ್ರತಿಯೊಬ್ಬ ನಾಗರಿಕನು ವಿಶ್ವದ ನಾಗರಿಕ. ಎಲ್ಲಿಯ ವರೆಗೆ ಪ್ರತಿಯೊಂದು ಧರ್ಮವು ದೇವರ ಭಕ್ತಿ ಮತ್ತು ಉಪಾಸನೆ ಮಾಡಲು ಉದ್ಯುಕ್ತ ಮಾಡುವುದೋ

ಅಲ್ಲಿಯವರೆಗೆ ದೇಶಕಾಲದಿಂದಾಗಿ ಮತ್ತು ಆಚಾರ ಭಿನ್ನತೆ ಯಿಂದಾಗಿ  ಬೇರೆ ಬೇರೆ ಎನಿಸುವ ಧರ್ಮವು ಮೂಲತಃ ಒಂದೇ ಆಗಿವೆ.

■■

## ಮೇಘವೃಷ್ಟಿಯಿಂದ ಉಪದೇಶ ಮತ್ತು ಅವತಾರ ಕಾರ್ಯ ಸಮಾಪ್ತಿ

ದಿನಾಂಕ ೨೫-೧೧-೧೯೫೧ರಂದು ಬೆಳಗಾವಿಯಲ್ಲಿ 'ಕರ್ನಾಟಕದ ಸಂತರ ಆತ್ಮಸಾಕ್ಷಾತ್ಕಾರ' ಎಂಬ ವಿಷಯದ ಬಗೆಗೆ ಉಪನ್ಯಾಸ ನೀಡಿದರು. ಪಾರಮಾರ್ಥಿಕ ಅನುಭವವು ಸಾಧಕನ ಅಂತರಂಗದೊಳಗಿಂದ ಬರುತ್ತದೆ. ಅದರ ವ್ಯಕ್ತಿಗತ ಹಾಗೂ ಸಾಮಾಜಿಕ ಪರಿಣಾಮವಾಗದೇ ಇರಲಾರದು. ಯಾವುದೇ ತತ್ವಜ್ಞಾನಿ ಸಂತನು ಸಾಕ್ಷಾತ್ಕಾರದ ಬಗೆಗೆ ಹೇಳುವಾಗ ಅವನ ಕಣ್ಣಿನ ಎದುರಿಗೆ ಯಾವುದೇ ಜಾತಿ ಮತ ಪಂಥವಿರುವುದಿಲ್ಲ. ತತ್ವಜ್ಞಾನಿಯಾದವನು ಸಾಕ್ಷಾತ್ಕಾರದ ತತ್ವವನ್ನು ಸಕಲರ ಉದ್ಧಾರಕ್ಕಾಗಿ ಪ್ರತಿಪಾದಿಸುತ್ತಾನೆ. ಹೀಗಾಗಿ ಆಧ್ಯಾತ್ಮ ವಿದ್ಯೆಯನ್ನು ಅನುಭವವನ್ನು ಯಾರೂ ಸಂಶಯದಿಂದ ನೋಡಬಾರದು. ಹೀನವಾಗಿಯೂ ಕಾಣಬಾರದು. ಆಳವಾದ ಸಾಕ್ಷಾತ್ಕಾರದ ಅನುಭವಕ್ಕೆ ಸದ್ಗುರುವಿನ ಅಗತ್ಯವಿದೆ ಎಂದವರು ವಿವರಿಸಿದರು. ಉದಾಹರಣೆಗಾಗಿ ಶರೀಫ ಸಾಹೇಬರ ಸಾಕ್ಷಾತ್ಕಾರದ ವಿಚಾರವನ್ನು ಹೇಳಿದರು. ಬಳಿಕ 'ದಿವ್ಯನಾಮ' ಹಾಗೂ ಉಳಿದ ನಾಮಗಳಲ್ಲಿರುವ ವ್ಯತ್ಯಾಸವನ್ನು ತಿಳಿಸಿದರು.

ದಿ. ೨೫ ನವ್ಹೆಂಬರ ೧೯೫೧ರಂದು ಲಿಂಗರಾಜ ಕಾಲೇಜಿನಲ್ಲಿ ಬಾಳಾಸಾಹೇಬ ಖೇರ ಅವರ ಅಧ್ಯಕ್ಷತೆಯಲ್ಲಿ ಉಪನ್ಯಾಸ ಮುಗಿಸಿದ ಗುರುದೇವ ರಾನಡೆಯವರ ಬೆಳಗಾವಿಯ ವಾಸ್ತವ್ಯ ಹೆಚ್ಚಾಯಿತು. ಅವರು ರೆಕ್ಸ್ ಟಾಕೀಜಿನ ಹಿಂಬದಿಯಲ್ಲಿರುವ ಶ್ರೀ ರಘುನಾಥರಾವ ರಾನಡೆಯವರ ಮನೆಯಲ್ಲಿ ತಂಗಿದ್ದರು. ಮರುದಿನ ನಾರಾಯಣ ರಾವ ಹಾಗೂ ಪ್ರಾಂತಸಾಹೇಬರಾದ ಸತ್ತಿಗೇರಿಯವರಿಗೆ ಹೇಳಿದರು– 'ದಾದಾಸಾಹೇಬ ಚಂದೂರಕರರ ಮನೆಗೆ ಹೋಗಿ ಕರ್ಪುರ ಬೆಳಗಿಸಿ ಬರೋಣ, ನಡೆಯಿರಿ' ಎಂದರು. ಯಾರಿಗೆ ಪರಿಸ್ಥಿತಿಯ ಅರಿವಿತ್ತೋ ಅವರು ಸ್ವಲ್ಪ ಹಿಂಜರಿದರು. ಕೆಲವರು ವಿರೋಧವನ್ನು ಮಾಡಿದರು. 'ಬಾ' ಎಂದು ನನಗೆ ಕರೆದಾಗ ನಾನೂ ಬೆಚ್ಚಿದೆ. ಬೆರಗೂ ಎನಿಸಿತು. ಗುರುದೇವ ರಾನಡೆ, ಸತ್ತಿಗೇರಿ, ಕುಲಕರ್ಣಿ, ತುಳಪುಳೆ, ಸಂಗೋರಾಮ, ಮನೋಹರ ದೇಶಪಾಂಡೆ ಇವರೆಲ್ಲರೂ ಸೇರಿ ೧೨೬೮ ರಾಮಲಿಂಗಖಿಂಡದಲ್ಲಿದ್ದ ಮನೆಯ ಎದುರಿಗೆ ಬಂದೆವು. ನನ್ನ ತಂದೆಯವರು ಮಹಡಿಯಲ್ಲಿ ಪಶ್ಚಿಮದ ಕಡೆಗೆ ಕೂತಿದ್ದರು. ಸತ್ತಿಗೇರಿಯವರು ಕರೆದಾಕ್ಷಣ ಅವರು ಬೆಚ್ಚಿ, ತಲೆಯ ಮೇಲೊಂದು ಟೊಪ್ಪಿಗೆ ಧರಿಸಿ ಕೆಳಗಿಳಿದು ಬಂದು ಗುರುದೇವರಿಗೆ ನಮಸ್ಕರಿಸಿದರು. ಎಲ್ಲರೂ ಮಹಡಿಗೆ ಬಂದಾಗ ಗಂಭೀರರಾಗಿ ಕೂತರು. ಗುರುದೇವರು ಮನೋಹರನಿಗೆ ಕರ್ಪೂರ ಉರಿಸಿ ಪದ್ಯ ಹೇಳಲು ಸೂಚಿಸಿದರು. ಎಲ್ಲರಿಗೂ ಸಕ್ಕರೆ ಪ್ರಸಾದ ನೀಡಿದರು. ಇದಾದ ಬಳಿಕ ೨೬ ನವ್ಹೆಂಬರ ೧೯೫೧ರಂದು ಬೆಳಗಾವಿಯಲ್ಲಿ 'ಕಬೀರನ ಆತ್ಮಸಾಕ್ಷಾತ್ಕಾರ' ಎಂಬ ವಿಷಯದ ಕುರಿತು ರಾನಡೆಯವರು ಮಾತಾಡಿದರು. ಕಬೀರನನ್ನು ಜ್ಞಾನದೇವ ತುಕಾರಾಮರಿಗೆ ಹೋಲಿಸಿದರು.

ದೇವರ ಪ್ರಾಪ್ತಿಗಾಗಿ ಹೊರಟ ಪುರುಷರು ಪ್ರಪಂಚದ ಬಗೆಗೆ ಅನಾಸಕ್ತಿ ಮತ್ತು ನಿರ್ಮಲ ವೈರಾಗ್ಯವನ್ನು ತಾಳಿರಬೇಕು ಎನ್ನುವುದು ಕಬೀರನ ಹೇಳಿಕೆಯಾಗಿದೆ ಎಂದರು. ದೇವರ ಸಾಕ್ಷಾತ್ಕಾರವಾದ ಭಕ್ತನ ಚಿತ್ತವು ಚೈತನ್ಯದೊಂದಿಗೆ ಜೀವ ಶಿವದೊಂದಿಗೆ ಏಕರೂಪವಾಗುತ್ತದೆ.

೯-೧-೧೯೫೪ರಲ್ಲಿ ಬಿಡುಗಡೆಗೊಂಡ ರಾನಡೆಯವರ 'ಪರಮಾರ್ಥ ಸೋಪಾನ' ಎಂಬ ಗ್ರಂಥದ ಬಗೆ ಡಾ. ರಾಧಾಕೃಷ್ಣನ್ ಮಾಡಿದ ಪ್ರಶಂಸೆ ಹೀಗಿದೆ– '...ನಾನು ಹಲವಾರು ವರ್ಷಗಳಿಂದ ಡಾ. ರಾನಡೆಯವರನ್ನು ಬಲ್ಲೆ. ಜೀವನದಲ್ಲಿಯ ಶ್ರೇಷ್ಠ ಧ್ಯೇಯಕ್ಕಾಗಿ ಆತ್ಮಸಮರ್ಪಣೆಯ ಭಾವನೆಯಿಂದ ಬೆಂಬಲಿಸುವುದು ನನಗಿಂತಲೂ ಹೆಚ್ಚು ಪ್ರಮಾಣದಲ್ಲಿ ಅವರಿಗೆ ಸಾಧ್ಯವಾಗಿದೆ. ನನ್ನ ಜೀವನದ ಚಟುವಟಿಕೆಗಳು ಚೆದುರಿ ಹೋಗಿದ್ದು, ಇತ್ತೀಚಿನ ಕೆಲವು ವರ್ಷಗಳಲ್ಲಿ ತತ್ವಜ್ಞಾನ ಮತ್ತು ಧರ್ಮ ಈ ವಿಷಯದ ಹೊರತು ಉಳಿದ ಕಡೆಗೇ ಕಾಲ ಮತ್ತು ಗಮನ ಹೋಗಿದೆ. ಆದರೂ ತತ್ವಜ್ಞಾನವೇ ನನ್ನ ಜೀವನದ ಪ್ರಿಯವಿಷಯ. ರಾನಡೆಯವರ ಬಾಬತ್ತಿನಲ್ಲಿ ತತ್ವಜ್ಞಾನವು (ದಿವ್ಯ)ಜ್ಞಾನದ ಸಾಧನೆಯಾಗಿದೆ. ಕೇವಲ ಬೌದ್ಧಿಕ ಕಸರತ್ತಲ್ಲ, ಅವರಿಗೆ ತತ್ವಜ್ಞಾನವೆಂದರೆ ಅಂತರಾತ್ಮದ ಧ್ಯಾನ ಮತ್ತು ಆತ್ಮಸಮರ್ಪಣೆಯ ಜೀವನ ಕ್ರಮವಾಗಿದೆ.... ನೀವು ಈ ಸಂಸ್ಥೆಗೆ 'ಅಧ್ಯಾತ್ಮ ವಿದ್ಯಾ ಮಂದಿರ' ಎಂಬ ಸಾರ್ಥಕ ಹೆಸರು ನೀಡಿದ್ದೀರಿ. ಪ್ರತಿಯೊಂದು ಧರ್ಮ ಮತ್ತು ತತ್ವಜ್ಞಾನದ ಧ್ಯೇಯವು ಆತ್ಮದ ಜ್ಞಾನವನ್ನು ಮಾಡಿಕೊಳ್ಳುವುದು ಮತ್ತು ಅದರೊಂದಿಗೆ ಏಕರೂಪಗೊಳ್ಳುವುದೇ ಆಗಿದೆ. ಆತ್ಮಸಾಕ್ಷಾತ್ಕಾರದ ಮೂಲಭೂತ ಬುನಾದಿಯ ಮೇಲೆ ಅದು ನಿರ್ಮಾಣಗೊಂಡಿರುತ್ತದೆ....'

ಏಪ್ರಿಲ್ ೧೯೫೪ ಮತ್ತು ಜುಲೈ ೧೯೫೪ರಲ್ಲಿ ಅಮೆರಿಕೆಯ ಪ್ರೊ. ಬರ್ಚ ಅವರು ಅಲಹಾಬಾದ ಹಾಗೂ ನಿಂಬಾಳಕ್ಕೆ ಭೇಟಿ ನೀಡಿ ವಾಸ್ತವ್ಯ ಮಾಡಿದರು. ೨೨-೧೧-೫೪ರಂದು ಫ್ರಾನ್ಸಿನ ಮಾರ್ಕೆಟ್ ಪತ್ನಿ ಸಹಿತ ನಿಂಬಾಳ ಮತ್ತು ನಿಂಬರಗಿಗೆ ಬಂದು ನಾಮವನ್ನು ಪಡೆದು ತಿಂಗಳವರೆಗೆ ವಾಸ್ತವ್ಯ ಮಾಡಿದರು.

ಮಾರ್ಚ ೧೯೫೪ರಲ್ಲಿ ಅಲಹಾಬಾದದಲ್ಲಿ ಪಂ. ಮದನ ಮೋಹನ ಮಾಲವೀಯ ಮಹಾವಿದ್ಯಾಲಯದಲ್ಲಿ ಶ್ರೀ ಗುರುದೇವ ರಾನಡೆಯವರು ಶ್ರೀ ಮದ್ಭಗವದ್ಗೀತೆಯ ಬಗೆಗೆ ತೌಲನಿಕವಾದ ವಿಚಾರವನ್ನು ಮಂಡಿಸಿದರು. ವಿವಿಧ ಆಚಾರ್ಯರ ಮತ್ತು ಆಧುನಿಕ ತತ್ವಜ್ಞಾನಿಗಳು ಮಂಡಿಸಿದ ಹಲವು ಆಲೋಚನೆಗಳ ಚಕ್ರವ್ಯೂಹದಿಂದ ಮಾರ್ಗ ಹುಡುಕುವ ಪ್ರಯತ್ನ ಮಾಡಿದರು. ಮೊದಲಿಗೆ ಅವರು ಉಪನಿಷತ್ತು, ಮಹಾಭಾರತ, ಸಾಂಖ್ಯ ಮತ್ತು ಯೋಗ ಇವುಗಳಿಗೂ ಗೀತೆಗೂ ಯಾವ ಬಗೆಯ ಸಂಬಂಧವಿದೆ ಎಂಬ ಬಗೆಗೆ ಹೇಳಿದರು. ಗೀತೆಯ ಪ್ರತಿಯೊಂದು ಅಧ್ಯಾಯದ ಕೊನೆಗೆ 'ಶ್ರೀಮದ್ಭಗವದ್ಗೀತಾಸು ಉಪನಿಷತ್ತು' ಎಂಬ ಶಾಬ್ದಿಕ ರಚನೆಯಿದೆ. ಹೀಗಾಗಿ ಕೆಲವರು ಗೀತೆಯೂ ಮೊದಲಿಗೆ ಚಿಕ್ಕ ಉಪನಿಷತ್ತಿನ ರೂಪದಲ್ಲಿಯೇ ಇತ್ತು ಎಂದೆನ್ನುತ್ತಾರೆ. ಮತ್ತೆ ಕೆಲವರು ಮಹಾಭಾರತದ ಪ್ರಕ್ಷಿಪ್ತ ಭಾಗವೆನ್ನುತ್ತಾರೆ.

ಹಳೆಯ ಸಾಂಖ್ಯಶಾಸ್ತ್ರವು ಗೀತೆಗೆ ಸಮಕಾಲೀನವಾಗಿತ್ತು. ಅದು ಸಾಂಪ್ರತ ಸಾಂಖ್ಯದಂತೆ ನಿರೀಶ್ವರವಾಗಿರಲಿಲ್ಲ. ಸಾಂಪ್ರತದ ಯೋಗಶಾಸ್ತ್ರವು ದೇವರನ್ನು ಒಪ್ಪುತ್ತದೆ. ಆದರೆ ಆ ದೇವರ ಸ್ವರೂಪವು ತೀರ ಸಾಮಾನ್ಯವಾಗಿದೆ. ಸಾಂಖ್ಯ ಮತ್ತು ಯೋಗಶಾಸ್ತ್ರವು 'ಪುರುಷನ' ಸ್ವರೂಪದಲ್ಲಿಯ ಅಪೂರ್ಣತೆ ಮತ್ತು ದೋಷವನ್ನು ನಾಶ ಪಡಿಸಿ 'ಪುರುಷನೆಂದರೆ ದೇವರು' ಎಂಬ ದಿವ್ಯ ಸಿದ್ಧಾಂತವನ್ನು ಗೀತೆಯೇ ಮಂಡಿಸಿತು.

ಶ್ರೀ ಶಂಕರ, ರಾಮಾನುಜ, ಮಧ್ವರು ಅನುಕ್ರಮವಾಗಿ ಕೇವಲಾದ್ವೈತ, ವಿಶಿಷ್ಟಾದ್ವೈತ ಮತ್ತು ಶುದ್ಧದ್ವೈತ ಸಿದ್ಧಾಂತಗಳಿಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ಗೀತೆಯ ವಚನಗಳನ್ನು ಹಿಗ್ಗಿಸಿ ಅರ್ಥೈಸಿದ್ದಾರೆ. ಆಧುನಿಕ ಪಾಶ್ಚಾತ್ಯ ವಿದ್ವಾಂಸರೂ ಸಹ ಗೀತೆಯನ್ನು ವಸ್ತುನಿಷ್ಠವಾಗಿ ಅರ್ಥೈಸಲಿಲ್ಲ. ಗಾರ್ಬೆಯು ಗೀತೆಯನ್ನು ಸಗುಣದೇವರ ಸಿದ್ಧಾಂತವನ್ನು ಮಂಡಿಸಲು ಏಕಾಂಗ ಪದ್ಧತಿಯನ್ನು ಅನುಸರಿಸಿದ ಹಾಲ್ಟ್‌ಯಿಮನ್‌ನ ಪ್ರಕಾರ ಇದರ ವಿರುದ್ಧ ಗೀತೆಯು ಅದ್ವೈತ ಮತ್ತು ನಿರ್ಗುಣಪರವಾಗಿದೆ ಎಂದಿತ್ತು. ಮೂರನೆಯ ಲೇಖಕ ಆಟೋನ ಅಭಿಪ್ರಾಯವು ಗೌರವಾನ್ವಿತವೂ ಯೋಚಿಸು ವಂತಹದೂ ಆಗಿದೆ. ೧೯೨೭ರಲ್ಲಿ ರಾನಡೆಯವರು ಅವರನ್ನು ಪುಣೆಯಲ್ಲಿ ಭೇಟಿಯಾಗಿ ವಿಚಾರ ವಿನಿಮಯ ಮಾಡುವ ಅವಕಾಶ ಲಭಿಸಿತ್ತು. ಅವರ 'Idea of the Holy' (ಪರಮ ಪವಿತ್ರನ ಸ್ವರೂಪ) ಈ ಗ್ರಂಥವು ಅತ್ಯಂತ ಶ್ರೇಷ್ಠ ದರ್ಜೆಯದಾಗಿದೆ. ದೃಶ್ಯ ವಿಶ್ವದಾಚೆಗೆ ಅದರ ಕಾರಣವಾದ ಆದಿಶಕ್ತಿ ಎಂದರೆ 'Numen'ಈ ಸತ್ಯತತ್ವದ ದೃಷ್ಟಿಯಿಂದ ಆಟೋ ಗೀತೆಯನ್ನು ಅರ್ಥೈಸಿದ್ದಾನೆ.

ಅದಾದ ಬಳಿಕ ರಾನಡೆಯವರು ತಿಲಕ, ಗಾಂಧಿ ಮತ್ತು ಶ್ರೀ ಅರವಿಂದರು ಗೀತೆಯನ್ನು ಯಾವ ದೃಷ್ಟಿಕೋನದಿಂದ ಕಾಣುತ್ತಾರೆ ಎಂಬ ಬಗೆಗೆ ವಿವೇಚನೆಯನ್ನು ಕೈಕೊಂಡರು. ತಿಲಕರು ಗೀತಾರಹಸ್ಯದಲ್ಲಿ, ನಿಷ್ಕಾಮಕರ್ಮಯೋಗದ ಸಿದ್ಧಾಂತಕ್ಕೆ ಅನುಗುಣವಾಗಿ ಗೀತೆಯಲ್ಲಿಯ ನೀತಿದರ್ಶನದ ವಿಚಾರವನ್ನು ಮಂಡಿಸಿದರು. ಆದರೆ ಈ ಸಿದ್ಧಾಂತಕ್ಕೆ ಮಿತಿಯಿದೆ ಎಂದು ಅವರು ತಿಲಕರಿಗೂ ಹೇಳಿದ್ದರಂತೆ. ಮಹಾತ್ಮಾ ಗಾಂಧೀಯವರು ಎರಡು ಮಹತ್ವದ ವಿಷಯವನ್ನು ಮಂಡಿಸಿದರು. ಗೀತೆಯು ಒಂದು ರೂಪಕ. ಕೃಷ್ಣ–ಅರ್ಜುನರು ಚಾರಿತ್ರಿಕ ವ್ಯಕ್ತಿಗಳು. ಅಲ್ಲಿಯ ಸಂವಾದವು ಜೀವಾತ್ಮ ಹಾಗೂ ಪರಮಾತ್ಮರ ನಡುವಿನ ಒಂದು ರೂಪಕವಾಗಿದೆ ಎಂದು ಗಾಂಧೀಜಿ ಹೇಳಿದರು. ಅವರ ಪ್ರಕಾರ ಸತ್ಯ ಮತ್ತು ಅಹಿಂಸೆಯೇ ಗೀತೆಯ ಸಾರವಾಗಿದ್ದು, ಅವರು ಗೀತೆಗೆ 'ಅನಾಸಕ್ತಿಯೋಗ' ಎಂದು ಕರೆದರು. ಶ್ರೀ ಅರವಿಂದರ ಗೀತೆಯ ಸಿದ್ಧಾಂತವನ್ನು ರಾನಡೆಯವರು ಗೌರವದಿಂದ ಉಲ್ಲೇಖಿಸಿದ್ದಾರೆ. ಸೃಷ್ಟಿಯಲ್ಲಿ ಜಡದಿಂದ ಸೂಕ್ಷ್ಮ ಕಡೆಗೆ, ಸೂಕ್ಷ್ಮಮನದಿಂದ ಅತೀ ಸೂಕ್ಷ್ಮ ಮನದ ಕಡಗೆ ಮತ್ತು ಅತೀ ಸೂಕ್ಷ್ಮ ಮನದಿಂದ ಆತ್ಮದ ಕಡೆಗೆ ಉತ್ಕ್ರಾಂತಿ ಮಾಡುತ್ತದೆ ಎಂಬ ಅರವಿಂದರ ಸಿದ್ಧಾಂತವು ಅಧ್ಯಯನ ಕಾರರಿಗೆ ಗೊತ್ತಿದೆ. ಯೋಗಿ ಅರವಿಂದರಲ್ಲಿ ತತ್ವ ಚಿಂತನೆಗ ಅಗತ್ಯವಿರುವ ಬುದ್ಧಿಯ

ತೀವ್ರತೆಯಿತ್ತು. ದೀರ್ಘ ತಪದ ಬಳಿಕ ಅವರು ತಮ್ಮ ಆತ್ಮಾನಂದದ ಸಿದ್ಧಾಂತವನ್ನು ಮಂಡಿಸಿದರು. ಅದು ಉತ್ತಮವಾಗಿ ಉಳಿಯುವಂತಹದೂ ಆಗಿದೆ ಎಂದು ರಾನಡೆಯವರು ವಿವರಿಸಿದರು. ಗೀತೆಗೆ ದೇವರ ಸಾಕ್ಷಾತ್ಕಾರದ ತತ್ವಜ್ಞಾನದ ಹೇಳಬೇಕಾಗಿದೆ. ಗೀತೆಯು ಸಾಕ್ಷಾತ್ಕಾರ ತತ್ವಜ್ಞಾನದ ಮಂದಿರವನ್ನು ನಿರ್ಮಿಸಿದೆ–ಎಂದು ಗುರುದೇವ ರಾನಡೆಯವರು ನಂಬಿದ್ದರು. ಸಾಕ್ಷಾತ್ಕಾರದ ಸೂತ್ರದಿಂದಲೇ ಗುರುದೇವ ರಾನಡೆಯವರು ಗೀತೆಯ ಬಗೆಗೆ ಬರೆದಿದ್ದಾರೆ.

೨–೩–೧೯೫೨ರಲ್ಲಿ ರಾನಡೆಯವರು ದಿಲ್ಲಿಗೆ ಮೊದಲ ಸಲ ಭೇಟಿ ನೀಡಿದರು. ಆಗವರು ಮೂರು ಉಪನ್ಯಾಸವನ್ನು ನೀಡಿದರು. ಕಾನಸ್ಟಿಟ್ಯೂಶನ್ ಕ್ಲಬ್‌ನಲ್ಲಿ ಎರಡು ಭಾಷಣವನ್ನು ನೀಡಿದರು. 1. Genesis of Spritual realisation . 2. Growth of spiritual realisation, ಮೂರನೇ ಭಾಷಣ ರಾಷ್ಟ್ರಪತಿ ಭುವನದಲ್ಲಿ ನಡೆಯಿತು. ವಿಷಯ Indian Philosophy.

ದಿನಾಂಕ ೧೫–೪–೧೯೫೪ ಮತ್ತು ೧೬.೪.೧೯೫೪ ದಿಲ್ಲಿಯ ರಾಷ್ಟ್ರಪತಿ ಭವನದಲ್ಲಿಕಾಂಟ್ ಮತ್ತು ಗೀತೆಯ ತತ್ವಜ್ಞಾನದಲ್ಲಿರುವ ಸಾಮ್ಯ ಸ್ಥಳದ ಆಧಾರದಿಂದ ರಾನಡೆಯವರು ಮೇಲಿನ ವಿಷಯದ ಬಗೆಗೆ ವಿವೇಚನೆ ಮಾಡಿದರು. ಕಾಂಟ್‌ನ ಪ್ರಭಾವದಿಂದ ಗೀತೆಯಲ್ಲಿಯ ವಿರೋಧಾಭಾಸವನ್ನು ಕಂಡು ಹಿಡಿದು ಸಮನ್ವಯವನ್ನು ಪ್ರತಿಪಾದಿಸಿದರು. ಈ ಕುರಿತು ನಾಗಪುರದಲ್ಲಿ ೧೯೨೮ರಲ್ಲೇ ಉಪನ್ಯಾಸ ನೀಡಿದ್ದರು.

೧೯೫೫ರಲ್ಲಿ ರಾನಡೆಯವರು ಆಧ್ಯಾತ್ಮಗ್ರಂಥ ಮಾಲಿಕೆಯಲ್ಲಿ ಅಪ್ರಕಟಿತವಾಗಿ ಉಳಿದಿರುವ ೫ನೇ ಕುಸುಮವಾದ 'ಶ್ರೀ ಏಕನಾಥ ವಚನಾಮೃತ'ವನ್ನು ಪ್ರಕಟಿಸಿದರು. ಇದರಿಂದಾಗಿ ಆದರ್ಶ ಗೃಹಸ್ಥಾಶ್ರಮಿ ಸಂತರಾದ ಶ್ರೀ ಏಕನಾಥ ಮಹಾರಾಜರು ಬರೆದ ಭಾಗವತ ಏಕಾದಶ ಸ್ಕಂದದ ಬಗೆಗಿನ ಆಯ್ದು ಓವ್ಹಿ, ಭಾವಾರ್ಥ ರಾಮಾಯಣ ದಲ್ಲಿಯ ಸುವಿಚಾರ, ಉಳಿದ ಉದ್ಬೋಧಕ ವಿಚಾರಗಳು ಭಕ್ತರಿಗೆ ಸುಲಭವಾಗಿ ಓದಲು ಸಿಕ್ಕಂತಾಯಿತು.

ಹೀಗೆ ರಾನಡೆಯವರು ಪರಮಾರ್ಥ ಜ್ಞಾನದಾನದ ಅನ್ನಛತ್ರವನ್ನು ಅಖಂಡವಾಗಿ ಮುಂದುವರೆಸಿದರು. ೧೯೫೬ರಲ್ಲಿ ಮಹಾತ್ಮಾ ಗಾಂಧಿ ಹಾಗೂ ಹಿಂದಿ ಸಂತರಲ್ಲಿರುವ ಪಾರಮಾರ್ಥಿಕ ಜೀವನಕ್ಕೆ ಸಂಬಂಧಿಸಿದ ವಿಚಾರಗಳನ್ನು ಸಂಗ್ರಹಿಸಿ, ಇಂಗ್ಲಿಷ್ ಭಾಷೆಯಲ್ಲಿ ಅದರ ವಿಶ್ಲೇಷಣೆ ಮಾಡಿದು. ಇದನ್ನೇ ಗುಜರಾತ ವಿದ್ಯಾಸಭೆಯವರು ಗ್ರಂಥರೂಪದಲ್ಲಿ ಪ್ರಕಟಿಸಿದರು. ಇದು ಗಾಂಧಿ ಜಯಂತಿಯಂದು ಬಿಡುಗಡೆ ಗೊಂಡಿತು.

ಗುರುದೇವ ರಾನಡೆಯವರು ತಮ್ಮ ಜನ್ಮಗ್ರಾಮವಾದ ಜಮಖಂಡಿಗೆ ಬರಬೇಕೆಂಬ ಭಾವನೆ ಆ ಊರಿನ ಜನರಲ್ಲಿತ್ತು. ಆದರೂ ಸಾಧ್ಯವಾಗಿರಲಿಲ್ಲ. ನಿಂಬಾಳಕ್ಕೆ ಹೋಗಿ ಜಮಖಂಡಿ ಜನರು ಒತ್ತಾಯಿಸುತ್ತಲೇ ಇದ್ದರು. ಕೊನೆಗೆ ೧೯೫೬ರಲ್ಲಿ ಭಾವೂರಾವ ಆಪ್ಟೆಯವರ ಮುಂದಾಳತ್ವದಲ್ಲಿ ಜನರು ಧರಣಿ ಹಿಡಿದು ಕೂತೇ ಬಿಟ್ಟರು. ಪರಶುರಾಮ ವಿದ್ಯಾಲಯದಲ್ಲಿ ರಾನಡೆಯವರ ತೈಲಚಿತ್ರವನ್ನು ತೂಗು ಹಾಕುವುದು, ಮತ್ತು ೩ ಜುಲೈ ರಂದು ಅವರ ೭೧ನೇ

ಜನ್ಮದಿನವನ್ನು ಸಾರ್ವಜನಿಕವಾಗಿ ಆಚರಿಸುವ ಯೋಜನೆಯನ್ನು ಹಾಕಿಕೊಂಡರು. ರಾನಡೆಯವರಿಗೆ ಶ್ರೀ ಸದ್ಗುರುವಿನ ಅನುಮತಿ ಸಿಕ್ಕಿರಬೇಕು, ಅವರು ಈ ಆಮಂತ್ರಣವನ್ನು ಸ್ವೀಕರಿಸಿದರು. ೧ ರಿಂದ ೩ ಜುಲೈ ವರೆಗೆ ರಾಮತೀರ್ಥದಲ್ಲಿ ನಾಮ ಸಪ್ತಾಹವನ್ನು ಆಚರಿಸಬೇಕು. ಮುಕ್ತಾಯ ಸಮಾರಂಭಕ್ಕೆ ತಾವು ಬರುವುದಾಗಿ ಹೇಳಿದರು.

ರಾನಡೆಯವರೇ ಸ್ವತಃ ಕೋಟು ಪಗಡಿ ಉಪ್ಪರಣೆ ಹಾಕಿ ಕೂತ ಫೋಟೊ ತೆಗೆಸಿಕೊಂಡರು. ಇದು ಅಲ್ಲಿಯ ಎಲ್ಲರ ಮನೆಯಲ್ಲೂ ತೂಗು ಹಾಕಲಾಗಿದೆ. ತೈಲ ಚಿತ್ರವನ್ನು ಶ್ರೀ ಜಾಂಬಳಿಕರರು ಬಿಡಿಸಿದರು. ಅದನ್ನು ಶ್ರೀ ಕಂಠಿಯವರ ಹಸ್ತದಿಂದ ಅನಾವರಣಗೊಳಿಸಿ ವಿದ್ಯಾಲಯದಲ್ಲಿ ತೂಗು ಹಾಕಲಾಯಿತು. ಜುಲೈ ೨ರಂದು ಥೇಟರ್‌ನಲ್ಲಿ ಸಾರ್ವಜನಿಕ ಸಮಾರಂಭ ಜರುಗಿತು. ದೇಶಪಾಂಡೆ ಗಂಗಾಧರರಾವ ಅವರಿಂದ ಭಾಷಣ ನಡೆಯಿತು. ಅದೇ ಕಾಲಕ್ಕೆ ಸನ್ಮಾನ ಪತ್ರವನ್ನು ನೀಡಲಾಯಿತು. ಶ್ರೀ ಗುರುದೇವ ರಾನಡೆಯವರು ವಿಶ್ವದ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರು ಎಂದು ಮಾನಪತ್ರದಲ್ಲಿ ಬಣ್ಣಿಸಲಾಗಿದೆ.

ಜಮಖಂಡಿಯ ವಾಸ್ತವ್ಯದಲ್ಲಿ ಅವರು ಗೀತೆಯ ಬಗೆಗೆ ಪ್ರಸ್ತಾವನೆಯನ್ನು ಬರೆದು ಮುಗಿಸಿದರು. ಸದ್ಗುರು ಭಾವೂಸಾಹೇಬ ಮಹಾರಾಜರು ಭೇಟಿ ನೀಡಿದ ಸ್ಥಳಗಳಿಗೆ ಹೋಗಿ ಕರ್ಪೂರವನ್ನು ಉರಿಸಿದರು. ಇದರಿಂದ ಅವರಿಗೆ ನಾಮ ಸಿಕ್ಕ ಶ್ರೀ ಕಟಗಿಯವರ ಮನೆಗೂ ಮಹತ್ವ ಬಂತು. ಅವರು ಜಮಖಂಡಿಯಲ್ಲಿ ಮೂರು ವಾರ ತಂಗಿದರು. ರಾಣಿ ಸಾಹೇಬರು ಅವರ ಸತ್ಕಾರ ಸಮಿತಿಯ ಅಧ್ಯಕ್ಷರಾಗಿದ್ದರು. ಹೀಗಾಗಿ ಎಲ್ಲರೂ ರಾನಡೆಯವರ ಸೇವೆಗೆ ಮುಂದಾದರು.

ಅಮೃತ ಮಹೋತ್ಸವ ಸಮಾರಂಭದ ನಿಮಿತ್ತದಿಂದಾಗಿ ಸಮಿತಿಯು 'Philosophical and other essays-I' ಪ್ರಕಟಿಸಿತು.

ಜುಲೈ ೩ ರಂದು ಮಾನಪತ್ರ ಸಮರ್ಪಣೆ ಹಾಗೂ ಉಳಿದವರ ಭಾಷಣದ ಬಳಿಕ ಗುರುದೇವ ರಾನಡೆಯವರು ಸನ್ಮಾನಕ್ಕೆ ಉತ್ತರ ನೀಡಿದರು. ಗುಪ್ತವಾದ ರೀತಿಯಲ್ಲಿ ಏಕರೂಪಗೊಂಡ ಸದ್ಗುರುವಿನ ಮಹತ್ವವನ್ನು ಬಣ್ಣಿಸಿ, ಅವರಿಂದ, ಸುಕೃತದಿಂದ ಲಭಿಸಿದ ದಿವ್ಯ ನಾಮದ ಸ್ಮರಣವೇ ತಮ್ಮ ಜೀವನದಲ್ಲಿಯ ಶ್ರೇಷ್ಠ ಕರ್ತವ್ಯವಾಗಿದೆ ಎಂದು ಹೇಳಿದರು.

ಅವರು ಜಮಖಂಡಿಯಲ್ಲಿದ್ದಾಗ ಸುಮಾರು ೪೦೦–೫೦೦ ಮುಮುಕ್ಷುಗಳಿಗೆ 'ನಾಮ'ವನ್ನು ನೀಡಿ ಪಾವನಗೊಳಿಸಿದರು. ಈ ರೀತಿ 'ಮೇಘವೃಷ್ಟಿ'ಯ ಮೂಲಕ ನಾಮಭಕ್ತಿಯ ಪ್ರಸಾರ ಮಾಡಿ, ಜಮಖಂಡಿಯಲ್ಲಿ ಸೇರಿದ ಅಪಾರ ಜನ ಸಮುದಾಯ ದಲ್ಲಿ ಪಾರಮಾರ್ಥದ ಆನಂದವನ್ನು ಅನುಭವಿಸಿ, ರಾನಡೆಯವರು ನಿಂಬಾಳ ಆಶ್ರಮಕ್ಕೆ ಮರಳಿದರು.

ಮುಂದೆ ಒಂದೇ ವರುಷದ ಒಳಗೆ ಅವರ ಅವತಾರ ಸಮಾಪ್ತಗೊಂಡಿರುವುದು ಕಂಡಾಗ ಜಮಖಂಡಿಗೆ ಅವರು ಕೊನೆಯ ವಿದಾಯ ಹೇಳಲೆಂದೇ ಬಂದಿರಬೇಕೆಂದು ಅನಿಸದೇ ಇರದು. ಜಮಖಂಡಿಗೆ ಬಂದಾಗ ಅವರು ರಾಮತೀರ್ಥದ ರಾಮೇಶ್ವರ ದರ್ಶನಕ್ಕೆ ಹೋದಾಗ ಶಂಕರದೇವರು ತಮ್ಮನ್ನು ತೊಡೆಯ ಮೇಲೆ ಕೂರಿಸಿಕೊಂಡ ದೃಷ್ಟಾಂತ ಅವರಿಗಾಗಿದ್ದು ಅವರ ಮನೋಗತಕ್ಕೆ ಪುಷ್ಟಿಕಾರಕವಾಗಿರಬಹುದೇ? ಎಂದಿನಂತೆ ನಿಂಬಾಳ ಆಶ್ರಮದಲ್ಲಿ ನಸುಕಿನ ಮೂರಕ್ಕೆ ಸಾಧಕರು ವೈಯಕ್ತಿಕವಾಗಿ ನಾಮಸ್ಮರಣೆಯನ್ನು ಆರಂಭಿಸುತ್ತಾರೆ. ನಸುಕಿನ ೫–೬ಕ್ಕೆ ಕಕ್ಕಡಾರತಿ ಬಳಿಕ ಚಹಾ ಮತ್ತೆ ೮ ರಿಂದ ೧೨ ವರೆಗೆ ನಾಮಧಾರಕರು ಸಾಮೂಹಿಕವಾಗಿ ನಾಮಸ್ಮರಣೆಗೆ ಹಾಜರಾಗುತ್ತಾರೆ. ಆಗಾಗ ನಡುವೆ ಪಾರಮಾರ್ಥಿಕ ಗ್ರಂಥದ ಪಠಣ. ಹಾಡುಗಳನ್ನು ಹೇಳಲಾಗುತ್ತಿತ್ತು. ಗುರುದೇವರ ಆರೋಗ್ಯವನ್ನು ಗಮನಿಸಿ ಸತ್ಸಂಗ ನಡೆಯುತ್ತಿತ್ತು. ಆಗ ದಾಸಬೋಧೆಯ ಅಥವಾ ಸದ್ಗುರು ಮಹಾರಾಜರ ಪತ್ರಗಳ ವಾಚನ. ನಡುನಡುವೆ ಗುರುದೇವ ರಾನಡೆಯವರಿಂದ ಉದ್ಬೋಧಕ ವಿಚಾರಗಳ ಮಂಡನೆ ಗುರುದೇವರ ಸಾನಿಧ್ಯದ ಕಾಲವೆಂದರೆ ಸಕಲರಿಗೂ ಸ್ಫೂರ್ತಿ ನೀಡುವಂತಹದಾಗಿರುತ್ತಿತ್ತು. ಇದಾದ ಬಳಿಕ ಭಜನೆ, ಆರತಿ ಮುಗಿದಾಗ ಬೆಳಗಿನ ಕಾರ್ಯಕ್ರಮ ಮುಕ್ತಾಯವಾಗುತ್ತಿತ್ತು. ಮಧ್ಯಾಹ್ನ ಸರ್ವರಿಗೂ ಅಲ್ಪೋಪಹಾರ ವಿತರಣೆ, ಮಧ್ಯಾಹ್ನ ೩ ರಿಂದ ೪ ರ ಸುಮಾರಿಗೆ ಭೋಜನ. ಅನಂತರ ಗುರುದೇವರು ವರ್ತಮಾನ ಪತ್ರಿಕೆಯನ್ನು ಓದುತ್ತಿದ್ದರು. ಬಳಿಕ ಸ್ನಾನ ಮುಗಿಸಿ ನೇಮ (ನಾಮಸ್ಮರಣೆ) ಸಾಯಂಕಾಲ ಮತ್ತೆ ಭಜನೆ, ಆರತಿ ನಡೆಯುತ್ತಿತ್ತು. ರಾತ್ರಿ ಆಗೀಗ ಗುರುದೇವರ ಸತ್ಸಂಗದ ಅವಕಾಶ. ಅವರು ಹೇಳಿದ ವಿಚಾರದಿಂದ ಸಾಧಕರ ನಾಮಭಕ್ತಿಯು ವೃದ್ಧಿಸುತ್ತಿತ್ತು. ಕೆಲವು ಸಾಧಕರು ಇಂಥ ಮೌಲಿಕ ವಿಚಾರವನ್ನು ಬರೆದಿಡುತ್ತಿದ್ದರು. ನಾನೂ ಬರೆದಿರಿಸಿದ್ದೇನೆ.

ನಿಂಬಾಳ ಆಶ್ರಮದಲ್ಲಿ ಪ್ರತಿವರ್ಷ ನಾಲ್ಕು ನಾಮಸಪ್ತಾಹ ಆಚರಿಸಲಾಗುತ್ತಿತ್ತು. ಶ್ರೀ ನಿಂಬರಗಿಕರ ಮಹಾರಾಜರ ಚೈತ್ರ ಸಪ್ತಾಹ, ಶ್ರಾವಣ ತಿಂಗಳ ಒಂದು ತಿಂಗಳ ನಾಮಸಪ್ತಾಹ. ದೀಪಾವಳಿ ಕಾಲಕ್ಕೆ ಜರುಗುವ ಮಾರ್ಗಶಿಷ್ಯ ಸಪ್ತಾಹ. ಅನಂತರ ಪೌಷ್ಯ ಶು. ೬ ರಿಂದ (ಶ್ರೀ ಅಂಬುರಾವ ಮಹಾರಾಜರ ಪುಣ್ಯತಿಥಿಯಿಂದ) ಮಾಘ ಶು. ೩ ವರೆಗೆ (ಶ್ರೀ ಭಾವೂಸಾಹೇಬ ಮಹಾರಾಜರ ಪುಣ್ಯತಿಥಿಯ ವರೆಗೆ) ತಿಂಗಳ ಕಾಲ ಜರುಗುವ ಪೌಷ್ಯ ಮಾಘ ಸಪ್ತಾಹ. ಈ ಕಾಲದಲ್ಲಿ ಎಂದಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಾಧಕರು ಸೇರಿ, ಉತ್ಕಟ ಭಕ್ತಿಯುಕ್ತ ನೇಮ, ಪುರಾಣ ಪಠಣ ಮತ್ತು ಭಜನೆ ಜರುಗುತ್ತಿತ್ತು. ಈ ರೀತಿ ನಿಂಬಾಳ ಆಶ್ರಮದ ಶ್ರೀಗುರುದೇವರ ಸಾನಿಧ್ಯದಲ್ಲಿಯ ಕೊನೆಯ ವರ್ಷವು ಸ್ಫೂರ್ತಿದಾಯಕ ಪಾರಮಾರ್ಥಿಕ ಕಾರ್ಯಕ್ರಮ ನಡೆದು ಭಕ್ತರ ಚಿರಸ್ಮರಣೆ ಯಲ್ಲಿ ಉಳಿದುಕೊಂಡಿದೆ.

೨ ನವ್ಹೆಂಬರ ೧೯೫೬ರಂದು ನಿಂಬಾಳಕ್ಕೆ ಹೋದಾಗ, ಶ್ರೀಗುರುದೇವ ರಾನಡೆ ಯವರ ದರ್ಶನ, ಸ್ಪರ್ಶ ಹಾಗೂ ಸಂಭಾಷಣೆ ಮಾಡುವ ಅವಕಾಶ ನನಗೆ ಲಭಿಸಿತು. ನನ್ನ

ಅಂತರಂಗವನ್ನು ಕಲಕುವ ಅವರು ಹೇಳಿದ ಮಾತು ಹೃದಯದಲ್ಲಿ ಸ್ಥಾಪಿತ ಗೊಂಡಿದೆ. 'ದೇವರ ಇಚ್ಛೆಯಂತೆ ಪ್ರಾಪ್ತವಾದ ಪರಿಸ್ಥಿತಿಯಲ್ಲಿ ಶಾಂತವಾಗಿ ಸದ್ಗುರುವಿನ ಅವಿಚಲ ನಿಷ್ಠೆಯನ್ನು ಇರಿಸಿ, ತ್ರಿಕಾಲ ನಾಮಸ್ಮರಣೆ ಮಾಡುತ್ತ ಕಾಲ ಕಳೆಯಬೇಕು... ಪಾರಮಾರ್ಥಿಕ ಧ್ಯೇಯದ ಉಚ್ಚತಮ ಸ್ಥಾನವನ್ನು ನಮ್ಮ ಜೀವನದಲ್ಲಿ ಸದಾಕಾಲ ಉಳಿಸಿಕೊಂಡಿರಬೇಕು. ಯಾವ ಆಘಾತವಾದರೂ ನಮ್ಮ ಪರಮಾರ್ಥ ಧ್ಯೇಯ ನಿಷ್ಠೆ ಮಾತ್ರ ಎಂದಿಗೂ ಕಡಿಮೆಯಾಗಬಾರದು.'

ದಿ. ೧೨ ಮಾರ್ಚ ೧೯೫೭ರಂದು ಗುರುದೇವ ರಾನಡೆಯವರು ಆರೋಗ್ಯದ ಸುಧಾರಣೆಗಾಗಿ ಅಲಹಾಬಾದಿಗೆ ಹೊರಟರು. ಅಲ್ಲಿಗೆ ಹೋದ ಬಳಿಕ ಮಾರ್ಚ ೨೨ ರವರೆಗೆ ಅವರ ಆರೋಗ್ಯ ಸರಿಯಾಗಿತ್ತು. ೨೩ರ ಬೆಳಿಗ್ಗೆ ಚಹಾ ಕುಡಿಯುವ ಹೊತ್ತಿಗೆ ಸಿಡಿಲು ಬಿತ್ತು. ಅಲ್ಲಿರುವ ಒಬ್ಬ ಹುಡುಗನಿಗೆ ಗಾಯವಾಯಿತು. ಈ ಘಟನೆಯಿಂದ ಅವರ ನಿರ್ಯಾಣ ಕಾಲದ ವರೆಗೆ ಜರುಗಿದ ಘಟನೆಯನ್ನು ಗುರುದೇವರು ಬರೆದು ಇರಿಸಿದ್ದಾರೆ. ಅದು ನನಗೆ ಇದೇ ತಾನೆ ಸಿಕ್ಕಿದ್ದರಿಂದ ಅದರಲ್ಲಿಯ ಕೆಲವು ಮಹತ್ವದ ಭಾಗವನ್ನು ಇಲ್ಲಿ ನೀಡುತ್ತಿದ್ದೇನೆ–

'ನಾನು ದಿ. ೧೪ ಮಾರ್ಚ ೧೯೫೭ರ ರಾತ್ರಿ ಅಲಹಾಬಾದ್‌ಗೆ ಬಂದೆ. ೨೨ನೇ ದಿನಾಂಕದ ವರೆಗೆ ಆರೋಗ್ಯ ಚೆನ್ನಾಗಿತ್ತು. ಮಹಡಿಯಲ್ಲಿ ಮಲಗುತ್ತಿದ್ದೆ. ನಾಮಸ್ಮರಣೆ ಮಾಡುತ್ತಿದ್ದೆ. ೨೩ರ ಬೆಳಿಗ್ಗೆ ಸಿಡಿಲು ಬಿದ್ದು ಸನಿಹದ ಬಂಗಲೆಯ ಮಾಲೀಕನ ಮಗನಿಗೆ ಗಾಯವಾಯಿತು. ಆ ಹೊತ್ತಿನಿಂದ ಸಿಡಿಲ್ಮಿಂಚಿನ ಆರ್ಭಟ ಸತತ ಶುರುವಾಗಿದ್ದರಿಂದ ಆರೋಗ್ಯ ಹದಗೆಟ್ಟಿತು. ಮಹಡಿಯಲ್ಲಿ ತಂಪು ಗಾಳಿ ಬೀಸಿ ಬರುವುದರಿಂದ ಕೆಳಗಿಳಿದು ಬಂದು ಮಲಗಿದೆ. ಒಂದು ದಿನ ತಂಪೆನಿಸಿತು. ಮುಂದೆ ನಾಲ್ಕಾರು ದಿನ ಒಂದೇ ಸವನೆ ಕೆಮ್ಮು, ಹೊಕ್ಕಳಿನ ಸುತ್ತಲೂ ತುಂಬಾ ನೋಯಿಸುತ್ತಿತ್ತು. ಇದರಿಂದಾಗಿ ಕಫ ಸಂಗ್ರಹಗೊಂಡಿತು. ಅಲ್ಲಿವರೆಗೆ ಏನೂ ಗೊತ್ತಿರಲಿಲ್ಲ. ಹೀಗಾಗಿ ಆರೈಕೆ ಮಾಡುವುದು ಸಾಧ್ಯವಿರಲಿಲ್ಲ. ಇಲ್ಲಿ ವರೆಗೆ ಅಲಹಾಬಾದ್‌ನಲ್ಲಿ ಇಷ್ಟೆಲ್ಲ ಆರೋಗ್ಯ ಹದಗೆಟ್ಟಿರಲಿಲ್ಲ. ನಿಶ್ಶಕ್ತಿಯೂ ಆಗಲಾರಂಭಿಸಿತು. ಅಲಹಾಬಾದನಲ್ಲಿ ಕಫ್, ಕೆಮ್ಮು ಬರಲು ಕಾರಣವೇನಿರ ಬಹುದು? ಹಿಂದೆ ೧೫.೧೦.೧೯೫೦ ರಿಂದ ೧೧.೧.೧೯೫೧ ವರೆಗೆ ನಿಂಬಾಳ ದಲ್ಲಿದ್ದಾಗ ತುಂಬ ಕೆಮ್ಮಿನ ತೊಂದರೆಯಿದ್ದಾಗ ಅಲಹಾಬಾದ್‌ಗೆ ಬಂದ ಎರಡು ಮೂರು ತಿಂಗಳೊಳಗೆ ಕೆಮ್ಮು ಕಡಿಮೆಯಾಗಿತ್ತು. ಕೆಮ್ಮು ಕಫದಿಂದಾಗಿ ಮಂಪರು ಬಂದಂತಾಗುತ್ತಿತ್ತು. ಮೊದಲು ೧೫ ದಿನ ಧ್ಯಾನದ ಕಡೆಗೆ ಗಮನವೇ ಹೋಗುತ್ತಿರಲಿಲ್ಲ. ಅನುಭವ ಮಲೀನವಾಗ ತೊಡಗಿತು. ಪ್ರತಿ ೧೫ ನಿಮಿಷಕ್ಕೆ ಎಚ್ಚರವಾಗುತ್ತಿತ್ತು. ಬಳಿಕ ೬–೮ ದಿನ ರಾತ್ರಿ ಸ್ವಲ್ಪ ನಾಮಸ್ಮರಣೆಯಾಗುತ್ತಿತ್ತು. ಆರೋಗ್ಯ ಕೆಟ್ಟದಿನ ನೇಮ ಸಾಧ್ಯವೇ ಆಗುತ್ತಿರಲಿಲ್ಲ.... ದೇವಿಪ್ರಸಾದ ಶುಕ್ಲರ ಮನೆಯಲ್ಲಿ, ನನ್ನ ಮನೆಯಲ್ಲಿ ದಿನಕ್ಕೆ ಎರಡು–ಮೂರು ಸಲವಾದರೂ ಒಂದೊಂದು ಗಂಟೆ ಮಗ್ನನಾಗಿ ಕೂತಿರುತ್ತಿದ್ದೆ. ಆದರೆ ನಡುನಡುವೆ ನಿದ್ದೆಯ ಮಂಪರು ಬಂದಂತಾಗುತ್ತಿತ್ತು. ಧ್ಯಾನವೂ ಆಗುತ್ತಿತ್ತು. ನೇಮ ಮಾಡುವಾಗ ಕಫ ಎಲ್ಲಿಂದ

ಬರುತ್ತಿತ್ತೋ ಯಾರಿಗ್ಗೊತ್ತು? ಕಫ ಬಂದು ಬಿದ್ದು ಹೋದ ಬಳಿಕ ತೀರ ನಿಶ್ಶಕ್ತಿ ಬರುತ್ತಿತ್ತು. ಹೀಗಾಗಿ ಒಂದಿಷ್ಟು ಚಹಾ ಸೇವಿಸುತ್ತಿದ್ದೆ. ಈಗ ಮಂಚದ ಮೇಲೆ ಮಲಗುವುದು ಸಾಧ್ಯವಿಲ್ಲ. ಮಲಗಿದರೆ ಸಾಕು ಕೆಮ್ಮು ಶುರುವಾಗುತ್ತಿತ್ತು. ಅತ್ಯಂತ ಕೆಟ್ಟದ್ದೆಂದರೆ ಎದ್ದು ನಿಲ್ಲಲು, ನಡೆದಾಡಲು ಆಗುತ್ತಲೇ ಇರಲಿಲ್ಲ. ಕಾಲು ಜಡವಾಗಿ ಬಿಡುತ್ತಿತ್ತು. ಈಗ ದೇವರೆ ಹಾದಿ ತೋರಿಸಬೇಕು.

ನಿಂಬಾಳದಲ್ಲಿ ಕೆಲವು ದಿನಗಳ ಹಿಂದೆ ಈ ಮನೆಯಿಂದ ಆ ಮನೆಗೆ ಹೋಗಿ ಬರಲಾರಂಭಿಸಿದೆ. ಎರಡು ಮೂರು ಸಲ ನಡುವೆ ಕೂತೇ ಬಿಡುತ್ತೇನೇನೋ ಎಂದೆನಿಸಿತು. ಒಮ್ಮೆ ನನ್ನ ಜೊತೆ ಡಾ. ಖಾನೋಲ್ಕರ ಇದ್ದರು. ಕೆಟ್ಟ ರಕ್ತಾಭಿಸರಣ (Bad circulation)ಎಂದರು. ಸೂರ್ಯೋದಯಕ್ಕಿಂತ ಮೊದಲು ಅನಂತರ ಅಲಹಾಬಾದ ವಾತಾವರಣ ಚೆನ್ನಾಗಿರುತ್ತಿತ್ತು. ಪಂ. ಶುಕ್ಲಾಜಿ ತುಂಬ ಪ್ರೀತಿಯಿಂದ ಕಾಣುತ್ತಾರೆ. ಪ್ರತಿದಿನ ಮಧ್ಯಾಹ್ನ ಕಾರಿನಲ್ಲಿ ಹೋಗಿ ಬಂದ ಬಳಿಕ ತರಕಾರಿಯ ರಸ ಇಲ್ಲವೇ ಸೂಪ್ ಸೇವಿಸುತ್ತಿದ್ದೆ. ಸಂಜೆ ಶುಕ್ಲಾಜಿಯವರ ಮನೆಗೆ ಹೋಗಿ ಮರಳಿದ ಬಳಿಕ ಮತ್ತೆ ತರಕಾರಿಯ ರಸ ಸೇವನೆಯಾಗುತ್ತಿತ್ತು. ಹಾಲು, ಚಹಾ, ಸಿಹಿ ತಿಂಡಿಗಳ ಬಗೆಗೆ ಏಕೋ ಹೇಸಿಗೆ, ಉಪ್ಪು–ಖಾರ ಪರವಾಗಿಲ್ಲ. ಬಾಯಿಯಂತೂ ಕಹಿಯಾಗಿದೆ. ಒಣಗಿದೆ ಮತ್ತು ಅಂಟು ಅಂಟಾಗಿದೆ. ಹಲ್ಲು ತುಟಿಯ ಮೇಲೆ ಮಲೀನ ಅಂಟುಗೊಂಡಿದೆ.

ಈ ವರ್ಷ ಅಲಹಾಬಾದ್ ನಿಸರ್ಗ ನನ್ನ ವಿರುದ್ಧ ಬಂಡೆದ್ದಂತಿದೆ. ಒಂದು ದಿನ ಸಂಜೆ ಮನೆಯ ಎದುರಿನ ಬಯಲಿನಲ್ಲಿ ೧೦ ನಿಮಿಷ ಕಾರಿನಲ್ಲಿ ನಾಮಸ್ಮರಣೆಗೆ ಕೂತಾಗ ಸಂಪೂರ್ಣ ಪರಿಸರ ಮತ್ತು ಆಕಾಶ ನುಂಗಿಯೇ ಬಿಡುತ್ತದೆ ಎಂದೆನಿಸಿತು. ಕೆಲವು ವರ್ಷಗಳ ಹಿಂದೆ ಇದೇ ಬಯಲಿನ ಆಚೆ ಇರುವ ಮರದ ಕೆಳಗೆ ಎಷ್ಟೋ ಉಚ್ಚ ಪಾರಮಾರ್ಥಿಕ ಅನುಭವ ಬಂದಿತ್ತು. ಈ ವರ್ಷ ಮಾತ್ರ ಅಲಹಾಬಾದ ಊರು ತೀರ ಅನಾಗರಿಕವೆನಿಸಿತು.

ನಿನ್ನೆ ರಾತ್ರಿ ೨೬–೪–೧೯೫೭ರಂದು ಸ್ಟೇಶನ್ನಿನಲ್ಲಿ ಸ್ವಲ್ಪ ಚಹಾ ಕುಡಿದ ಬಳಿಕ ಸ್ವಲ್ಪ ಶಕ್ತಿ ಬಂದಂತಾಯಿತು. ಹೀಗಾಗಿ ಅಲಹಾಬಾದ ಸ್ಟೇಶನ್ನಿಗೆ ಕರೆಸಿದವರ ಹಾಗೂ ಆಗಮಿಸಿದವರ ಜೊತೆಗೆ ಐದು ನಿಮಿಷವಾದರೂ ಮಾತಾಡುವುದು ಸಾಧ್ಯವಾಯಿತು...

ಇತ್ತೀಚೆಗೆ ಅಲಹಾಬಾದಿನ ಸಂಪೂರ್ಣ ನಿಸರ್ಗವೇ ದೂಷಿತಗೊಂಡಿದೆ. ಕಳೆದ ನಾಲ್ಕಾರು ದಿನಗಳಲ್ಲಿ ಸ್ವಲ್ಪ ಬದಲಾವಣೆ ಕಾಣಬರುತ್ತದೆ... ಒಂದು ತಿಂಗಳಿಂದ ಧೋತರ ಉಡಲಿಲ್ಲ. ನಿಂತು ಧೋತರ ಉಡುವ ಶಕ್ತಿಯೇ ಉಳಿಯಲಿಲ್ಲ...ಬಾಯಿಂದ ಶಬ್ದ ಹೊರಬರುತ್ತಿಲ್ಲ. ಮಾತಾಡುವ ಶಕ್ತಿಯೂ ಇರಲಿಲ್ಲ. ಬಹಳ ಸಲ ಕಫ್ ಹೊರ ಬೀಳುತ್ತಿತ್ತು. ಕೆಲವು ಸಲ ಸಿಕ್ಕಿ ಬೀಳುತ್ತಿತ್ತು. ಅನುಭವ ಸಹ ತೀರ ಮಸಕಾಗಿತ್ತು...ಒಂದು ತಿಂಗಳ ಕಾಲ ಬಟ್ಟೆ ರಹಿತವಾಗಿದ್ದೆ. ಗಂಟಲು ಒಣಗಿದ್ದರಿಂದ ಮಾತೇ ಬರುತ್ತಿರಲಿಲ್ಲ. ಅನಾರೋಗ್ಯ ಶುರುವಾದಾಗ ಮುಖ ಕೆಂಪಾಯಿತು. ಈಗಲೂ ಕೆಂಪಾಗಿದೆ. ಆದರೂ ಇದೀಗ ಕಡಿಮೆಯಾಗಿದೆ..... ಡಾ. ಪತಕಿಯವರು

ಪುಪ್ಪಸ ವಿಕಾರ ಎಂದರು. ಡಾ. ಕರಮರಕರರು ಪೆಚಿಸ್ ಎಂದರು...ಹೊಟ್ಟೆ ಮಾಲಿಶ್ ಮಾಡಿಸುತ್ತಲಿದ್ದೇನೆ'

–ಮೇಲಿನ ವಿವರಣೆಯಿಂದ ಗುರುದೇವ ರಾನಡೆಯವರ ಆರೋಗ್ಯ ಅದೆಷ್ಟು ಹದಗೆಟ್ಟಿತ್ತು ಎಂಬ ಕಲ್ಪನೆ ಬರುತ್ತದೆ. ೨೯ ಏಪ್ರಿಲ್ ೧೯೫೭ರಲ್ಲಿ ತೀರಾ ಕ್ಷೀಣ ಅವಸ್ಥೆಯಲ್ಲಿ ನಿಂಬಾಳಗೆ ಮರಳಿದರು. ೧ ಮೇ ೧೯೫೭ರಂದು ಸಾಂಗಲಿಯ ರಾಜಾಸಾಹೇಬರಿ ಗೊಂದು ಪತ್ರ ಬರೆದರು.

ಮುಂದೆ ದಿನ ಕಳೆದಂತೆ ಗುರುದೇವ ರಾನಡೆಯವರ ಆರೋಗ್ಯ ಹೆಚ್ಚು ಹೆಚ್ಚು ಕ್ಷೀಣಗೊಂಡಿತು. ಇಷ್ಟಾದರೂ ಸಹ ಕಾರಿನಲ್ಲಿ ಕೂತು ಧ್ಯಾನಕ್ಕೆ ಹೋಗುವ ಕ್ರಮವನ್ನು ಕೊನೆಯ ವರೆಗೂ ತಪ್ಪಿಸಲಿಲ್ಲ. ೧ ಜೂನ ವರೆಗೆ ಅವರು ಅನಾರೋಗ್ಯದಿಂದ ತೀರಾ ಹೈರಾಣದರೂ ಕೆಲ ಸುಶಿಕ್ಷಿತ ಭಕ್ತರಿಗೆ ನಾಮೋಪದೇಶ ನೀಡಿ ಸಾಕ್ಷಾತ್ಕಾರದ ಬಾಗಿಲನ್ನು ತೆರೆದರು. ಡಾ. ತುಳಪುಳೆ ಮತ್ತು ಡಾ. ಆಜಗಾಂವಕರರೂ ಜೂನ ೧ ರಂದು ನಾಮವನ್ನು ಪಡೆದರು. ಡಾ. ತುಳಪುಳೆಯವರ ಚಿಕಿತ್ಸೆಯ ಪ್ರಕಾರ ಗುರುದೇವರ ಹೃದಯ ತೀರಾ ನಿಶ್ಶಕ್ತಿಗೊಂಡಿತ್ತು. ಲಿವರ್ ಬೆಳೆದು, ಪುಪ್ಪಸ ಹಾಳಾಗಿತ್ತು. ೨ನೇ ಜೂನಕ್ಕೆ ಶೋಚನೀಯ ಪರಿಸ್ಥಿತಿ ತಲೆದೋರಿತು. ಕೊನೆಯ ಎರಡು ಮೂರು ದಿನ ಅನ್ನದ ಕಣವೂ ತಿನ್ನಲಿಲ್ಲ. ೬ ಜೂನರಂದು ಮೃತ್ಯುಶಯ್ಯೆಯಲ್ಲಿದ್ದಾಗಲೂ ೬ ಗಂಟೆ ಕಾರಿನಲ್ಲಿ ಧ್ಯಾನಕ್ಕೆ ಹೋದರು. ಮರಳಿದಾಗ ಮಾತು ನಿಂತಿತ್ತು. ರಾತ್ರಿ ೯ ರಿಂದ ೧೦ರ ಕಾಲಾವಧಿಯಲ್ಲಿ ಅವರ ಆತ್ಮಜ್ಯೋತಿ ಪರಮಾತ್ಮನ ಜ್ಯೋತಿಯಲ್ಲಿ ಲೀನಗೊಂಡಿತು.

**ಉಪಸಂಹಾರ**

ಗುರುದೇವ ರಾನಡೆಯವರ ದೈಹಿಕ ಸ್ಥಿತಿಯನ್ನು ತೀರ ಸನಿಹದಿಂದ, ಸೂಕ್ಷ್ಮ ದೃಷ್ಟಿಯಿಂದ ಹಾಗೂ ವೈಜ್ಞಾನಿಕ ಚಿಕಿತ್ಸಕ ಬುದ್ಧಿಯಿಂದ ನೋಡಿದ ಡಾ. ಡಿ. ಪಿ. ಖಾನೋಲ್ಕರ್, ಎಂ.ಡಿ. ಸಿವ್ಹಿಲ್ ಸರ್ಜನ್, ಸೊಲ್ಲಾಪುರ ಇವರು ನಂಬಿಕೆಗೆ ಅರ್ಹವಾಗುವ ಒಂದು ಮಾಹಿತಿ ಪೂರ್ಣವಾದ ಒಂದು ಲೇಖನವನ್ನು ಬರೆದಿದ್ದಾರೆ. ಇಚ್ಛಾಮರಣಿ ಗುರುದೇವರು ೭೧ನೇ ವಯಸ್ಸಿನಲ್ಲಿ ತೆಗೆದುಕೊಂಡ ಮಹಾಸಮಾಧಿ ಗಿಂತ ಮೊದಲು ದಿವ್ಯ ಸಂದೇಶವು ಈ ಲೇಖನದಲ್ಲಿ ವ್ಯಕ್ತವಾಗುತ್ತದೆ. ಅದರ ಸಾರಾಂಶ ಹೀಗಿದೆ–

'ಜುಲೈ ೧೯೫೬ರಿಂದ ಶ್ರೀ ಗುರುದೇವರು ಈ ಲೋಕದಿಂದ ಕ್ರಮೇಣ ಹಿಂದಡಿಯಿಡಲಾರಂಭಿಸಿದರು. ಮಾರ್ಚ ೧೯೫೭ರಿಂದ ಸುತ್ತಲಿನ ಪರಿಸ್ಥಿತಿ ಬಗೆಗೆ ಸಂಪೂರ್ಣ ಉದಾಸೀನ ಮತ್ತು ಅನಾಸಕ್ತಿ ತಾಳಿ ಜಗತ್ತಿನಿಂದ ಅವರು ಸಂಪೂರ್ಣ ಬೇರೆಯಾದರು. ಆರಂಭಕ್ಕೆ ಅವರು ಕೆಮ್ಮಿನಿಂದ ಬಳಲಿದರು. ಆ ತೊಂದರೆ ಅಧಿಕಗೊಂಡು ಅದು ಬ್ರೊಂಕೆಟೈಸ್‌ನಲ್ಲಿ ರೂಪಾಂತರವಾಯಿತು. ಅವರು ಧ್ಯಾನಕ್ಕೆ ವ್ಯತಯವನ್ನುಂಟು ಮಾಡುವ ಔಷಧಿಯನ್ನು ಎಂದೂ ಸ್ವೀಕರಿಸಲಿಲ್ಲ. ಅವರ ಜೀವನದಲ್ಲಿ ಸಂಕಟವನ್ನುಂಟು ಮಾಡುವ

ಹಲವು ಪ್ರಸಂಗಗಳು ಎದುರಾದವು. ಆದರೆ ಇಂಥ ಚಿಂತಾಜನಕ ಪರಿಸ್ಥಿತಿಯಿಂದ ಅವರು ಪಾರಮಾರ್ಥಿಕ ಸಾಮರ್ಥ್ಯದ ಬಲದಿಂದ ಚೇತರಿಸಿಕೊಂಡಿದ್ದು ಕಂಡು ವೈದ್ಯರು ಬೆರಗಾದರು. ದಿ. ೨–೫–೫೭ ರಂದು ನಿಂಬಾಳದಲ್ಲಿ ನಾನು 'ಕ್ಷ'ಕಿರಣದ ಸಹಾಯದಿಂದ ಮಾಡಿದ ಪರೀಕ್ಷೆಯಲ್ಲಿ ಅವರ ಪುಪ್ಪಸದಲ್ಲಿ ಗುಣಮುಖಗೊಂಡ ಕ್ಷಯದ ಎರಡು ವ್ರಣಗಳು ಕಂಡವು. ಬಲಭಾಗದಲ್ಲಿ ಮಸಕಾಗಿ ಕಾಣುವ ಸದೋಷ ಭಾಗವು, ಅನಂತರ ಸುಮಾರು ೧೨ ದಿನಗಳ ಬಳಿಕ ಗುಣಮುಖವಾಯಿತು. ಅವರ ನಾಡಿಮಿಡಿತವು ೯೦–೧೧೦ ವರೆಗಿತ್ತು. ಗಂಟಲು ಗೂಡಿನಿಂದ (Laryngitis) ಪ್ರಬಲವಾದ ಕೆಮ್ಮು ಮಾತ್ರವಿತ್ತು. ಅವರು ಕ್ರಮೇಣ ಕ್ಷೀಣ ಕ್ಷೀಣವಾಗಲಾರಂಭಿಸಿದರು. ೧೬.೫.೧೯೫೭ರಂದು ಅವರು ಸೊಲ್ಲಾಪುರಕ್ಕೆ ಬಂದಾಗ ನನ್ನ ಇಚ್ಛೆಯಂತೆ ಮತ್ತೊಮ್ಮೆ ಎಕ್ಸರೇ ಮಾಡಿಕೊಳ್ಳಲು ಒಪ್ಪಿದರು. ಅನಂತರ ನಾನು ಮಾಡಿದ ಸೂಕ್ಷ್ಮ ಪರೀಕ್ಷೆಯ ಬಳಿಕ ಅವರ ಎರಡೂ ಪುಪ್ಪಸಗಳು ನಿರ್ದೋಷವಾಗಿರುವುದು ನನಗೆ ಕಂಡು ಬಂತು. ಅವರ ಬಲಬದಿಯ ಕೆಳಭಾಗ ಜೇನುಗೂಡಿನಂತೆ ಕಾಣಿಸುತ್ತಿತ್ತು. ಕ್ಷಯಕ್ಕೆ ಮಾರಕವಾಗುವಂತಹ ಎಂಟಿಬಾಯೋಟಿಕ್ ಔಷಧಿಯನ್ನು ಸಹ ತೆಗೆದುಕೊಳ್ಳದೆ ಸಾಕಷ್ಟು ಸುಧಾರಣೆಯು ಅವರ ಆರೋಗ್ಯದಲ್ಲಿ ಕಂಡು ಬಂತು. ಅವರ ಒಣ ಕೆಮ್ಮು ಮತ್ತು ಗಂಟಲಿನ ತೊಂದರೆ ಮಾತ್ರ ಹಾಗೇ ಇತ್ತು. ಪುಪ್ಪಸದಲ್ಲಿ ಸ್ವಲ್ಪ ತೇವಾಂಶದ ಸದ್ದಿನ ಹೊರತು ಏನೂ ದೋಷ ವಿರಲಿಲ್ಲ. ಉಳಿದ ತಜ್ಞ ವೈದ್ಯರೂ ಪರೀಕ್ಷಿಸಿ ಹೇಳಿದ್ದೇನೆಂದರೆ ಅವರ ಕೆಮ್ಮೂ ಸಹ ಔಷಧಿಯ ಯೋಜನೆಯ ದೃಷ್ಟಿಯಿಂದ ರೇಡಿಯೋಲಾಜಿಯ ದೃಷ್ಟಿಯಿಂದ ಕಡಿಮೆ ಯಾಗುತ್ತಲೇ ಇತ್ತು. ಅವರ ಜ್ವರ ಕಡಿಮೆಯಾಗಿತ್ತು. ಆದರೆ ಆಹಾರ ಬಿಟ್ಟಿದ್ದರಿಂದ ತೀರ ನಿಶ್ಶಕ್ತಿಯು ಕಾಣಿಸಿಕೊಂಡಿತ್ತು. ಅವರ ಮಾತೂ ಕಡಿಮೆಯಾಯಿತು. ಹೀಗಾಗಿ ಅವರು ಸನ್ನೆ ಮಾಡಿ ತಮಗೆ ಹೇಳಬೇಕಾಗಿರುವುದನ್ನು ತಿಳಿಸುತ್ತಿದ್ದರು. ಅವರ ಉಸಿರಾಟ ಮತ್ತು ನಾಡಿ ನಿಯಮಿತವಾಗಿ ಇತ್ತು. ಅವರ ಕಫದಲ್ಲಿ ಯಾವುದೇ ದೋಷ ವಿಕಾರವಿರಲಿಲ್ಲ. ಇದೆಲ್ಲ ವೈಜ್ಞಾನಿಕ ಪರೀಕ್ಷೆಯ ಬಳಿಕ ಕಂಡು ಬಂದ ಸಂಗತಿ'.

ನಿರ್ಯಾಣಕ್ಕಿಂತ ಮೂರು ದಿನ ಮೊದಲು ಅವರು ಬಾಹ್ಯ ಜಗತ್ತಿನಿಂದ ತೀರ ನಿರ್ಲಿಪ್ತರಾದರು. ದೇಹದಿಂದ ಪ್ರಾಣ ಹೋಗುವ ಮುನ್ನ ೬ ಜೂನ ರಂದು ಡಾ. ಪಾರಿಪತ್ಯಗಾರರಿಂದ ಪರೀಕ್ಷಿಸಿಕೊಂಡು, ಯಾವುದೇ ದೋಷ ದೇಹದಲ್ಲಿ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡರು. ಕೊನೆಯ ಐದು ದಿನ ಮೊದಲು ರಾನಡೆಯವರು ಅನ್ನ–ನೀರು ಎಲ್ಲ ತೊರೆದರು. ಔಷಧಿಯಿಂದ ದೇಹವನ್ನು ನಿರ್ಮಲ ವಾಗಿರಿಸುವ ಜಾಗರೂಕತೆ ತೆಗೆದುಕೊಂಡರು. ವೈದ್ಯರಿಗೆ ಅವರಲ್ಲಿ ನಿಶ್ಶಕ್ತಿ ಹೊರತು ಬೇರೇನೂ ಕಂಡು ಬರಲಿಲ್ಲ. ಅವರ ಕರುಳಿನಲ್ಲಿ ಕಿಂಚಿತ್ತೂ ಮಲವಿರಲಿಲ್ಲ. ಇಂಥ ನಿರ್ದೋಷ ಆರೋಗ್ಯದ ಸ್ಥಿತಿಯಲ್ಲಿ ಅವರು ರಾತ್ರಿ ೧೦–೩೦ಕ್ಕೆ ಪ್ರಾಣ ಬಿಟ್ಟರು.

ಹೀಗೆ ಶ್ರೀ ನಿಂಬರಗಿ ಮಹಾರಾಜರಂತೆ, ಕಬೀರನಂತೆ, ಪರಿಶುದ್ಧವಾದ ದೇಹವನ್ನು ದೇವರಿಗೆ ಅರ್ಪಿಸಿದರು. ಕೊನೆಯ ವರೆಗೂ ಬಾಹ್ಯಲೋಕದ ಸಂಗತಿಯಿಂದ ತೀರ ನಿರ್ಲಿಪ್ತವಾಗುಳಿದರು. ಧ್ಯಾನಮಗ್ನ ಸ್ಥಿತಿಯಲ್ಲಿ ಸ್ವರೂಪ ಸಾಕ್ಷಾತ್ಕಾರದ ಆನಂದದಲ್ಲಿ ಶ್ರೀ ಗುರುದೇವರು ಭಗವಂತನಲ್ಲಿ ಲೀನರಾದರು.

ನಾನು ಈ ಗ್ರಂಥವನ್ನು ಸದ್ಗುರು ಶ್ರೀ ಸಮರ್ಥ ಶ್ರೀ ಅಂಬುರಾವ ಮಹಾರಾಜರ ಪಾದಕಮಲಗಳಿಗೆ ಅರ್ಪಿಸುತ್ತೇನೆ.

■■

# ಶ್ರೀ ಗುರುದೇವರ ಅಮರ ಸಂದೇಶ

ಶ್ರೀ ಗುರುದೇವ ರಾನಡೆಯವರ ಪರಮಗುರು ಶ್ರೀ ನಿಂಬರಗಿ ಮಹಾರಾಜ ಇವರಿಗೆ ನಾಮ ನಿರ್ದೇಶನ ನೀಡುವ ಶ್ರೀ ಸದ್ಗುರು ಭಾವೂ ಸಾಹೇಬ ಮಹಾರಾಜ ಮತ್ತು ಸದ್ಗುರುವಿನ ನಿರ್ಯಾಣದ ಬಳಿಕ ಗುರುದೇವರಿಗೆ ಸದ್ಗುರುಗಳೆನಿಸಿದ ಜೇಷ್ಠ ಗುರು ಬಂಧು ಶ್ರೀ ಅಂಬುರಾವ ಮಹಾರಾಜ–ಈ ಮೂವರೂ ಮಹಾಪುರುಷರಿಂದ ಪ್ರಾಪ್ತವಾದ ಅನುಭವಾಧಿಷ್ಠಿತ ಪರಮಾರ್ಥ ವಿಚಾರಗಳ ಸಂಚಯವೇ ಈ 'ಅಮರಸಂದೇಶ'ದ ಉಗಮ ತಾಣ.

೧. ಪರಮಾರ್ಥ ದೃಷ್ಟಿಯಿಂದ ಕಾಲ ಅಸತ್ಯ; ವರ್ತಮಾನವಂತೂ ಎರಡು ಪಟ್ಟು ಅಸತ್ಯ.

೨. ದೇಹ ಸ್ವಭಾವವನ್ನು ಬದಿಗೊತ್ತಿ ನಾಮಸ್ಮರಣೆ ಮಾಡಬೇಕು.

೩. ಕೇವಲ ಅಂತರಂಗ ಉತ್ತಮವಾಗಿದ್ದರೆ ಸಾಲದು; ನಾಮಸ್ಮರಣೆ ಜರುಗಬೇಕು.

೪. ನಾಮಸ್ಮರಣೆಯೇ ಮುಖ್ಯ ಕರ್ತವ್ಯ. ಅಹಂಕಾರದಿಂದ ನಾಮಸ್ಮರಣೆಯಿಂದ, ಲಭಿಸಿದ ದೇವರ ಶಕ್ತಿ ಕುಂಠಿತಗೊಳ್ಳುತ್ತದೆ. ಪರದ್ರವ್ಯ–ಪರಸ್ತ್ರೀಯಿಂದ ದೂರವಿರಿ.

೫. ನಿಜವಾದ ಜ್ಞಾನ ಮತ್ತು ಹಿತ ಸದ್ಗುರುವಿನ ಮಾರ್ಗದಲ್ಲೇ ಇದೆ.

೬. ಸ್ವರೂಪದಲ್ಲಿರುವುದೇ ಸ್ವಧರ್ಮ. ಮಾನವನಲ್ಲಿ ಕ್ಷಮೆ, ದಯೆ ಮತ್ತು ಶಾಂತಿ ಇರಬೇಕು.

೭. ದೇವರ ಮೇಲಿನ ನಿಷ್ಠೆಯು ಸ್ವಪೋಷಕವಾಗಿರುತ್ತದೆ.

೮. ಸಗುಣ ಭಕ್ತಿಯಿಂದ ನಿರ್ಗುಣ ಭಕ್ತಿಗೆ ಬಲ ಬರುತ್ತದೆ.

೯. ಭಕ್ತಿಯ ಬಗೆಗೆ ಕಾಮ, ದೇಹ ಭಾವದ ಬಗೆಗೆ ಕ್ರೋಧ, ವಸ್ತುವಿನ ಬಗೆಗೆ ಮದ, ಮಾಯೆಯ ಬಗೆಗೆ ಮತ್ಸರವಿರಬೇಕು.

೧೦. ಹಗಲು ರಾತ್ರಿಯೆನ್ನದೆ ಧ್ಯಾನ ಮಾಡಬೇಕು

೧೧. ನಾಮಸ್ಮರಣೆಯ ಹೊರತು ಅನುಭವವನ್ನು ಬಯಸಬಾರದು.

೧೨. ಸಾಧಕನಾದವನು ವಯಸ್ಸಾದ ಬಳಿಕ ಭಕ್ತಿ ಮಾಡುವುದಾಗಿ ಹೇಳಬಾರದು.

೧೩. ಪರಮಾರ್ಥದ ನೇಮ ತಪ್ಪಬಾರದು.

೧೪. ಸಾಧಕನಲ್ಲಿ ಪಾರಮಾರ್ಥಿಕ ಪ್ರೇರಕ ಶಕ್ತಿ ನಿರ್ಮಾಣವಾಗಬೇಕು.

೧೫. ಹಠಯೋಗದಿಂದ ಮನ, ಪ್ರಾಣ ಮತ್ತು ರಾಜಯೋಗದ ಮೇಲೆ ಪ್ರಭುತ್ವ ಸಾಧಿಸಬಹುದು.

೧೬. ಆಧ್ಯಾತ್ಮಿಕ ಪ್ರಗತಿ ಎಂದರೆ ದೇವರದ್ದೇ ಪ್ರಗತಿ.

೧೭ ಸಕಲ ನೈತಿಕ ಗುಣವನ್ನು ದೇವರಿಗೇ ಅರ್ಪಿಸಬೇಕು.

೧೮ ದೇಹದ ದುಃಖ, ವೇದನೆ ಎಲ್ಲಿಯವರೆಗೆ ಸಹಿಸಬಹುದೋ ಅಲ್ಲಿಯವರೆಗೆ ಸಾಧನೆ ಮಾಡಬಹುದು.

೧೯. ಮನುಷ್ಯನ ಮಹತ್ವವನ್ನು ನಾಲ್ಕು ವಿಷಯಗಳ ಆಧಾರದಿಂದ ನಿರ್ಧಾರ ಮಾಡಬೇಕಾಗುತ್ತದೆ. ೧) ಪರಮಾರ್ಥದ ಮೇಲಿರುವ ಪ್ರೀತಿ, ೨) ಸದ್ಗುರುವಿನ ಮೇಲಿರುವ ನಿಷ್ಠೆ ಮತ್ತು ಶ್ರದ್ಧೆ, ೩)ಅದೆಷ್ಟು ನೇಮ ಸಾಧ್ಯ ಹಾಗೂ ೪) ನೇಮದಲ್ಲಿ ಯಾವ ಪ್ರಮಾಣದಲ್ಲಿ ಆನಂದವು ಆಗುತ್ತದೆ.

೨೦. ರಾತ್ರಿಗೆ ಎರಡು ಗಂಟೆಯಿರುವಾಗ ನೇಮ ಆರಂಭಿಸಬೇಕು. ಹಗಲಾಗಿ ಎರಡು ಗಂಟೆ ಕಳೆದಾಗ ಬಿಡಬೇಕು. ಪರಮಾರ್ಥಕ್ಕೆ ಅನುಕೂಲವಿರುವುದೆಲ್ಲ ನೈತಿಕ.

೨೧. ನಾಮದ ಅನುಸಂಧಾನ ತಾಳಿಯುಳಿಯುವುದೇ ಮಹತ್ವದ್ದು.

೨೨. ಖಚಿತ ನಾಮದ ಕಾಲ ಹೆಚ್ಚಾದಾಗಲೇ ಸಮಾಧಾನ.

೨೩. ಆತ್ಮಾರಾಮನ ಭಕ್ತಿ ಸ್ಮರಣೆ ಮಾಡಿದರೆ ಸಾಕು, ಕ್ಷುದ್ರ ದೇವತೆಗಳಿಗೆ ಬೆಲೆ ಕೊಡಬೇಕಿಲ್ಲ.

೨೪. ಸಗುಣ ನಿರ್ಗುಣದ ಚರ್ಚೆಯಿಂದ ಏನೂ ಲಾಭವಿಲ್ಲ.

೨೫. ತಮ್ಮ ಭಾವನೆಯನ್ನು ಮುಕ್ತವಾಗಿ ವ್ಯಕ್ತ ಮಾಡಿ, ಅತಿರೇಕ ಬೇಡ.

೨೬. ಅಹರ್ನಿಶಿ ಸಾಧನ ಮಾಡಿ ಆತ್ಮಾನುಭವ ಪ್ರಾಪ್ತವಾದರೆ ನರಜನ್ಮ ಸಾರ್ಥಕ.

೨೭. ನಾಮದ ಮೇಲೆ ನಾಮ ಏರಿಸಿಕೊತ ಹೋದರ ಕಲ್ಪನಾ ಕಡಿಮೆ ಆಗತದ.

೨೮. ವಿಷಾ ಎರದಾವರ ಮ್ಯಾಲೆ ಹಾಲೂ ಎರಿಬೇಕು.

೨೯. ಅವನ ಚಿಂತೆ ನೀನು ಮಾಡಿದರೆ ಅವನು ನಿನ್ನ ಚಿಂತೆ ಮಾಡುತ್ತಾನೆ.

೩೦. ಭಕ್ತಿಭಾವದಿಂದ ನಾಮಸ್ಮರಣೆ ಮಾಡಿದ ಮೇಲೆ ಯಾವ ‘ವಸ್ತು’ ಗೋಚರಿಸುವದೋ ಅದನ್ನು ಕಂಡು ಯಾವ ಭಾವನೆ ಮಾಡುವುದೋ ಅದನ್ನೇ ಆ ವಸ್ತುವಿಗೆ ಅರ್ಪಿಸಿ.

೩೧. ಶಿಷ್ಯನಿಗೆ ಸದಾಕಾಲ ಗುರುವಿನ ನಿಜಧ್ಯಾಸವಾಗಬೇಕು.

೩೨. ಉತ್ಸಾಹ ಬಂದಾಗ ಎಲ್ಲ ಕೆಲಸ ಬದಿಗೊತ್ತಿ ನೇಮ ಮಾಡಬೇಕು.

೩೩. ಪ್ರತಿಯೊಂದು ಕಾರ್ಯ ಮಾಡುವ ಮುನ್ನ ನಾಮಸ್ಮರಣೆ ಮಾಡಿ.

೩೪. ನಾವು ಆಧ್ಯಾತ್ಮಿಕ ಶಕ್ತಿಯಿಂದ ಕೂಡಿದ ಒಂದು ದೈವೀ ಪ್ರತೀಕ.

೩೫. ಜೀವ ಶಿವದ ಕೊಂಡಿ ಜೋಡಿಸುವ ಕಾರ್ಯವನ್ನು ಸದ್ಗುರು ಮಾಡುತ್ತಾನೆ.

೩೬. ಶ್ರೀ ಮಹಾರಾಜರು ಆಲಿಸಿ, ನೋಡಿದ ಎಲ್ಲ ಪಾರಮಾರ್ಥಿಕ ಪದ್ಯಗಳು ದಿವ್ಯ ಹಾಗೂ ಪವಿತ್ರವಾಗಿವೆ.

೩೭. ಸದ್ಗುರುವಿನ ಸಹವಾಸಕ್ಕಿಂತ ಸಜ್ಜನರ ಸಹವಾಸ ಹೆಚ್ಚು ಲೇಸು.

೩೮. ೧೧ ತಿಂಗಳು ಸಂಸಾರ ಮಾಡಿ, ಒಂದು ತಿಂಗಳು ಸಾಧನೆ ಮಾಡಲು ಇಂಚಗೇರಿ ಕ್ಷೇತ್ರಕ್ಕೆ ಬನ್ನಿ. ಪರಮಾರ್ಥ ಲಭಿಸುತ್ತದೆ.

೩೯. ಸಾಮೂಹಿಕ ನಾಮಸ್ಮರಣೆಯು ಒಂದು ದಿವ್ಯ ಸಭೆ.

೪೦. ಗುರು ಯಾವ ಪರಮಾರ್ಥಿಕ ಶಕ್ತಿಯನ್ನೂ ಶಿಷ್ಯನಿಗೆ ನೀಡಲಾರ. ದೇವರೇ ನೀಡುವನು.

೪೧. ಆಧ್ಯಾತ್ಮಿಕ ಶಕ್ತಿಯು ದೇವರ ಕೃಪೆಯಿಂದ ಅವತರಿಸಬೇಕಾಗುತ್ತದೆ.

೪೨. ವೃತ್ತಿಯ ಲಯವೆಂದರೆ ನಾಶವಲ್ಲ, ಮನಸ್ಸು ಪಾರಮಾರ್ಥದಲ್ಲಿ ಕರಗುವುದು.

೪೩. ಆತ್ಮಾನುಭಾವವು ಅಂತರಂಗದಿಂದಲೇ ನಿರ್ಮಾಣವಾಗಬೇಕು.

೪೪. ಹೊರಪ್ರಪಂಚಕ್ಕೆ ಕುರುಡರಾದಿರಿ, ಕಿವುಡರಾದಿರಿ ಎಂದರೆ ಅನಾಹತನಾದ ಕೇಳಿಸುತ್ತದೆ. ದೇವರ ಕಣ್ಣಾಗುತ್ತಾನೆ.

೪೫. ಆಂತರಿಕ ಬೆಳಕಿನಿಂದ ಆಧ್ಯಾತ್ಮಿಕ ಸಮಾಧಾನ ಸಿಗುತ್ತದೆ.

೪೬. ಜೀವನ ಮುಕ್ತಿಯೇ ನಿಜವಾದ ಮುಕ್ತಿ.

೪೭. ಪಾರಮಾರ್ಥಿಕ ಅನುಭಾವದ ಕ್ಷೇತ್ರದಲ್ಲಿ ಗೋಚರಿಸುವ ರೂಪವು ಸಗುಣವು ಅಲ್ಲ ನಿರ್ಗುಣವೂ ಅಲ್ಲ.

೪೮. ಶಾಂತಿ–ಆನಂದ ಇವೆರಡೂ ಪಾರಮಾರ್ಥಿಕ ಅನುಭವವು ವಿರೋಧಿ ಭಾವನೆಯಿಂದ ಕೂಡಿವೆ.

೪೯. ಶಾಂತಿ–ಆನಂದವು ಆತ್ಮಾನುಭಾವದ ಸ್ವಾಭಾವಿಕ ಪರಿಣಾಮಗಳು.

೫೦. ಜೀವ ಮತ್ತು ಶಕ್ತಿಯು ಸಾಕ್ಷಾತ್ಕಾರದ ದೃಷ್ಟಿಯಿಂದ ಏಕರೂಪವು ಹೊಂದಬೇಕು.

೫೧. ದೇವರ ಸಂಪೂರ್ಣ ಸಾಕ್ಷಾತ್ಕಾರವಾಗಿದೆ ಎಂದು ಹೇಳುವ ಒಬ್ಬನಾದರೂ ಮನುಷ್ಯ ಇದ್ದಾನೆಯೇ?

೫೨. ದೇವರು ಸಗುಣವೂ ಹೌದು, ನಿರ್ಗುಣವೂ ಹೌದು. ಇಂಥ ಅನುಭವದ ನಂತರವೇ ಅಷ್ಟ ಸಾತ್ವಿಕ ಭಾವ ನಿರ್ಮಾಣವಾಗುತ್ತದೆ.

೫೩. ದೇವರು ಲೋಹಚುಂಬುಕದಂತೆ ಭಕ್ತರನ್ನು ಸೆಳೆಯಬಲ್ಲ, ತಾನೇ ನಿರ್ಮಿಸಿದ ಪ್ರೇಮದಿಂದ ಆಕರ್ಷಿಸುತ್ತಾನೆ.

೫೪. ಸತ್ಸಂಗದ ಹೊರತು ಸಾಧನೆಯಾಗಲಾರದು.

೫೫. ಬಲವಂತದಿಂದ ದೇವರನ್ನು ಪ್ರೀತಿಸುವುದು ಸಾಧ್ಯವಿಲ್ಲ. ಪ್ರೇಮ ನಿರ್ಮಾಣ ವಾಗಬೇಕು.

೫೬. ದೇಹ ಎಂಬ ಗೃಹದ ನಿರ್ಮಾತನೇ ನನಗೆ ನಿನ್ನ ದರ್ಶನವಾಗಿದೆ.

೫೭. ಸಾಕ್ಷಾತ್ಕಾರಿಗಳ ಬಳಿಗೆ ಹೋದರೆ, ನಿಮ್ಮನ್ನು ಪಾವನಗೊಳಿಸುವ ಶಕ್ತಿಯು ಅವರಲ್ಲಿರುತ್ತದೆ.

೫೮. ಪಾರಮಾರ್ಥಿಕ ಅನುಭವ ಪಡೆದವರಲ್ಲಿ ಬೆನ್ನು ಹುರಿಯಲ್ಲಿರುವ ರಸವು ತೇಜಸ್ವಿಯಾಗಿರುತ್ತದೆ. ಇದೇ ಆತ್ಮದರ್ಶನಕ್ಕೆ ಕಾರಣವಾಗುವ ದ್ರವತತ್ವ.

೫೯. ಮಧ್ಯಬಿಂದು ಅನುಭವದಿಂದಲೇ ಅನಂತರದ ಎಲ್ಲ ಅನುಭವಗಳು ಉದ್ಭವಿಸಿ ಬೆಳೆಯುತ್ತವೆ, ಸುತ್ತುತ್ತವೆ.

೬೦. ನಮ್ಮ ಭಕ್ತಿಯ ತೀವ್ರತೆ ಮತ್ತು ನಾಮಸ್ಮರಣೆಯ ಅಭ್ಯಾಸವು ತಾಳಿ ಉಳಿಯದಿದ್ದಲ್ಲಿ ಅನುಭವದಲ್ಲಿಯ ಬೆಳವಣಿಗೆಯು ತಾಳಿಯುಳಿಯಲಾರದು.

೬೧. ಆಧ್ಯಾತ್ಮದಲ್ಲಿ ಭಾವ ನಿರ್ಮಾಣವಾಗಬೇಕು. ಅಂದಾಗ ಎದುರಿಗೆ ಕಾಣುವ ವಸ್ತುವಿನಲ್ಲೂ ಭಾವ ನಿರ್ಮಾಣವಾಗಬಲ್ಲದು. ಇದು ಸಮಾಧಾನ ನೀಡಿದಾಗ ಪ್ರೇಮ ನಿರ್ಮಾಣವಾಗುತ್ತದೆ.

೬೨. ಅನುಭವದಲ್ಲಿ ಗೋಚರಿಸುವ ಚಕ್ರ ಒಂದು ಅಥವಾ ಹಲವು ಇರಬಹುದು. ಈ ವರ್ತುಳಾಕಾರ ಚಕ್ರ ಅಲೆಯಂತೆ ಬೆಳೆಯುತ್ತ ಸಾಗುತ್ತದೆ.

೬೩. ನಮ್ಮ ಆಧ್ಯಾತ್ಮಿಕ ಪ್ರಗತಿಯಲ್ಲಿ ರೇಡಿಯೋ ಕ್ಷ–ಕಿರಣದಂತಹ ಮೂಲಭೂತ ತತ್ವಗಳ ಅನುಭವವಾಗಬಲ್ಲುದು. ಅನಂತ ತತ್ವದೊಂದಿಗೆ ನಮ್ಮ ಸಂಬಂಧ ಏರ್ಪಟ್ಟರೆ ಎಲ್ಲ ಸಂಗತಿಗಳು ಸಾಧ್ಯ.

೬೪. ದೇವರ ಶಕ್ತಿಯನ್ನು ಅನುಭವಿಸಿದರೆ ನಮ್ಮ ದೇಹದಲ್ಲಿ ಶಕ್ತಿಯ ಬಲ ಬರುತ್ತದೆ.

೬೫. ಎದುರಿಗಿರುವ ವಸ್ತು ದೇವರು ಎಂಬ ಅನುಭವ ಬಂದಲ್ಲಿ ನಮ್ಮ ರೋಮ ರೋಮಗಳಲ್ಲಿ ದೇವರ ನಾಮ ನಿನದಿಸಲು ತೊಡಗುತ್ತದೆ.

೬೬. ದೇವರ ಅನುಭವ ಲೋಹಚುಂಬಕದಂತಿದೆ.

೬೭. ಆಧ್ಯಾತ್ಮಿಕ ಶಕ್ತಿಯು ದೇಹದಲ್ಲಿ ಉತ್ಪನ್ನವಾಯಿತೆಂದರೆ, ಆಂತರಿಕವಾಗಿ ಜ್ಞಾನೇಂದ್ರಿಯದ ಪರಿಣಾಮವಾಗುತ್ತದೆ. ಅದರಿಂದ ನಾದಬಿಂದು ಬೆಳಕಿನ ಅನುಭವವಾಗುತ್ತದೆ. ಆ ಆಧ್ಯಾತ್ಮಿಕ ಶಕ್ತಿ ಅನಂತವಾಗಿರುವುದರಿಂದ ಅನುಭವವೂ ಅನಂತ.

೬೮. ಪರಮಾರ್ಥ ಸಾಧನೆ ಪ್ರಗತಿ ಪಥದಲ್ಲಿದ್ದರೆ ಸಾಧಕನ ಮನ ಕೋಮಲವೂ ಗಟ್ಟಿಯೂ ಆಗಿರುತ್ತದೆ. ಇಂಥ ವಿರೋಧಿ ದ್ರವ್ಯಗಳು ಉತ್ಪನ್ನವಾಗುತ್ತವೆ.

೬೯. ಆಧ್ಯಾತ್ಮಿಕ ಅನುಭವವು ಯಾವುದೇ ಹೋಲಿಕೆಯಿಂದ ಅರಿವಿಗೆ ಬರಲಾರದು.

೭೦. ಸದ್ಭಕ್ತರು ಒಂದೆಡೆ ಸೇರಿ ನಾಮಸಪ್ತಾಹವನ್ನು ಮಾಡಬೇಕು.

■■

## ಶ್ರೀ ಗುರುದೇವ ಆರ್. ಡಿ. ರಾನಡೆಯವರು ಬರೆದ ಗ್ರಂಥ ಮತ್ತು ಲೇಖನಗಳು

### ಇಂಗ್ಲಿಷ್ ಗ್ರಂಥಗಳು

1. Carlyle's "Signs of Times & Charcterstics" (1916)
2. A Constructive Survey of Upanishadic Philosophy (1926)
3. History of Indian Philosophy- Creative Period Dr. Ranade; S.K. Belwalkar (1933)
4. Mysticism in Maharastra (1933)
5. Pathway to God in Hindi Literature (1954)
6. Paramaratha Sopan (1954)
7. The Conception of Spiritual Life in Mahatma Gandhi and Hindi Saints (1956)
8. Philosophical and other Essays Part-1 (1956)
9. The Bhagwadagita as a Philosophy of God- realisation (1959)
10. Karnataka Mysticim (1960)
11. Essays and Reflections (1964)
12. The Vedanta as a Culmination of Indian Philosophical Thought
13. Gita as science of God Realizatin

### ಇಂಗ್ಲಿಷ್ ಲೇಖನಗಳು

1. Prof. R. D. Ranade & The Fergussion College- A Letter to Times of India (1924)
2. My Reminiscence of Sri Balasaheb Pant Pratinidhi of Aundha (1934)
3. A Philosophy of Spirit-Presidential Address of the 13th Indian Philosophical Congress 1937-38
4. Evolution of my own Thought (Contemporary Indian Philosophy Ed. By Dr. Radhakrishnan and Muirhead 1936, 1952)
5. Pamphlets on Artistotle Parmenides, Heracleitos and other Greek Philosophers

**ಮರಾಠಿ ಗ್ರಂಥಗಳು**

೧. ಶ್ರೀ ಶಂಕರಾಚಾರ್ಯಾಂಚಾ ಆತ್ಮಸಾಕ್ಷಾತ್ಕಾರ, ೧೯೧೮.
೨. ಜ್ಞಾನೇಶ್ವರ ವಚನಾಮೃತ, ೧೯೨೬.
೩. ಸಂತ ವಚನಾಮೃತ, ೧೯೨೬.
೪. ತುಕಾರಾಮ ವಚನಾಮೃತ, ೧೯೨೬.
೫. ರಾಮದಾಸ ವಚನಾಮೃತ, ೧೯೨೬.
೬. ಏಕನಾಥ ವಚನಾಮೃತ, ೧೯೫೫.
೭. ಪರಮಾರ್ಥಪರ ವ್ಯಾಖ್ಯಾನೆ (ಸಂ: ಗ.ವಿ. ತುಳಪುಳೆ, ೧೯೫೭).
೮. ಜ್ಞಾನೇಶ್ವರ ಆಣೀ ಕಬೀರ ಯಾಮಧೀಲ್ ವಿಚಾರ ಸಾಮ್ಯ.
೯. ಧ್ಯಾನಗೀತಾ, ೧೯೬೧.



ಶ್ರೀ ಗುರುದೇವ ರಾನಡೆಯವರು ಲಕ್ಷಾಂತರ ಜನರ ಮನವನರಳಿಸಿದರು. ಅವರ ಅಂತರಂಗದಲ್ಲಿ ಜಿಜ್ಞಾಸೆಯ ದೀಪ ಹೊತ್ತಿಸಿದರು. ಅವರನ್ನೆಲ್ಲ ದೇವ–ಧ್ಯಾನಮಾರ್ಗದಲ್ಲಿ ನಡೆಸಿದರು. ಎಂತಲೇ ಅವರನ್ನು ಸಾಧಕಜಗತ್ತು 'ಗುರುದೇವ' ಎಂದು ಗೌರವಿಸಿತು.....

ಅವರ ಬದುಕನ್ನು ಯಥಾವತ್ತಾಗಿ ಚಿತ್ರಿಸುವ ಸುಂದರ ಕೃತಿ ಈ 'ಜೀವನ ದರ್ಶನ' ಹೊತ್ತಿಗೆ, ಸರಲ ಭಾಷೆ, ಆಪ್ಯಾಯಮಾನ ಕಥನ. ಮನಮುಟ್ಟುವ ಘಟನೆಗಳು, ಆಧ್ಯಾತ್ಮ ಸಾಧಕರಿಗೆ ಪ್ರೇರಕ ಈ ಕೃತಿ.....

ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು
ಜ್ಞಾನಯೋಗಾಶ್ರಮ, ವಿಜಯಪುರ